ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ವ್ಯಕ್ತಿ ವಿಶಿಷ್ಟತೆಯ ನೆಲೆಗಳು

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಪ್ರಬಂಧ)

ನೋಂದಣಿ ಸಂಖ್ಯೆ

141001030073

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೪-೧೫

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ವ್ಯಕ್ತಿ ವಿಶಿಷ್ಟತೆಯ ನೆಲೆಗಳು

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿರುವ ಪ್ರಬಂಧ)

ನೋಂದಣಿ ಸಂಖ್ಯೆ
141001030073

ಸಂಶೋಧಕಿ – ಮಾನಸ. ಹೆಚ್. ಬಿ.
ಮಾರ್ಗದರ್ಶಕರು – ಡಾ. ಅನ್ನಪೂರ್ಣ ಸಿ. ಬಿ.

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬
೨೦೧೫–೧೬

ದೃಢೀಕರಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೂಲಕ **"ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ವ್ಯಕ್ತಿ ವಿಶಿಷ್ಟತೆಯ ನೆಲೆಗಳು"** ಎಂಬ ಎಂ.ಫಿಲ್ ಸಂಪ್ರಬಂಧವನ್ನು **ಮಾನಸ ಹೆಚ್.ಇ.** ಎಂಬ ವಿದ್ಯಾರ್ಥಿನಿಯು ನನ್ನ ಮಾರ್ಗದರ್ಶನ ಹಾಗೂ ಪರಿವೀಕ್ಷಣೆಯಲ್ಲಿ ಬರೆದು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಮರ್ಪಿಸುತ್ತಿದ್ದಾರೆ.

ಈ ಸಂಪ್ರಬಂಧವನ್ನು ಈ ಹಿಂದೆ ಬೇರೆ ಯಾವುದೇ ವಿಶ್ವವಿದ್ಯಾಲಯಕ್ಕೆ ಸಮರ್ಪಿಸಿಲ್ಲ ಹಾಗೂ ಎಲ್ಲಿಯೂ ಪ್ರಕಟಗೊಂಡಿರುವುದಿಲ್ಲ. ಈ ಸಂಪ್ರಬಂಧವನ್ನು **ಎಂ.ಫಿಲ್.** ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಮರ್ಪಿಸುತ್ತಿದ್ದಾರೆ.

ಸ್ಥಳ : ಬೆಂಗಳೂರು

ದಿನಾಂಕ: 27.08.2015

ಅನ್ನಪೂರ್ಣಮ್ಮ

ಡಾ॥ ಅನ್ನಪೂರ್ಣಮ್ಮ ಸಿ.ಬಿ
ಕನ್ನಡ ಉಪನ್ಯಾಸಕರು,
ನ್ಯಾಷನಲ್ ಕಾಲೇಜು, ಬಸವನಗುಡಿ
ಬೆಂಗಳೂರು–560004.

ಪ್ರಮಾಣ ಪತ್ರ

ಮಾನಸ ಹೆಚ್.ಇ. ಆದ ನಾನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೂಲಕ **"ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ವ್ಯಕ್ತಿ ವಿಶಿಷ್ಟತೆಯ ನೆಲೆಗಳು"** ಎಂಬ ಎಂ.ಫಿಲ್ ಸಂಪ್ರಬಂಧವನ್ನು **ಡಾ॥ ಸಿ.ಬಿ. ಅನ್ನಪೂರ್ಣಮ್ಮ** ಕನ್ನಡ ಉಪನ್ಯಾಸಕರು, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಂಗಳೂರು-560004 ಇವರ ಮಾರ್ಗದರ್ಶನದಲ್ಲಿ ಬರೆದು ವಿಶ್ವವಿದ್ಯಾಲಯಕ್ಕೆ ಸಮರ್ಪಿಸುತ್ತಿದ್ದೇನೆ. ಈ ಪ್ರಬಂಧವನ್ನು ನಾನು ಸ್ವತಂತ್ರವಾಗಿ ಬರೆದಿರುತ್ತೇನೆ. ಈ ಸಂಪ್ರಬಂಧವನ್ನು ಈ ಹಿಂದೆ ಬೇರೆ ಯಾವುದೇ ವಿಶ್ವವಿದ್ಯಾಲಯಕ್ಕೆ ಸಮರ್ಪಿಸಿಲ್ಲ ಹಾಗೂ ಎಲ್ಲಿಯೂ ಪ್ರಕಟಗೊಂಡಿರುವುದಿಲ್ಲ. ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಮರ್ಪಿಸುತ್ತಿದ್ದೇನೆ.

ಮಾನಸ ಹೆಚ್.ಇ

ಮಾನಸ.ಹೆಚ್.ಇ

ಸಂಶೋಧನ ವಿದ್ಯಾರ್ಥಿ

ಸ್ಥಳ : ಬೆಂಗಳೂರು

ದಿನಾಂಕ: 27-08-2015

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿನ ವ್ಯಕ್ತಿ ವಿಶಿಷ್ಟತೆಯ ನೆಲೆಗಳು

ಪರಿವಿಡಿ

ಪ್ರಸ್ತಾವನೆ :

ಸಾಹಿತ್ಯ ಎಂಬುದು ಬದುಕನ್ನು ಅನಾವರಣಗೊಳಿಸುವ ಕನ್ನಡಿಯಿದ್ದಂತೆ ಬದುಕಿನ ಎಲ್ಲವನ್ನು ಸಹಿತ ಮಾಡಿಕೊಂಡು ಒಂದು ಬರವಣಿಗೆ ಸೃಷ್ಟಿಯಾಗುತ್ತದೆ. ನಮ್ಮ ಬದುಕನ್ನು ನಾವು ಈ ಬರವಣಿಗೆಯ ಮೂಲಕ ಕಂಡುಕೊಳ್ಳಬಹುದು. ಯಾವ ಸಾಹಿತ್ಯವು ಇದರಿಂದ ಹೊರತಲ್ಲ. ಹೀಗೆ ನಮ್ಮ ಬದುಕಿಗೆ ಹಿಡಿದಂತಹ ಕನ್ನಡಿಯೇ ಸಾಹಿತ್ಯವಾಗಿದೆ. ಆ ಬರವಣಿಗೆಯಲ್ಲಿ ನಮ್ಮ ಮುಖವನ್ನು ನಾವೇ ನೋಡಿಕೊಳ್ಳಬಹುದು. ಸಾಹಿತ್ಯದ ಒಂದು ಬಹಳ ಮುಖ್ಯ ಪ್ರಕಾರವಾದಂತಹ ಸಣ್ಣ ಕತೆಯೂ ಸಹ ಇದರಿಂದ ಹೊರತಲ್ಲ. ಬದುಕಿನ ವಿವಿಧ ಆಯಾಮಗಳನ್ನು ಆ ಕತೆಗಳ ಮೂಲಕ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಬದುಕಿನ ಹಲವು ಮುಖಗಳಿಗೆ ಹಿಡಿಯುವಂತಹ ಕನ್ನಡಿಯಾಗಿ ಸಣ್ಣ ಕತೆಗಳು ಸಾಹಿತ್ಯಲೋಕದಲ್ಲಿ ಬಹಳ ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ.

ಭಾರತೀಯ ಸಾಹಿತ್ಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಥನ ಸಾಹಿತ್ಯಕ್ಕೆ ಅತ್ಯಂತ ವಿಶಿಷ್ಟವಾದ ಪ್ರಾಶಸ್ತ್ಯ ದೊರಕಿದೆ. ಹೇಳುವವನ ಆಸಕ್ತಿ ಕೇಳುವವನ ಕುತೂಹಲದೊಂದಿಗೆ ಜನಪದ ಕತೆಗಳು ಹುಟ್ಟಿಕೊಂಡವು. ನಂತರ ಶಿಷ್ಟ ಕತೆಗಳು ರೂಪುಗೊಂಡವು. ತದನಂತರದಲ್ಲಿ ಸಣ್ಣಕತೆಗಳೆಂಬ ವಿಶಿಷ್ಟ ಪ್ರಕಾರ ಕಾಣಿಸಿಕೊಂಡಿತು.

ಆಧುನಿಕ ಸಣ್ಣ ಕತೆಗಳ ಮಟ್ಟಿಗೆ ಹೇಳುವುದಾದರೆ, 20ನೇ ಶತಮಾನದಲ್ಲಿ ಹಲವಾರು ನೆಲೆಗಳ ಪ್ರಭಾವದಿಂದ ಭಾರತದಲ್ಲಿ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಒಂದು ರೀತಿಯ ಹೊಸ ಮಾರ್ಪಾಡು ಉಂಟಾಯಿತು. ಈ ಹೊಸ ಸಂವೇದನೆಗಳಿಗೆ ಮತ್ತು ವಿಚಾರಗಳಿಗೆ ಹೊಸ ಅಭಿವ್ಯಕ್ತಿ ದೊರೆಯಿತು. ಸಣ್ಣಕತೆ ಇಂತಹ ಅರ್ಥ ಪೂರ್ಣ ಹೊಸ ಸಂಶೋಧನೆಗಳಲ್ಲಿ ಬಹುಮುಖ್ಯವಾದದ್ದು. ಭಾರತದಲ್ಲಿ ಮೊದಲಿನಿಂದಲೂ ಕಥನ ಪರಂಪರೆ ಇತ್ತು. ನಮ್ಮ ಪುರಾಣ, ಇತಿಹಾಸಗಳಲ್ಲಿ ಮತ್ತು ಜನಪದ ಸಾಹಿತ್ಯದಲ್ಲಿ ಕಥಾ ಪ್ರಪಂಚವೇ ಮುಖ್ಯವಾಗಿದೆ. ಆದರೆ ಸಣ್ಣಕಥೆ ಎಂಬುದು ಆಧುನಿಕ ಪ್ರಜ್ಞೆಯ ಸಾಹಿತ್ಯ ಪ್ರಕಾರವಾಗಿ ರೂಪುಗೊಂಡಿದ್ದು, ಪಾಶ್ಚಿಮಾತ್ಯ ಪ್ರಭಾವದಿಂದಲೆ ಎಂಬುದನ್ನು ಮರೆಯುಂತಿಲ್ಲ. ಹೀಗೆ ಸಂಕೀರ್ಣತೆ, ವಿಷಯ ವೈವಿಧ್ಯತೆ ಮತ್ತು ತಂತ್ರ ವೈಶಿಷ್ಟ್ಯತೆಗಳಿಂದಾಗಿ ಸಣ್ಣಕತೆಗಳು ವೇಗವಾಗಿ ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ರೂಪುಗೊಂಡಿತು.

ಈ ಸಣ್ಣಕತೆಗಳ ಉಗಮಕ್ಕೆ ಬ್ರಿಟೀಷರ ಆಗಮನ ಹಾಗೂ ಅವರು ಜಾರಿಗೆ ತಂದ ಕಡ್ಡಾಯ ಇಂಗ್ಲಿಷ್ ಕಲಿಕೆಯ ನೀತಿ ಬಹು ಮುಖ್ಯ ಕಾರಣವೆಂದು ಹೇಲಬಹುದು. ಇದರಿಂದಾಗಿ ಯೂರೋಪಿನ ಸಾಹಿತ್ಯವನ್ನು ಓದಲು ಸಾಧ್ಯವಾಯಿತು. ಅಂದಿನ ದಿನಗಳಲ್ಲಿ ಕ್ಷಿಪ್ರವಾಗಿ ಬೆಳವಣಿಗೆಯಾಗಿ ವೈಜ್ಞಾನಿಕ ಅನ್ವೇಷಣೆಯಾಗಿ ಯಂತ್ರಗಳ ಬಳಕೆ ಜಾರಿಗೆ ಬಂದಿತು. ಆಧುನಿಕ ಅಭಿರುಚಿಯಂತೆ ಯೂರೋಪಿನ ರೊಮ್ಯಾಂಟಿಕ್ ಸಾಹಿತ್ಯ ತನ್ನತ್ತ ಸೆಳೆಯಿತು. ಇದರಿಂದಾಗಿ ಇಂಗ್ಲೀಷಿನ ಕತೆಗಳ ಪರಿಚಯವಾಯಿತು. ನಮ್ಮ ಪಾರಂಪರಿಕ ಕತೆಗಳಿಗೂ ಇಂಗ್ಲೀಷಿನ ಕತೆಗಳಿಗೂ ಕೆಲವು ಭಿನ್ನತೆಗಳಿದ್ದು, ಅವುಗಳ ಸ್ವರೂಪವನ್ನು ಕಂಡಂತಹ ನಮ್ಮವರ ಕನ್ನಡದಲ್ಲೂ ಈ ರೀತಿಯ ಕತೆಗಳು ಬರಲಿ ಎಂಬ ಆಶಯವೇ ಸಣ್ಣಕತೆಗಳ ಉಗಮಕ್ಕೆ ಕಾರಣವಾಯಿತು. ಭಾರತೀಯ ಕಥನಗಳು ಕೆಲವೊಂದು ಉದ್ದೇಶಗಳನ್ನು ಹೊಂದಿರುತ್ತವೆ. ಅಂದರೆ ಶುಭದೊಂದಿಗೆ ಪ್ರಾರಂಭವಾಗುವುದೋ ಅಥವಾ ಸುಖಾಂತವನ್ನೋ ಅವು ಬಯಸುತ್ತವೆ. ಅದೇ ರೀತಿ ಒಂದು ದೈವಿಕ ಕಲ್ಪನೆಯನ್ನು ಅವು ಹೊಂದಿರುತ್ತವೆ. ಆದರೆ ಈ ರೀತಿಯ ಕಡ್ಡಾಯವೆಂಬುದು ಪಾಶ್ಚಾತ್ಯರ ಕತೆಗಳಲ್ಲಿ ಕಾಣಲು ಸಾಧ್ಯವಿಲ್ಲ. ಒಟ್ಟಾರೆಯಾಗಿ ಬ್ರಿಟೀಷರ ಆಗಮನ, ಇಂಗ್ಲಿಷ್ ಕಲಿಕೆ, ಸಣ್ಣಕತೆಗಳು ಬರಲಿಕ್ಕೆ ಕಾರಣವಾಗಿವೆ.

70ರ ದಶಕದಲ್ಲಿ ಹೊಸ ಆಂದೋಲನವಾಗಿ ರೂಪುಗೊಂಡ ರೈತ ಚಳುವಳಿ, ದಲಿತ ಚಳುವಳಿ, ಮಹಿಳಾ ಚಳುವಳಿಗಳು 90 ರ ದಶಕದ ಹೊತ್ತಿಗೆ ಕ್ಷೀಣಿಸತೊಡಗಿದವು. ಈ ಸಂದರ್ಭದಲ್ಲಿ ಬಂದಂತಹ ಹೊಸ ಆರ್ಥಿಕ ನೀತಿಯ ಪರಿಣಾಮದಿಂದಾಗಿ ವಿಶ್ವದಾದ್ಯಂತ ಮುಕ್ತ ಮಾರುಕಟ್ಟೆ ತೆರೆದುಕೊಂಡಿತು. ಇಡೀ ವಿಶ್ವವೇ ಒಂದು ಅಂಗಡಿಯಾಗಿ ಕಾಣತೊಡಗಿತು. ಮುಕ್ತ ಮಾರುಕಟ್ಟೆಯ ಜೊತೆಯಲ್ಲಿ ಬಂದ ಖಾಸಗೀಕರಣ, ಜಾಗತೀಕರಣ, ಉದಾರೀಕರಣಗಳು ಒಟ್ಟಿಗೆ ಬಂದು ಜನರ ಬದುಕಿನ ವಿನ್ಯಾಸವನ್ನು ಬದಲಿಸಿದವು. ಇದರಿಂದ ಪ್ರತಿಯೊಬ್ಬ ವ್ಯಕ್ತಿಯ ಸಣ್ಣ ಸಣ್ಣ ವೈಶಿಷ್ಟ್ಯತೆಗಳು ಜಗತ್ತಿಗೆ ತೆರೆದುಕೊಂಡವು. ಬಹಳ ಸಂಕ್ಷಿಪ್ತವಾದ ಕಾಲಾವಧಿಯಲ್ಲಿ ಓದುಗರಿಗೆ ಹೆಚ್ಚು ಸಮಯವನ್ನು ತೆಗೆದುಕೊಳ್ಳದಂತೆ ಒಂದಷ್ಟು ಖಚಿತವಾಗಿರುವಂತಹ ವಿವರಣೆಗಳನ್ನು ನೀಡಬಹುದಾದಂತಹ ಸಣ್ಣಕತೆಗಳು ರಚನೆಯಾದವು.

ಕತೆಯ ವಸ್ತು ಕಿರಿದಾಗಿದ್ದರೂ, ಸಂಕ್ಷಿಪ್ತತೆ ಇದರ ಮುಖ್ಯ ಗುಣವಾಗಿದ್ದರೂ ಇದರ ಬಹಳ ಮುಖ್ಯವಾದ ಸಾಧ್ಯತೆಯೆಂದರೆ ಪರಿಣಾಮದಲ್ಲಿನ ಅಗಾಧತೆ ಮತ್ತು ಅನನ್ಯತೆ. ಒಬ್ಬ ವ್ಯಕ್ತಿಯ ಕತೆ ಎನಿಸಿದರೂ ಆ ವ್ಯಕ್ತಿ ಎಲ್ಲರಲ್ಲಿಯೂ ಇರುವವನಾದ ಕಾರಣ ಓದುಗನಿಗೆ ಇದು ತನ್ನದೇ ಕತೆ ಎಂಬಂತೆ ಭಾಸವಾಗುವ, ತನ್ನ ಬದುಕಿಗೆ ಹಿಡಿದ ಕನ್ನಡಿ ಎಂದೆನಿಸುವ, ಆ ಕನ್ನಡಿಯಲ್ಲಿ ಕಾಣುವ ತನ್ನ ಬದುಕಿನ

ಓರೆ ಕೋರೆಗಳನ್ನು ಸರಿಪಡಿಸಿಕೊಂಡು ಒಪ್ಪವಾಗಿಸಿಕೊಳ್ಳುವ ಸಾಧ್ಯತೆ ಈ ಕತೆಯಿಂದ ಆಗುವ ಒಟ್ಟು ಪರಿಣಾಮವೆಂದುಕೊಳ್ಳಬಹುದು.

ವ್ಯಾಖ್ಯೆಗಳು:

- "ಓದಲು ಅರ್ಧಗಂಟೆಯಿಂದ ಒಂದು ಅಥವಾ ಎರಡು ಗಂಟೆಗಳ ಕಾಲ ತೆಗೆದುಕೊಳ್ಳುವ ಸಂಕ್ಷಿಪ್ತವಾದ ಗದ್ಯ ನಿರೂಪಣೆ" ಎಂದು ಸಣ್ಣಕತೆಯ ಜನಕ ಅಮೇರಿಕಾದ ಎಡ್ಗರ್ ಅಲೆನ್ ಪೋ ಹೇಳಿದ್ದಾರೆ.
- ಮಿತವ್ಯಯದ ದೃಷ್ಟಿ ಇಲ್ಲಿ ಮುಖ್ಯವಾಗುತ್ತವೆ.
- ಆಯ್ದ ಘಟನೆಗಳನ್ನು ವಿಶಿಷ್ಟವಾಗಿ ನಿರೂಪಿಸುವ ಸಿಂಗಲ್ ಎಫೆಕ್ಟ್ ತರುವ ಪ್ರಯತ್ನವನ್ನು ಸಣ್ಣ ಕತೆಗಳು ಮಾಡುತ್ತವೆ.
- ಸಣ್ಣಕತೆ ಎಂಬ ಪದಕ್ಕೆ ಇಂಗ್ಲೀಷಿನಲ್ಲಿ "Short Story" ಪದದ ಭಾಷಾಂತರವಾಗಿದೆ. ಸಣ್ಣ ಎಂಬ ಪದಕ್ಕೆ Small, Little, Tiny, Minute ಮುಂತಾದ ಪದಗಳಿದ್ದರೂ, Small ಎಂಬ ಪದವನ್ನು ಬಿಟ್ಟರೆ, ಉಳಿದವು ಅಷ್ಟು ಸಮಂಜಸವಲ್ಲವೆಂದು Small ಪದಕ್ಕೆ Short ಎಂಬ ಪದವು ಹೆಚ್ಚು ಸಾಪೇಕ್ಷವಾಗುವುದರಿಂದ ಇದನ್ನು ಬಳಸಲಾಗಿದೆ. (ಅಮೂರರ ಹೇಳಿಕೆ).

ಸಣ್ಣಕತೆಯನ್ನು ಈ ಹೆಸರಿನಿಂದ ಕರೆಯಲು ಪ್ರಮುಖವಾಗಿ ಎರಡು ಕಾರಣಗಳಿವೆ:

1) ಕತೆಯ ವಸ್ತು ಸಣ್ಣದಾಗಿದೆ.
2) ನಿರ್ದಿಷ್ಟ ಉದ್ದೇಶಿತ ಪರಿಣಾಮಕ್ಕಾಗಿಯೇ ವಸ್ತುವನ್ನು ಚಿಕ್ಕದಾಗಿಸಿರಬಹುದು.

- ಮೊದಲನೆಯ ಅಂಶಕ್ಕೆ ಸಂಬಂಧಿಸಿದಂತೆ ಕತೆಯ ವಸ್ತುವೇ ಚಿಕ್ಕದಾಗಿರುತ್ತದೆ. ಅದರ ಸುತ್ತಹೆಣೆದ ಕತೆ ಇದಾಗಿರುವುದರಿಂದ ಅದು ಸಂಕ್ಷಿಪ್ತವಾಗಿರುತ್ತದೆ.
- ಎರಡನೇ ಅಂಶಕ್ಕೆ ಸಂಬಂಧಿಸಿದಂತೆ ತಂತ್ರ ನಿರ್ವಹಣೆ ಬಹಳ ಮುಖ್ಯವಾಗಿರುತ್ತದೆ. ಇಲ್ಲಿ ಸಣ್ಣ ವಸ್ತುವನ್ನು ಪರಿಣಾಮಕಾರಿಯಾಗಿ ನಿರ್ದಿಷ್ಟಿತ ಉದ್ದೇಶವನ್ನು ಅದು ಸಾಧಿಸಬೇಕಗಿರುತ್ತದೆ. ಒಟ್ಟಾರೆಯಾಗಿ ಸಣ್ಣಕತೆಯ ಸಂಕ್ಷಿಪ್ತತೆಯೇ ಅದರ ಎಲ್ಲಾ ಘಟಕಗಳ ಸ್ವರೂಪವನ್ನು ನಿರ್ಧರಿಸುತ್ತದೆ. ಆದ್ದರಿಂದ ಅದು ಇತರ ಕತೆಗಳಿಗಿಂತ ಭಿನ್ನವಾಗಿರುತ್ತದೆ.

ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ, ಸ್ತ್ರೀ ಸಂಪಾದನೆ, ಹೀಗೆ ಕನ್ನಡದಲ್ಲಿ ಬಗೆಬಗೆಯ ಧೋರಣೆಗನುಗುಣವಾಗಿ ಅನೇಕ ಸಣ್ಣ ಕತೆಗಳು ರಚನೆಯಾಗಿವೆ. ಪಂಜೆ ಮಂಗೇಶರಾಯರು, ಆನಂದಕಂದ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಕುವೆಂಪು, ಬೆಸಗರಹಳ್ಳಿ ರಾಮಣ್ಣ, ಕೊಡಗಿನ ಗೌರಮ್ಮ, ತ್ರಿವೇಣಿ, ಅನುಪಮಾ ನಿರಂಜನ, ವೈದೇಹಿ, ನಾಗವೇಣಿ, ದೇವನೂರ ಮಹಾದೇವ, ಕುಂ.ವೀರಭದ್ರಪ್ಪ, ಯಶವಂತ ಚಿತ್ತಾಲ, ಜಯಂತ್ ಕಾಯ್ಕಿಣಿ ಹೀಗೆ ಇಂದಿನವರೆಗೆ ಈ ಭಿನ್ನ ಬಗೆಯ ಕತೆಗಾರರನ್ನು ಗುರುತಿಸಬಹುದು.

ನವ್ಯೋತ್ತರದ ಕಂಡು ಬರುವ ಕತೆಗಾರರಲ್ಲಿ ಕಾಯ್ಕಿಣಿ ಪ್ರಮುಖರು.

ಕನ್ನಡ ಕಥಾ ಸಾಹಿತ್ಯಕ್ಕೆ ನಗರ ಪ್ರಜ್ಞೆಯನ್ನು ತಮ್ಮ ಬರವಣಿಗೆಯ ಮೂಲಕ ಪರಿಚಯಿಸುತ್ತಿರುವ ಬಹುಮುಖ ಪ್ರತಿಭೆಯ "ಜಯಂತ ಕಾಯ್ಕಿಣಿಯವರು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ದಲ್ಲಿ 1955 ರಲ್ಲಿ ಜನಿಸಿದರು. ಇವರು ಖ್ಯಾತ ವಿಚಾರವಾದಿ ಹಾಗೂ ಹೆಸರಾಂತ ಸಾಹಿತಿಗಳಾದ ಡಾ॥ ಗೌರೀಶ್, ಕಾಯ್ಕಿಣಿಯವರ ಮಗ. ಸಮಾಜಸೇವಕಿ ಶಾಂತಾಬಾಯಿ ಇವರ ತಾಯಿ. ತಂದೆ ವೃತ್ತಿಯಲ್ಲಿ ಹೈಸ್ಕೂಲು ಶಿಕ್ಷಕರಾಗಿದ್ದ ಕನ್ನಡದ ಮಹತ್ವದ ಚಿಂತನಶೀಲ ಬರಹಗಾರರೆಂದು ಹಾಗೂ ವಿಚಾರವಾದಿ ಸಾಹಿತ್ಯದ ಆದ್ಯ ಪ್ರವರ್ತಕರೆಂದು ಗೌರವದಿಂದ ಗುರುತಿಸಿಕೊಳ್ಳುತ್ತಾರೆ. ಇವರು ಕನ್ನಡ ಸಾಹಿತ್ಯದಲ್ಲಿ ಕವಿಗಳಾಗಿ, ನಾಯಕರಾಗಿ, ವಿಮರ್ಶಕರಾಗಿ, ಅಂಕಣಕಾರರಾಗಿ, ಪ್ರಬಂಧಕರಾಗಿ, ಅನುವಾದಕರಾಗಿ ಇವರು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಲ್ಲದೆ ಇವರಿಗೆ ಕನ್ನಡ, ಇಂಗ್ಲೀಷ್, ಸಂಸ್ಕೃತ ಕೊಂಕಣಿ, ಮರಾಠಿ ಹೀಗೆ ಹಲವು ಭಾಷಾ ಪಾಂಡಿತ್ಯವನ್ನು ಇವರು ಹೊಂದಿದ್ದರು. ತಮ್ಮ ಬದುಕಿನ ಕೊನೆಯ ಉಸಿರಿನ ತನಕ ಅಂದರೆ ಸತತವಾಗಿ ಎಪ್ಪತ್ತು ವರ್ಷಗಳಷ್ಟು ಸಮಯ ನಿರಂತರವಾಗಿ ಬರೆಯುತ್ತ ತಮ್ಮ ವಿಶಿಷ್ಟವಾದ ವೈಚಾರಿಕತೆಯಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಸಿದ್ದಾರೆ. ಶಾಂತಾಬಾಯಿ ಪ್ರಾರಂಭದಲ್ಲಿ ಶಿಕ್ಷಕಿಯಾಗಿದ್ದು, ಜಯಂತರ ಜನನದ ನಂತರ ಮಗನ ಪಾಲನೆ–ಪೋಷಣೆ ಯಲ್ಲಿ ಮನೆಯಲ್ಲಿ ಉಳಿಯುವಂತಾಯಿತು. ಆದರೂ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದ ಇವರು ಪತಿಯ ನೆರಳಾಗಿ ಸ್ಪಂದಿಸುತ್ತಾ ಬಿಡಿ ಲೇಖನಗಳ ಬರಹಗಾರ್ತಿಯಾಗಿ ಸಮಾಜ ಕಾರ್ಯಕರ್ತೆಯಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು".[1]

ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಕುಟುಂಬದ, ತಂದೆ, ತಾಯಿಯರ ಪಾತ್ರ ಬಹಳ ಮುಖ್ಯವಾದುದು. ಜಯಂತರ ಸಾಹಿತ್ಯಾಸಕ್ತಿಗೆ ಮೊದಲ ಪ್ರೇರಣೆ ಒದಗಿ ಬಂದದ್ದೇ ಈ ನೆಲೆಯಿಂದ. ಇಂತಹ ಸಾಹಿತ್ಯದ

ವಾತಾವರಣದಲ್ಲಿ ಜಯಂತ್ ಕಾಯ್ಕಿಣಿಯವರ ಬಾಲ್ಯ ಕಳೆಯಿತು. "ತಂದೆ ಸಾಹಿತಿಯಾಗಿದ್ದ ಕಾರಣದಿಂದ ಸದಾ ಸಾಹಿತ್ಯಸಕ್ತರಿಂದ ಮನೆ ಸದಾ ತುಂಬಿ ತುಳುಕುತ್ತಿತ್ತು. ಸದಾ ಓದುವುದು, ತಾವು ಓದಿನಿಂದ ಪಡೆದ ಜ್ಞಾನವನ್ನು ಇತರರಿಗೆ ಹಂಚುವುದು ಗೌರೀಶರ ಜೀವನದ ಧ್ಯೇಯವಾಗಿತ್ತು. ಅಲ್ಲದೆ ಶಾಲೆಯ ಕಾರ್ಯಕ್ರಮಕ್ಕೆ ಆಗಮಿಸಿ, ನಂತರ ಕಾರ್ಯಕ್ರಮ ಮುಗಿಸಿ ಮನೆಗೆ ಆಗಮಿಸುತ್ತಿದ್ದ ಆ ಕಾಲದ ಸುಪ್ರಸಿದ್ಧಾ ಸಾಹಿತಿಗಳ ಸಹವಾಸದ ಸವಿಯನ್ನು ಅರಿತಿದ್ದರು . ಇಂತಹ ವಾತಾವರಣದಲ್ಲಿ ಜಯಂತರು ಬೆಳೆದರು. ಯಾವುದೇ ಜಯಂತರಿಗೆ ತಮ್ಮ ಪ್ರತಿಭೆಯ ಫಲದಿಂದ ಭಾಷಣ, ಪ್ರಬಂಧ ಮುಂತಾದವುಗಳಲ್ಲಿ ಭಾಗವಹಿಸಿದರೂ ಅದು ತಂದೆಯವರೇ ಬರೆದುಕೊಟ್ಟಿರಬಹುದೆಂಬ ಅಪವಾದಗಳು ಕೇಳಿಬರುತ್ತವಂತೆ. ಆದರೂ ಪರೋಕ್ಷವಾಗಿ ಸಾಹಿತ್ಯದ ಪ್ರಭಾವವಿರುವ ತಂದೆ ಬೀರಿದರಾದರೂ, ತಮ್ಮದೇ ಜ್ಞಾನ ಮೂಸೆಯಲ್ಲಿ ಹುದುಗಿದ್ದ ಪ್ರತಿಭೆ ತನ್ನ ಆಗಮನಕ್ಕಾಗಿ ಸೂಕ್ತವಾದ ಕಾಲವನ್ನು ಅದು ಎದುರು ನೋಡುತ್ತಿತ್ತು".[2]

"ಕನ್ನಡ ಸಾಹಿತ್ಯ ಲೋಕದಲ್ಲಿ ಡಿ.ವಿ.ಜಿ–ಬಿ.ಜಿ.ಎಲ್, ಸ್ವಾಮಿ, ಕುವೆಂಪು–ತೇಜಸ್ವಿ, ಇವರಂತೆಯೇ ಗೌರೀಶ–ಜಯಂತ್ ಕಾಯ್ಕಿಣಿಯವರ ತಂದೆ ಮಗನ ಅಪರೂಪವಾದ ಜೋಡಿ ಪ್ರತಿಭಾವಂತನ ಮಗನಾಗಿ ಹುಟ್ಟಿ, ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ದಾಖಲಿಸಿದವರಲ್ಲಿ ತೇಜಸ್ವಿಯವರಂತೆಯೇ ಜಯಂತರೂ ಕೂಡ ಯಶಸ್ವಿಯಾದವರು. ಜಯಂತರು ಗೆಳೆಯರೊಡನೆ ಕೂಡಿ ಗೋಕರ್ಣದ ದೇವಾಲಯಗಳನ್ನು ಸುತ್ತುವುದು, ಸಿನಿಮಾ, ನಾಟಕಗಳ ವೀಕ್ಷಣೆ, ಯಕ್ಷಗಾನ, ಹರಿಕಥೆಗಳಿಗೆ ಹೋಗುವುದು, ಸಮುದ್ರ ತೀರದಲ್ಲಿ ಸುತ್ತುವುದು, ಇವೆಲ್ಲ ಅವರ ಆಸಕ್ತಿಯ ಕೇಂದ್ರಗಳಾಗಿದ್ದವು.

ಇವರು ಶಾಲೆ ಮುಗಿಸಿ ಕುಮುಟಾದ ಕಾಲೇಜಿಗೆ ಸೇರಿದ ನಂತರದಲ್ಲಿ ಅವರೇ ಹೇಳಿರುವಂತೆ, 3 ಆಘಾತಗಳನ್ನು ಎದುರಿಸುವಂತಾಯಿತು. 1) ಚಿಕ್ಕ ಊರಿನಿಂದ ದೊಡ್ಡ ಊರಿಗೆ ಹೋದದ್ದು 2) ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಸೇರ್ಪಡೆ 3) ಮನೆಬಿಟ್ಟು ಹಾಸ್ಟೆಲ್‌ನಲ್ಲಿ ವಾಸ".[3] ಕೊನೆಗೆ ಹೊಂದಿಕೆಯಾಗದೆ ಮನೆಯಲ್ಲೇ ಉಳಿಯಬೇಕಾಗಿ ಬಂದಾಗ ಅಂದಿನ ನವ್ಯ ಕವಿ ಜಿ.ಎಸ್. ಅವಧಾನಿಯವರ ಕವನ ಸಂಕಲನ ಬೆಂಕಿಬಳ್ಳಿ, ಓದುವ ಅವಕಾಶ ಲಭಿಸಿತು. ಅದರಿಂದ ಪ್ರೇರಿತರಾಗಿ ಕವನ ಬರೆಯುವ ಆಸಕ್ತಿ ಮೂಡಿತು. (ಮಮತಾರಾವ್ ಕಥನಾವರಣ)

"1971 ರಲ್ಲಿ ಬರೆದ 'ಬಸಳೆ' ಮೊದಲ ಕವನ ಸಾಕ್ಷಿ ಪತ್ರಿಕೆಯಲ್ಲಿ ಪ್ರಕಟಗೊಂಡು ಅವರೊಬ್ಬ ಕವಿ ಎನ್ನುವ ಮಟ್ಟಿಗೆ ಅದು ಮುಂದುವರೆಯುವಂತೆ ಮಾಡಿತು. ಜಯಂತರ ಪ್ರಥಮ ಕವನ ಸಂಕಲನ

'ರಂಗದಿಂದೊಂದಿಷ್ಟು ದೂರಕ್ಕೆ', 1974ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತದ್ದು, ಅವರ ಅಸಾಧಾರಣ ಪ್ರತಿಭೆಗೆ ಸಾಕ್ಷಿಯಾಗಿದೆ".[4]

"ಕುಮುಟಾದಲ್ಲಿ ಪದವಿಯನ್ನು ಪಡೆದರು. ನಂತರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಯೋಕೆಮಿಸ್ಟ್ರಿಯಲ್ಲಿ ಸ್ನಾತಕ್ಕೋತ್ತರ ಪದವಿಯನ್ನು ಮುಗಿಸಿದರು. ಈ ಎರಡು ವರ್ಷದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾಹಿತ್ಯಾಭಿರುಚಿಯನ್ನು ಮೈಗೂಡಿಸಿಕೊಂಡಿದ್ದರು. ನಂತರ 1976 ರಲ್ಲಿ ಕೆಲಸ ಅರಸಿ ಮುಂಬೈಗೆ ಹೋದರು. 1997–98ರವರೆಗೆ ಮುಂಬೈನಲ್ಲಿಯೇ ಸ್ವತಂತ್ರ್ಯ ಬರಹಗಾರರಾಗಿ, ಲಿಂಟಾಸ್, ಮುದ್ರಾ ಮತ್ತು ತ್ರಿಕಾಯ ಜಾಹಿರಾತು ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇದೇ ಸಮಯದಲ್ಲಿ ಅಂದರೆ 1997 ರಲ್ಲಿ ಚೀನಾ ದೇಶಕ್ಕೆ ಕಳುಹಿಸಲ್ಪಟ್ಟ ಭಾರತೀಯ ಲೇಖಕರ ಪ್ರತಿನಿಧಿಯಾಗಿ ಕನ್ನಡದವರಾದ ಜಯಂತ್ ಕಾಯ್ಕಿಣಿಯವರು ಕೂಡ ಆಯ್ಕೆಗೊಂಡಿದ್ದರು ಎನ್ನುವುದು ಅಭಿಮಾನದ ಸಂಗತಿ. ಮುಂದೆ 1997–99 ರ ಕಾಲಾವಧಿಯಲ್ಲಿ ಈ ಟಿ.ವಿ. ಕನ್ನಡ ವಾಹಿನಿಯ ಕಾರ್ಯಕ್ರಮ ಸಮಿತಿಯ ಸದಸ್ಯರಾಗಿ, ರಾಮೋಜಿ ಫಿಲ್ಮ್ ಸಿಟಿ ಹೈದರಾಬಾದಿನಲ್ಲಿ ಕಾರ್ಯಭಾರವನ್ನು ಮುಂದುವರೆಸಿದರು. (ಅಂತಃಕರಣ) ಜಯಂತ್ ಕಾಯ್ಕಿಣಿಯವರು ಕತೆಗಾರರರಾಗಿ, ನಾಟಕಗಾರರಾಗಿ, ಅನುವಾದಕರಾಗಿ ಅಂಕಣಕಾರರಾಗಿ ಹೆಸರನ್ನು ಮಾಡಿದ್ದಾರೆ".[5]

ಅವರು ಬರೆದಿರುವ ಪ್ರಮುಖ ಕೃತಿಗಳೆಂದರೆ.

ಕವಿತಾ ಸಂಗ್ರಹ: "ರಂಗಮಂದಿರದಿಂದೊಂದಿಷ್ಟು ದೂರ (1974), ಕೋಟಿತೀರ್ಥ (1982) ಶ್ರಾವಣ ಮಧ್ಯಾಹ್ನ (1987) ನೀಲಿ ಮಳೆ (1992), ಒಂದು ಜಲೇಬಿ (2004)

ಕಥಾ ಸಂಕಲನಗಳು : ತೆರೆದಷ್ಟೇ ಬಾಗಿಲು (1982) ಗಾಳ (1982), ದಗಡೂ ಪರಬನ ಅಶ್ವಮೇಧ (1989), ಅಮೃತ ಬಳ್ಳಿಯ ಕಷಾಯ (1996), ಬಣ್ಣದ ಕಾಲು (1999) ತೂಫಾನ್ ಮೇಲ್ (2005), ಚಾರ್ ಮಿನಾರ್ (2012)

ನಾಟಕಗಳು : ಸೇವಂತಿ ಪ್ರಸಂಗ (1995),ಜತೆಗಿರುವವನು ಚಂದಿರ (2001) ಇತೀ ನಿನ್ನ ಅಮೃತಾ (2003), ಆಕಾಶ ಬುಟ್ಟಿ (2004)

ಅಂಕಣ ಬರಹ : ಬೊಗಸೆಯಲ್ಲಿ ಮಳೆ (2001), ಶಬ್ದತೀರ (2006), ಟೂರಿಂಗ್ ಟಾಕೀಸ್, (2015), ಲಭಿಸಿದೆ".[6] ಅಲ್ಲದೆ ತುಮಕೂರು ವಿಶ್ವವಿದ್ಯಾಲಯವು (2011) ಇತ್ತೀಚೆಗೆ ಗೌರವ ಡಾಕ್ಟರೇಟ್ ಪದವಿ ನೀಡಿ

ಸನ್ಮಾನಿಸಿದೆ. ಕೃತಿಕಾರರನ್ನಾಗಿ ಇವರನ್ನು ರೂಪಿಸುವಲ್ಲಿ ಕುಟುಂಬಕಷ್ಟೆ ಮಹತ್ತರವಾದ ಪಾತ್ರ ವಹಿಸಿದ್ದು ಇವರ ಬದುಕನ್ನು ಕಟ್ಟಿಕೊಳ್ಳಲು ಅರಸಿಹೋದ ಮುಂಬಯಿ ನಗರ ಜೀವನದ ಒತ್ತಡಗಳಲ್ಲಿ ಕ್ರಿಯಾಶೀಲತೆಯನ್ನೇ ಕಳೆದುಕೊಳ್ಳುವ ಮಂದಿ ಬಹಳಷ್ಟು, ಆದರೆ ಈ ಜನಸಾಂದ್ರತೆಯಿಂದ ಕೂಡಿದ, ಹಲವು ಬಗೆಯ ಇಕ್ಕಟ್ಟುಗಳಿಗೆ ಸಿಕ್ಕಿಸುವ ಈ ನಗರದ ಸಂಕೀರ್ಣತೆಯನ್ನೇ ಸಕಾರಾತ್ಮಕವಾಗಿ ಸ್ವೀಕರಿಸಿ, ತಮ್ಮ ಕ್ರಿಯಾಶೀಲತೆಯ ಕುಲುಮೆಯಲ್ಲಿ ಅನೇಕ ಕೃತಿಗಳನ್ನು ರಚಿಸಿದವರು ಕಾಯ್ಕಿಣಿ.

ಜಯಂತ್ ಕಾಯ್ಕಿಣಿಯವರು "ಟೆಲಿವಿಷನ್ ಸಂದರ್ಶಕರಾಗಿದ್ದು (ಕುವೆಂಪು, ಕಾರಂತ, ಬೇಂದ್ರೆ, ರಾಜ್ ಕುಮಾರ್ ಕುರಿತು ಈ ಟಿವಿಯ ನಮಸ್ಕಾರ ಸರಣಿ, ಕಾರ್ಯಕ್ರಮವನ್ನೂ, ಹಾಗೆಯೇ ಚಿತ್ರಕಥೆ, ಸಂಭಾಷಣೆಗಾರರಾಗಿ ದ್ವೀಪ, ಪೂರ್ವಾಪರ, ಚಿಗುರಿದ ಕನಸು, ರಮ್ಯಚೈತ್ರಕಾಲ, ಸಿನಿಮಾಗಳಿಗೆ ಹಾಗೂ ಗೀತರಚನೆಯನ್ನು ಮುಂಗಾರು ಮಳೆ, ಮಿಲನ, ಗೆಳೆಯ, ಗಾಳಿಪಟ, ಹಾಗೆ ಸುಮ್ಮನೆ, ಮೊಗ್ಗಿನ ಮನಸ್ಸು,ಇಂತಿ ನಿನ್ನ ಪ್ರೀತಿಯ, ಮನಸಾರೆ, ಜಂಗ್ಲಿ, ಬಿರುಗಾಳಿ, ಪಂಚರಂಗಿ, ಪೃಥ್ವಿ, ಕೃಷ್ಣನ್ ಲವ್ ಸ್ಟೋರಿ, ಲೈಫು ಇಷ್ಟೇನೆ, ಚಿಂಗಾರಿ, ಪರಮಾತ್ಮ, ಅಣ್ಣ ಬಾಂಡ್ ಇತ್ಯಾದಿ ಚಲನಚಿತ್ರಗಳಿಗೆ ಮಾಡಿದ್ದಾರೆ. ಹೀಗೆ ಬಹುಮುಖ ಪ್ರತಿಭೆಯುಳ್ಳ ಜಯಂತ್ ಕಾಯ್ಕಿಣಿಯವರು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದವರೂ ಮುಂಬೈಯಲ್ಲಿ ಸುಮಾರು 23 ವರ್ಷ ಬಯೋಕೆಮಿಸ್ಟ್ ಆಗಿ ದುಡಿದು 2000 ರಿಂದೀಚೆಗೆ ಬೆಂಗಳೂರಿಗೆ ಬಂದು ಫ್ರೀಲಾನ್ಸರ್ ಆಗಿ ಬರವಣಿಗೆ ನಡೆಸಿದ್ದಾರೆ"[7].

ಇವರ ಪ್ರತಿಭೆಗೆ ಹಲವಾರು ಪ್ರಶಸ್ತಿಗಳು ಸಾಕ್ಷಿಯಾಗಿದ್ದು, ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಪ್ರತಿಷ್ಠಿತ 'ಕುಸುಮಾಗ್ರಜ', ನಾಲ್ಕು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದಿನಕರ ದೇಸಾಯಿ ಕಾವ್ಯ ಪ್ರಶಸ್ತಿ, ಬಿ.ಹೆಚ್., ಶ್ರೀಧರ್ ಕಥಾಪ್ರಶಸ್ತಿ, ದೆಹಲಿಯ ಕಥಾ ಪುರಸ್ಕಾರ, ಕರ್ನಾಟಕ ಸರ್ಕಾರದ ಅತ್ಯುತ್ತಮ ಚಲನಚಿತ್ರ ಸಂಭಾಷಣೆಗಾರ, ಅತ್ಯುತ್ತಮ ಗೀತರಚನೆಕಾರ ಪ್ರಶಸ್ತಿಗಳ ಜೊತೆ ಎರಡು ಬಾರಿ ಫಿಲ್ಮ್‌ಫೇರ್ ಶ್ರೇಷ್ಠ ಗೀತ ರಚನೆಕಾರ ಪ್ರಶಸ್ತಿಗಳೂ ಇವರಿಗೆ ಸಂದಿವೆ.

ಕನ್ನಡ ಸಾಹಿತ್ಯದಲ್ಲಿ ನವ್ಯದ ಪ್ರಭಾವವು ಇಳಿಮುಖವಾಗುವ ಸಂದರ್ಭದಲ್ಲಿ ಬರೆಯಲು ಪ್ರಾರಂಭಿಸಿದ ಹೊಸ ತಲೆಮಾರಿನ ಕಥೆಗಾರರಾಧ ರಾಘವೇಂದ್ರ ಪಾಟೀಲ, ಎಸ್. ದಿವಾಕರ, ವಿವೇಕಶಾನಭೋಗ, ಮೊಗಳ್ಳಿ ಗಣೇಶ್ ಮುಂತಾದವರ ಸಾಲಿನಲ್ಲಿ ಜಯಂತ್ ಕಾಯ್ಕಿಣಿಯವರೂ ಒಬ್ಬರು. ಅವರು ಕಾವ್ಯ, ಕಥೆ, ನಾಟಕ, ಅಂಕಣ ಬರಹ ಹೀಗೆ ವಿಭಿನ್ನ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿರುವ

ಜಯಂತರು ತಮ್ಮ ಬರವಣಿಗೆಯ ಮೂಲಕ ವಿಶಿಷ್ಟವಾಗಿ ಅಭಿವ್ಯಕ್ತಿಸುವ ಮಾರ್ಗಕಂಡು ಕೊಂಡವರು ನಿರ್ದಿಷ್ಟವಾದ ವಸ್ತು ಪಂಥಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ.

ಸಾಮಾನ್ಯ ಜನರನ್ನು ಗಮನಿಸಿ ಅವರ ಜೀವನ ಕ್ರಮವನ್ನು ಅರಿಯುವ ತವಕ ಅವರಲ್ಲಿದೆ. ನಿತ್ಯದ ಬದುಕಿನಲ್ಲಿ ಇತರರು ಕಂಡೂ ಕಾಣದ್ದನ್ನು ಹಲವರಿಗೆ ತಿಳಿಸಬೇಕೆನ್ನುವ ತವಕ ಜಯಂತರ ಒಟ್ಟು ಬರಹದಲ್ಲಿ ಎದ್ದು ಕಾಣುವುದು ಒಂದು ವಿಶೇಷತೆ ಇದನ್ನು ಅವರು ತಮ್ಮ ಕತೆಗಳಲ್ಲಿ ಬಹಳ ಯಶಸ್ವಿಯಾಗಿ ಚಿತ್ರಣ ಮಾಡಿದ್ದಾರೆ.

ಜಯಂತರು ಹೆಚ್ಚಿನ ಸಂಖ್ಯೆಯಲ್ಲಿ ಮುಂಬಯಿಯ ಕತೆಗಳನ್ನು ಬರೆದರೂ ಅವರ ಕತೆಗಳಲ್ಲಿ ಹುದುಗಿರುವ ಕಾಣ್ಕೆ, ಸಾರ್ವಕಾಲಿಕ ಸಾರ್ವತ್ರಿಕವಾಗಿರುವಂತಹದು, ಜಾಗತೀಕರಣದ ಪ್ರಭಾವದಿಂದ ಯಾಂತ್ರಿಕನಾಗುತ್ತಿರುವ ಮನುಷ್ಯನಲ್ಲಿ ಮನುಷ್ಯತ್ವವನ್ನು ಜಾಗೃತಗೊಳಿಸಿ ಭಾವಪರವಶ ನಾಗುವಂತಹ ಕತೆಗಳನ್ನು ಬರೆಯುತ್ತಿದ್ದಾರೆ. ಸಾಮಾನ್ಯರಲ್ಲೂ ಭರವಸೆಯನ್ನು ಮೂಡಿಸಿ, ಅಂತಹವರಲ್ಲೂ ಜೀವನದ ಆಸಕ್ತಿಯನ್ನು ಮೂಡಿಸುವಂತಹ ಕಥೆಗಳ ರಚನೆಯೇ ಇವರ ವಿಶಿಷ್ಟತೆ.

ಸಾಮಾನ್ಯರಲ್ಲಿ ಅತಿ ಸಾಮಾನ್ಯರೆನಿಸಿರುವವರ ಬದುಕಿನ ವಿಧಾನದಲ್ಲೂ ಅಡಗಿರಬಹುದಾದ ವಿಶಿಷ್ಟ ವಿನ್ಯಾಸಗಳನ್ನು ಗುರುತಿಸುವ ಮತ್ತು ಮುಖ್ಯವಾಹಿನಿಗೆ ಇವುಗಳನ್ನು ಪರಿಚಯಿಸುವ ಪ್ರಯತ್ನ ಮಾಡಿರುವುದೇ ಇವರ ವಿಶಿಷ್ಟತೆ ಎನ್ನಬಹುದು.

ಕೊನೆಟಿಪ್ಪಣಿಗಳು.

1. ಜಯಂತ ಕಾಯ್ಕಿಣಿಯವರ ಕಥನಾವರಣ, ಪುಟ ಸಂಖ್ಯೆ 20, 2015
2. ಕಥನಾವರಣ, ಪುಟ ಸಂಖ್ಯೆ 20, 2015
3. ಶಬ್ದಾತೀರ, ಪುಟಸಂಖ್ಯೆ 133
4. ಕಥನಾವರಣ, ಪುಟ ಸಂಖ್ಯೆ 21, 2015
5. ಕಥನಾವರಣ, ಪುಟ ಸಂಖ್ಯೆ 23, 2015
6. ಕಥನಾವರಣ, ಪುಟ ಸಂಖ್ಯೆ 28, 2015
7. ಜಂಯತ್ ಕಾಯ್ಕಿಣಿರವರ ಕಥೆಗಳು

ಅಧ್ಯಯನದ ವಸ್ತು, ಉದ್ದೇಶ, ವ್ಯಾಪ್ತಿ, ವಿಧಾನ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಣ್ಣ ಕಥೆಗಳಿಗೆ, ತನ್ನದೆ ಆದ ವಿಶಿಷ್ಠ ಪರಂಪರೆಯಿದೆ. ಅಂದರೆ ಕನ್ನಡ ಸಣ್ಣ ಕಥೆಗಳ ಬರವಣಿಗೆಯು ನವೋದಯ ಪೂರ್ವದಿಂದ ಹಿಡಿದು ಆಧುನಿಕೋತ್ತರ (ದಲಿತ-ಬಂಡಾಯ) ನಂತರದಲ್ಲಿಯೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಅಂತೆಯೇ ಜಯಂತ್ ಕಾಯ್ಕಿಣಿಯವರು ಆಧುನಿಕೋತ್ತರ ಬರಹಗಾರರಲ್ಲಿ ಒಬ್ಬರು. ಇವರು ಮೂಲತ: ಗೋಕರ್ಣದವರು ನಂತರ ಉದ್ಯೋಗ ನಿಮಿತ್ತವಾಗಿ ಬಹಳಷ್ಟು ವರ್ಷ ಮುಂಬಯಿಯ ನಿವಾಸಿಯಾಗಿದವರು. ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದು, ಇತ್ತೀಚೆಗೆ ಚಲನಚಿತ್ರ ರಂಗದಲ್ಲಿಯೂ ಸಾಹಿತಿಯಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಹೀಗೆ ಮುಂಬಯಿಯ ಹಾಗೂ ಗೋಕರ್ಣದ ಅನುಭವಗಳನ್ನು ಪಡೆದ ಇವರು ತಮ್ಮ ಸಾಹಿತ್ಯ ರಚನೆಗೆ ಇಲ್ಲಿಯ ಅನುಭವಗಳನ್ನು ಬಹುತೇಕ ಬಳಸಿಕೊಂಡಿದ್ದಾರೆ. (ಸಾಮಾನ್ಯರಲ್ಲಿ ಸಾಮಾನ್ಯರಾದವರನ್ನು ಕುರಿತು ಕತೆಗಳನ್ನು ಬರೆಯುತ್ತ ಅವರನ್ನು ಜಗತ್ತಿನ ಇತರ ಜನರಿಗೆ ಪರಿಚಯಿಸುತ್ತ ಅವರಿಂದ ಕಲಿಯಬಹುದಾದ ಗುಣಗಳನ್ನು, ಅವರನ್ನು ಮಾದರಿಯನ್ನಾಗಿಸಿಕೊಳ್ಳಬಹುದಾದ ಸಾಧ್ಯತೆಗಳನ್ನು ತಮ್ಮ ಕತೆಗಳಲ್ಲಿ ಅನಾವರಣಗೊಳಿಸುತ್ತಾರೆ.

ಒಟ್ಟಾರೆಯಾಗಿ ಕವನ, ಕಥಾಸಂಕಲನ, ನಾಟಕಕಾರರಾಗಿ, ಅಂಕಣಕಾರರಾಗಿ ಗುರುತಿಸಿಕೊಂಡಿರುವ ಜಯಂತ್‌ಕಾಯ್ಕಿಣಿಯವರ ಎಲ್ಲಾ ಕತೆಗಳನ್ನು ಓದಿಗಕೊಂಡು ಮತ್ತು ಅದಕ್ಕೆ ಪೂರಕವಾಗಿ ಯಶವಂತ ಚಿತ್ತಾಲರ ನಗರ ಕೇಂದ್ರಿತ ಬದುಕನ್ನು ಕುರಿತಾದ ಕತೆಗಳು ಹಾಗೂ ದಲಿತ ಬಂಡಾಯೋತ್ತರ ಕತೆಗಳನ್ನು ಓಡಿಕೊಂಡು ಜಯಂತ್ ಕಾಯ್ಕಿಣಿಯವರ ಸಣ್ಣ ಕಥೆಗಳಲ್ಲಿನ ವ್ಯಕ್ತಿ ವೈಶಿಷ್ಟ್ಯತೆಯನ್ನು ಗುರುತಿಸುವ ಉದ್ದೇಶವನ್ನು ಇಟ್ಟುಕೊಂಡು ಅಧ್ಯಯನ ಮಾಡಲಿದ್ದೇನೆ.

1) ಜಯಂತ್ ಕಾಯ್ಕಿಣಿಯವರ ಕಥೆಗಳು ಪ್ರಧಾನವಾಗಿ ಸಾಮಾನ್ಯರಲ್ಲಿ ಅತಿ ಸಾಮಾನ್ಯರ ಬದುಕಿನ ಸುತ್ತ ಹೆಣೆದ ಕತೆಗಳಾಗಿವೆ.
2) ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಗೋಕರ್ಣದ ಪ್ರಶಾಂತತೆ ಹಾಗೂ ಮುಂಬಯಿ ನಗರದಂತಹ ವ್ಯವಹಾರ ಕೇಂದ್ರಗಳನ್ನು ಕುರಿತವುಗಳಾಗಿವೆ.
3) ಸಾಮಾನ್ಯ ಜನರ ಜೀವನ ಸಂವೇದನೆಯನ್ನು ಕುರಿತ ಕತೆಗಳಾಗಿವೆ.

4) ಸ್ತ್ರೀಯರ ಸಂವೇದನೆ/ ಸಮಸ್ಯೆಗಳು ಹಾಗೂ ಪರಿವರ್ತನೆ ಹಾದಿಯಲ್ಲಿ ಸಾಗಿರುವುದರ ಸ್ಪಷ್ಟ ನೋಟ ಕಂಡು ಬರುತ್ತದೆ.

ಹಾಗಾಗಿ ನನ್ನ ಸಂಶೋಧನೆ ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಸಣ್ಣ ಕತೆಗಳ ಸಂಕಲನಗಳು.

- ಅಮೃತ ಬಳ್ಳಿಯ ಕಷಾಯ
- ಬಣ್ಣದ ಕಾಲು
- ತೂಫಾನ್ ಮೇಲ್
- ಚಾರ್ ಮಿನಾರ್
- ದಗಡೂ ಪರಬನ ಅಶ್ವಮೇಧ
- ತೆರೆದಷ್ಟೇ ಬಾಗಿಲು

ಹೀಗೆ 6 ಕಥಾ ಸಂಕಲನಗಳಲ್ಲಿ ಬರುವ ವಿವಿಧ ಕತೆಗಳನ್ನು ನನಗೆ ಅಂದರೆ ಮುಖ್ಯವೆಂದು ಕಂಡುಬರುವ ಕಥೆಗಳಲ್ಲಿ ಕಂಡು ಬರುವ ವ್ಯಕ್ತಿ ವಿಶಿಷ್ಟತೆ ಕುರಿತು ಚಿತ್ರಣವನ್ನು ಕೊಡಲು ಪ್ರಯತ್ನಿಸಿದ್ದೇನೆ. ಈ ಮೇಲಿನ ಏಳು ಕಥಾ ಸಂಕಲನಗಳ ಎಲ್ಲಾ ಕತೆಗಳನ್ನು ಆಯ್ದುಕೊಳ್ಳದೆ ಕೆಲವಾರು ಕಥೆಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆ..

ಕತೆಗಳ ಹೆಸರು : ಅಮೃತ ಬಳ್ಳಿಯ ಕಷಾಯ, ತೂಫಾನ್ ಮೇಲ್, ಮಧುಬಾಲ, ಡೈಮಂಡ್ ಸರ್ಕಸ್‌ನಲ್ಲಿ ಒಂದು ಹೆರಿಗೆ, ಸಂತೆಯ ದಿನ, ಚಾರ್ ಮಿನಾರ್, ಅಭಂಗ-ಅಭಿಸಾರ, ಕಣ್ಮರೆಯ ಕಾಡು, ಬಣ್ಣದ ಕಾಲು, ತನ್ಮಯಿ ಸೂಟಿ, ಹಾಲಿನ ಮೀಸೆ ಇತ್ಯಾದಿ, ಜಯಂತ್ ಕಾಯ್ಕಿಣಿಯವರ ಈ ಏಳು ಕಥಾ ಸಂಕಲನದಲ್ಲಿ ಆರಿಸಿಕೊಂಡಿರುವ ಕಥೆಗಳಲ್ಲಿ ಕಂಡು ಬರುವ ವ್ಯಕ್ತಿಯ ವಿಶಿಷ್ಠತೆಯನ್ನು ಮೂಲವಾಗಿ ಇರಿಸಿಕೊಂಡು ಈ ನನ್ನ ಸಂಶೋಧನೆಯನ್ನು ಮಾಡುವ ಉದ್ದೇಶವನ್ನು ಹೊಂದಿದ್ದೇನೆ. ಏಕೆಂದರೆ ಜಯಂತ್ ಕಾಯ್ಕಿಣಿಯವರ ವಿಶೇಷತೆ ಎಂದರೆ, ಸಾಮಾನ್ಯ ಜನರಲ್ಲಿ ಅತಿ ಸಾಮಾನ್ಯರೆನಿಸಿಕೊಂಡವರ ಅಸಾಮಾನ್ಯತೆಯನ್ನು ಗುರುತಿಸಿ ಅವರನ್ನು ತಮ್ಮ ಕಥೆಗಳಲ್ಲಿ ಮುಖ್ಯ ಪಾತ್ರಧಾರಿಗಳಾಗಿ ಆರಿಸಿಕೊಂಡಿರುವುದು. ಇಂದಿನ ಸಮಾಜದಲ್ಲಿ ಹಣವಂತರು, ಉದ್ಯೋಗಸ್ಥರು,. ಮೇಲ್ಪಂಕ್ತಿಯಲ್ಲಿ ಬರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕಥೆ ಬರೆಯುವುದು ಸಹಜ, ಆದರೆ, ಕಾಯ್ಕಿಣಿಯವರದು ಇದಕ್ಕಿಂತ ಭಿನ್ನವಾದ ಆಸಕ್ತಿ ಇದೊಂದು ವಿಶೇಷತೆಯೇ ಆಗಿದೆ. ಇದರಿಂದ ಓದುಗರಲ್ಲಿಯೂ ಹಲವಾರು

ಬದಲಾವಣೆಗಳಾಗುವುದರ ಜೊತೆಗೆ, ಅತಿಸಾಮಾನ್ಯರ ಜೊತೆ ಇವರನ್ನೂ ಮಾದರಿಯಾಗಿರಿಸಿಕೊಳ್ಳುವುದು ಸಾಧ್ಯವಾಗುತ್ತದೆ. ನಮ್ಮ ವರ್ತನೆಯು ಬಹಳ ನವಿರಾಗಿ ಮುಂದುವರೆಯುವಂತೆ ಸಮಾಜದಲ್ಲಿ ನಾವೂ ಅವರನ್ನು ಭಿನ್ನವಾಗಿ ಮತ್ತು ಆಪ್ತವಾಗಿ ಗುರುತಿಸುವಂತೆ ಮಾಡುತ್ತದೆ.

ವ್ಯಕ್ತಿ ವಿಶಿಷ್ಟತೆ

ಮನುಷ್ಯನ ಸಹಜವಾದ ಗುಣ ಎಂದು ಹಸಿವು, ನಿದ್ರೆ, ನೀರಡಿಕೆ, ಕೋಪ, ತಾಪ, ಜಗಳ, ತಾಳ್ಮೆ, ಸಹನೆ, ಪ್ರೀತಿ, ಭಕ್ತಿ, ಪರಸ್ಪರ ಗೌರವ ಹಿಗೆ ಗುರುತಿಸುವದು ಸಹಜ. ಆದರೆ, ಈ ಸಾಮಾನ್ಯ ಗುಣಗಳಲ್ಲದೆ, ಕೆಲವರಲ್ಲಿ ಕೆಲವು ದೌರ್ಬಲ್ಯಗಳು, ಹಾಗೆಯೇ ವಿಶೇಷ ಆಸಕ್ತಿಗಳಿರುವುದು ಅಷ್ಟೇ ಸಹಜ. ವಿಶೇಷವಾಗಿ ತನ್ನ ಸುತ್ತಣ ಜಗತ್ತಿನೊಂದಿಗೆ ವ್ಯವಹರಿಸುವ ಆಪ್ತವಾಗಿಸಿಕೊಳ್ಳುವ ಗುಣವೂ ಕೆಲವರಲ್ಲಿರುತ್ತದೆ. ಇದೇ ಇವರ ವಿಶಿಷ್ಟತೆಯಾಗಿರುತ್ತದೆ.

ವ್ಯಕ್ತಿಯಲ್ಲಿ ಕಂಡು ಬರುವ ವಿಶೇಷ ಗುಣವನ್ನೇ ವ್ಯಕ್ತಿ ವೈಶಿಷ್ಟ್ಯತೆ ಅಥವಾ ವ್ಯಕ್ತಿ ವಿಶಿಷ್ಟತೆ ಎಂದು ಕರೆಯಬಹುದು. ಆ ವಿಶಿಷ್ಟ ಗುಣ ಪುರುಷರಲ್ಲಾದರೂ ಇರಬಹುದು. ಅಥವಾ ಸ್ತ್ರೀಯರಲ್ಲಾದರೂ ಇರಬಹುದು. ಆಬಾಲಾದಿಯಾಗಿ ಯಾರಲ್ಲೂ ಬೇಕಾದರೂ ಇರಬಹುದಾದ ವಿಶಿಷ್ಟ ಗುಣವೇ ವ್ಯಕ್ತಿ ವಿಶಿಷ್ಟತೆಯಾಗಿದೆ.

ಸಾಹಿತ್ಯ ಎಂಬುದು ಚಿರನೂತನವಾದುದು. ಸಹಿತತೆಯೇ ಇದರ ಮುಖ್ಯ ಲಕ್ಷಣ ಎಲ್ಲವನ್ನು ತನ್ನಲ್ಲಿ ಅರಗಿಸಿಕೊಳ್ಳುವ ಗುಣವನ್ನು ಹೊಂದಿರುತ್ತದೆ. ಸಮಕಾಲೀನ ಸಾಹಿತ್ಯಕ್ಕೂ ಪ್ರಾಚೀನ ಸಾಹಿತ್ಯಕ್ಕೂ ನಡುವೆ ಸ್ವಲ್ಪ ಮಟ್ಟಿನ ಭಿನ್ನತೆಯಿದೆ. ಹಿಂದೆ ಸಾಹಿತ್ಯದ ಮುಖ್ಯ ಉದ್ದೇಶ ರಸಾನುಭೂತಿಯನ್ನು ಉಂಟು ಮಾಡುವುದು ಎಂಬ ನೆಲೆಯಲ್ಲಿ ನೋಡಲಾಗುತ್ತಿತ್ತು. ಆದರೆ ಸಮಕಾಲೀನ ಸಾಹಿತ್ಯ ಇಂದು ಹಲವಾರು ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಜೀವನಕ್ರಮ, ಧರ್ಮ, ವಿವೇಕ, ಇತ್ಯಾದಿಗಳನ್ನು ಸೂಕ್ಷ್ಮವಾಗಿ ಉಳಿಸಿಕೊಂಡು ಬರಬೇಕಾಗುತ್ತದೆ.

ಸಾಹಿತ್ಯದಿಂದ ಕೇವಲ ರಸವನ್ನು ಆಸ್ವಾದಿಸುವ ಮಂದಿಗೆ ಇಂದು ಕಾವ್ಯ ವಹಿಸಿಕೊಂಡಿರುವ ಸಂಕೀರ್ಣ ಜವಾಬ್ದಾರಿಯ ಅರಿವು ಕಾಣದಿರಬಹುದು.

"ಸಾಹಿತಿಯಾದವರಿಗೆ ವಾಸ್ತವ ನಿಷ್ಠೆಗಳು ಅವಶ್ಯಕ" (ಪೂರ್ಣಚಂದ್ರ ತೇಜಸ್ವಿಯವರ ವ್ಯಕ್ತಿ ವಿಶಿಷ್ಟತೆಯ ಸಿದ್ದಾಂತ, ಯಮಳ ಪ್ರಶ್ನೆ, ಪು.15) ಎಂಬುದಾಗಿ ಪೂರ್ಣಚಂದ್ರ ತೇಜಸ್ವಿಯವರ ಹೇಳಿಕೆಯನ್ನು ನಾವಿಲ್ಲಿ ಗಮನಿಸಬಹುದು. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇಂದು ವ್ಯಕ್ತಿತ್ವ ಬಗ್ಗೆ ಗೌರವಾದಾರಗಳು ಅನಿವಾರ್ಯವಾಗಿ ಬೆಳೆಯುತ್ತವೆ. ಆದರೆ ದಿನದೂಡಿದಂತೆ ಅದು ಜೀವನಕ್ಕೆ ಕಷ್ಟವಾಗುತ್ತದೆ. "ಪ್ರತಿಯೊಬ್ಬ

ವ್ಯಕ್ತಿಯೂ ಇಂದು ಸಮಾನ ಸ್ವಾತಂತ್ರ್ಯ ಸಮಾನ ಹಕ್ಕು ಬಾಧ್ಯತೆಗಳನ್ನು ಹೊಂದಿರುವ ಜೀವ" ಎಂದು ಫ್ರೆಂಚ್ ಕ್ರಾಂತಿಕಾರರು ಪ್ರತಿಷ್ಠಾಪಿಸಿದ ಲಿಬರಲ್ ತತ್ವಗಳು ಮಾನವನ ಆಜನ್ಮ ಸಿದ್ಧ ಹಕ್ಕುಬಾಧ್ಯತೆಗಳಾದರೂ ಜನ್ಮಸಿದ್ಧವಾಗೇ ದೊರಕುವ ಸ್ಥಿತಿ ಏನೂ ಇಲ್ಲ ಏಕೆಂದರೆ ಮಾನವನ ಪ್ರತಿಯೊಂದು ಚಟುವಟಿಕೆಯು ಒಬ್ಬನಿಂದ ಪ್ರಾರಂಭವಾಗಿ ಎಲ್ಲರಲ್ಲಿಯೂ ವಿಲೀನವಾಗುವುದರಿಂದ ಇದು ವ್ಯಕ್ತಿ ವಿಶಿಷ್ಠತೆಯ ಸಂವೇದನೆ ಸ್ವಂತವಾಗಿಯೇ ದೊರಕಬೇಕಾಗುತ್ತದೆ.

ಇಪ್ಪತ್ತನೆಯ ಶತಮಾನವು ವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಟ್ಟ ಕೊಡುಗೆ ಅಮೋಘವಾದುದು. ಏಕೆಂದರೆ 1948ರಲ್ಲಿ ವಿಶ್ವಸಂಸ್ಥೆ, ದೇಶ ಕಾಲ, ಜಾತಿ ಜನಾಂಗಗಳು ಇವುಗಳನ್ನು ಮೀರಿ ಹಕ್ಕುಬಾಧ್ಯತೆಗಳನ್ನು ಘೋಷಿಸಿದೆ. ಇಂದು ಮಾನವ ಸಂಪ್ರದಾಯ ನಿಷ್ಠೆ ಅವನನ್ನು ಸ್ವಾತಂತ್ರ್ಯಕ್ಕೆ ಕರೆದೊಯ್ಯುವ ಬದಲು ಪ್ರಗತಿಯ ಭ್ರಮೆಯಲ್ಲಿ ನಾವಿಂದು ಮುಳುಗಿದ್ದೇವೆ. ಇಂದು ಯಾಂತ್ರೀಕರಣ, ಆಧುನೀಕರಣ, ಜಾಗತೀಕರಣಗಳು, ಮಾನವನಿಗೆ ನ್ಯಾಯ- ಅನ್ಯಾಯಗಳು, ಸತ್ಯ ಅಸತ್ಯಗಳು ಪರಿಶೀಲನೆಗೆ ಸಮಯವನ್ನು ಕೊಡದಲ್ಲದೆ ಅವನನ್ನು ನಿಷ್ಕಾಮಿಯನ್ನಾಗಿ ಮಾಡಿ ಹಾಕುತ್ತಿದೆ. ಇಂದು ಜಗತ್ತು ವ್ಯಕ್ತಿಯ ಸ್ವಭಾವ ಶಕ್ತಿಯಾದ ಮೌಲ್ಯ ನಿರ್ಮಾಣ ಕ್ರಿಯೆಯನ್ನೇ ಘಾತಿಸುತ್ತವೆ.

<u>ಕಲಾವಿದರ ವಿಶಿಷ್ಟತೆ</u>

ಜಯಂತ್ ಕಾಯ್ಕಿಣಿಯವರನ್ನು ಕೃತಿಕಾರರನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವುಗಳೆಂದರೆ, ಅವರ ಹುಟ್ಟೂರಾದ ಗೋಕರ್ಣ, ಹಾಗೆಯೇ ಬದುಕು, ಕಟ್ಟಿಕೊಳ್ಳಲು ಹೋದ ಮುಂಬಯಿ. ಸಮುದ್ರ ತೀರದಲ್ಲಿ ಹುಟ್ಟಿ ಬೆಳೆದವರು, ಸಮುದ್ರ ತೀರದ ಬಾಂಬೆಯಲ್ಲಿ ಬದುಕನ್ನು ಕಟ್ಟಿಕೊಂಡರು. ಸಮುದ್ರದ, ನದಿಯ ವರ್ಣನೆಗಳೊಂದಿಗೆ ಅಲ್ಲಿನ ಬದುಕನ್ನು ಅನಾವರಣಗೊಳಿಸುವುದು ಇವರ ಬರವಣಿಗೆಯ ವಿಶೇಷತೆ ಎಂದು ಗುರುತಿಸಬಹುದಾಗಿದೆ. ಗೋಕರ್ಣದ ಸಾಂಪ್ರದಾಯಿಕ ಜಗತ್ತನ್ನು ವರ್ಣಿಸಬಲ್ಲರೂ ಹಾಗೆಯೇ ಅಷ್ಟೇ ಸುಲಲಿತವಾಗಿ ಮುಂಬಯಿ ನಗರದ ಯಾಂತ್ರಿಕತೆ ಹಾಗೂ ಈ ಯಾಂತ್ರಿಕತೆಯ ನಡುವೆ ಉಳಿದುಕೊಂಡು ಬಂದಿರುವ ಜೀವನಪ್ರೀತಿಯನ್ನು 'ಉದಾಹರಣೆಗೆ' ಬಣ್ಣದ ಕಾಲು ಕಥಾಸಂಕಲನದಲ್ಲಿ ಬರುವ 'ಬಣ್ಣದ ಕಾಲು' ಕತೆಯಲ್ಲಿ ಬರುವ ಬಣ್ಣದ ಕೃತಕ ಕಾಲನ್ನು ಕೊಡಬಹುದಾದದ್ದು, ಈ ಮಾಯಾನಗರ. ಅಂದರೆ ಎಲ್ಲರಿಗೂ ಒಂದಲ್ಲ ಒಂದು ಬಗೆಯ ಬದುಕನ್ನು ಕಟ್ಟಿಕೊಳ್ಳಲು ಅನುವು ಮಾಡಿಕೊಡಬಲ್ಲ ಅದ್ಭುತವಾದ ನಗರ ಎಂದು ಇದಕ್ಕೆ ಪೂರಕವಾದ ಅನೇಕ ವಿವರಗಳನ್ನು ಕೊಡಬಲ್ಲರು. ಮುಂಬಯಿ ನಗರ ಜೀವನದ ಒತ್ತಡಗಳಲ್ಲಿ ಕ್ರಿಯಾಶೀಲತೆಯನ್ನು ಕಳೆದುಕೊಳ್ಳುವ ಮಂದಿ ಬಹಳ ಜನ ಇರುತ್ತಾರೆ. ಏಕೆಂದರೆ 'ದೂರದ ಬೆಟ್ಟ ನುಣ್ಣಗೆ' ಎಂಬಂತೆ ನಗರ ಜೀವನದ ಬಗ್ಗೆ ದೂರ ನಿಂತು ಅದರ ಬಗ್ಗೆ ನಕಾರಾತ್ಮಕವಾಗಿ ಆಲೋಚಿಸುವುದೇ ಸಾಮಾನ್ಯ. ಇಂತಹ ನಕಾರಾತ್ಮಕ ಅಂಶಗಳು ಇಲ್ಲವೆಂದಿಲ್ಲ. ಆದರೆ, ಅದರ ನಡುವೆಯೂ . ಆಶಾವಾದಿಗಳಾಗಿ ಬದುಕನ್ನು ಅರಸುತ್ತಾ ಬದುಕು ಕಟ್ಟಿಕೊಳ್ಳುವುದೇ ನಮ್ಮ ಅನಿವಾರ್ಯ. ಹಾಗಾಗಿ ಇದನ್ನೇ ಅಂದರೆ, ನಗರವನ್ನೇ ಸಕಾರಾತ್ಮಕವಾಗಿ ಸ್ವೀಕರಿಸಬೇಕು. ಏಕೆಂದರೆ, 'ನಿರಾಕರಣೆಗಿಂತ ಸ್ವೀಕೃತಿಯಲ್ಲಿ ಸುಖವಿದೆ'. ಇದನ್ನೇ ಜಯಂತ್ ಕಾಯ್ಕಿಣಿಯವರು ಕಷ್ಟದ ನಡುವೆಯೂ ಬದುಕನ್ನು ಒಪ್ಪವಾಗಿಸಬಹುದಾದ ಕುಶಲತೆ ಅನಿವಾರ್ಯವೆಂದು ಅದನ್ನು ಇಲ್ಲಿನ ಕತೆಗಳಲ್ಲಿ ಜಯಂತ್ ಕಾಯ್ಕಿಣಿಯವರು ಅನಾವರಣಗೊಳಿಸಿದ್ದಾರೆ.

ಕತೆಗಳಲ್ಲಿ ಬರುವ ಕಲಾವಿದರ ಬದುಕು ಇದರಿಂದ ಹೊರತಾಗಿಲ್ಲ. ಅವರು ಮುಖದ ಮೇಲೆ ಬಣ್ಣ ಹಚ್ಚಿ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದರೂ ಅವರ ಜೀವನದ ನೋವು–ನಲಿವುಗಳು ಹಲವಾರು ಎಂಬುದನ್ನು ಕಾಯ್ಕಿಣಿಯವರು ಕತೆಗಳಲ್ಲಿ ಹೇಳುತ್ತಾರೆ.

ಕತೆಗಾರನೂ ಸಹ ಮೂಲತ: ಒಬ್ಬ ಕಲಾಕಾರನೆ ಏಕೆಂದರೆ, 'ಕಲೆ ಕಲೆಗಾಗಿ ಅಲ್ಲ. ಒಂದು ಉದ್ದೇಶಕ್ಕಾಗಿ' ಎಂಬ ಅರಿಸ್ಟಾಟಲ್‌ನ ಮಾತುಗಳನ್ನು ನೆನೆಯಬಹುದು. ಕಲೆ ಇದ್ದಕ್ಕಿದ್ದಂತೆ ಬರುವುದಲ್ಲ. ಅದಕ್ಕೆ ಹಲವು ದಿನಗಳಿಂದ ಕ್ರೂಢೀಕೃತಗೊಂಡ ಅನುಭವ, ನೋವು, ನಲಿವುಗಳು ಒಂದು ನಿರ್ದಿಷ್ಟವಾದ ಕಾಲದಲ್ಲಿ ಅದು ಹೊರಹೊಮ್ಮುತ್ತದೆ. (ಪುಟ ಸಂಖ್ಯೆ: 93, ಕಲೆಯ ದರ್ಶನ ಡಾ||ಕೆ.ಶಿವರಾಂ ಕಾರಂತ, ರಾಜಲಕ್ಷ್ಮಿ ಪ್ರಕಾಶನ 1982) ಹಾಗೆಯೇ ಕಲಾಸೃಷ್ಟಿಗಳಿಗೆ ಹೇಗೆ ಆಗುತ್ತದೆ ಎಂಬುದು ಕೂಡ ಅಷ್ಟೇ ಅನೂಹ್ಯ. ಏಕೆಂದರೆ, "ಮಾನವರ ಮನಸ್ಸು ನೂರಾರು ಕೆಲಸ, ಒತ್ತಡಗಳಿಂದ ತುಂಬಿಕೊಂಡಿರುವಾಗ, ಆ ಗೊಂದಲದಿಂದ ತಪ್ಪಿ, ಆತ ಯಾವುದಾದರೊಂದು ಅನುಭವವನ್ನು ಕುರಿತು ಧ್ಯಾನ ಮಾಡುವುದಕ್ಕೆ ತಕ್ಕ ಆವರಣ, ನೆಮ್ಮದಿ, ಬೇಕಾಗುತ್ತದೆ. ನಿಸರ್ಗದ ಶೋಭೆಯನ್ನು ನೋಡುವಾಗಲೇ ಗಾನದ ಇಂಪಿನಲ್ಲಿ ತಲ್ಲೀನನಾದಾಗಲೋ, ಬೇರೊಂದು ಕಲಾಸೃಷ್ಟಿಯನ್ನು ಕಂಡು ಆನಂದ ಮುಖಿಯಾಗಿರುವಾಗಲೋ, ಕಟುವಾದ ಯಾವುದಾದರೊಂದು ಅನುಭವದಿಂದಲೋ ನಮ್ಮ ಮನಸ್ಸು ಏಕಾಗ್ರಗೊಳ್ಳುವುದುಂಟು, ಆಗ ಅನುಭವದ ಚಿತ್ರ ಕಣ್ಣಮುಂದೆ ಕುಣಿದಾಡಲು ಪ್ರಾರಂಭಿಸಿದಾಗ ಕಲಾವವಿದನಿಗೆ 'ದರ್ಶನ' ವಾಗುತ್ತದೆ. ಆಗ ಆತ ಕವನ ಬರೆಯಲು, ನಾಟಕ, ಕಾದಂಬರಿ ಚಿತ್ರ ನಿರ್ಮಾಣಕ್ಕೂ, ಸಂಗೀತ ರಚನೆಗೋ, ಕುಳಿತುಕೊಳ್ಳುತ್ತಾನೆ. ಆಗ ಆತ ಸ್ವಾಭಾವಿಕವಾಗಿ ಭಾವಾವೇಷದಲ್ಲಿ ತಲ್ಲೀನವಾಗುವುದರಿಂದ ಕತೆಗಳ ಸೃಷ್ಟಿ ಮಾಡುವಾಗ ಮುಖ್ಯ ಪಾತ್ರಗಳು ಸನ್ನಿವೇಶಗಳು ಗೋಚರಿಸುತ್ತವೆ" ಎಂದು ಕೆ. ಶಿವರಾಂ ಕಾರಂತರು ತಮ್ಮ 'ಕಲೆಯ ದರ್ಶನ' ಕೃತಿಯಲ್ಲಿ ವಿವರಿಸಿದ್ದಾರೆ. ಇದನ್ನು ಗಮನಿಸಿದಾಗ ಜಯಂತ್ ಕಾಯ್ಕಿಣಿಯರ ಬರಹದಲ್ಲಿ ನಾವು ಇಂತಹ ವಿಶೇಷ ಸೃಷ್ಟಿಗಳನ್ನು ಕಾಣುತ್ತೇವೆ.

ಏಕೆಂದರೆ, ಬದುಕಿನಲ್ಲಿ ಸೂಕ್ಷ್ಮ ಸಂವೇದಿಯಾಗಿ ಇರುವಂತಹ ವ್ಯಕ್ತಿ ಮಾತ್ರ ಕಲಾವಿದನಾಗಬಲ್ಲ. ಬದುಕನ್ನು ಸೂಕ್ಷ್ಮವಾಗಿ ಗಮನಿಸುವ ಮತ್ತು ಅದಕ್ಕೆ ಪ್ರತಿಕ್ರಿಯಿಸುವ ವಿಶೇಷವಾದ ಸಂವೇದನೆಯನ್ನು ಒಟ್ಟು ಒಬ್ಬ ಕಲೆಗಾರ ಹೊಂದಿರುತ್ತಾನೆ. ಜಯಂತ್ ಕಾಯ್ಕಿಣಿಯವರಲ್ಲಿ ಆ ಸಂವೇದನಾಶೀಲತೆ ಇರುವ ಕಾರಣಕ್ಕಾಗಿಯೇ ಅವರೊಬ್ಬ ಭಾಷಿಕ ಕಲಾವಿದರಾಗಿ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುತ್ತಾರೆ. ಅವರ ಬರವಣಿಗೆಯ ಮೂಲಕ ನಾವಿದನ್ನು ವಿಶೇಷವಾಗಿ ಗುರುತಿಸಬಹುದು. ಸ್ವತ: ಒಬ್ಬ ಕಲಾವಿದನಾಗಿ ಸೂಕ್ಷ್ಮ ಸಂವೇದಿಯಾಗಿ ಮತ್ತೊಂದು ವಲಯದ ಬದುಕಿನ ಕಲಾವಿದರ ಬದುಕಿನ ವಿವಿಧ ಆಯಾಮಗಳನ್ನು ಗುರುತಿಸುವಲ್ಲಿ ಜಯಂತ್ ಕಾಯ್ಕಿಣಿಯವರು ಇಲ್ಲಿ ಯಶಸ್ವಿಯಾಗಿದ್ದಾರೆ. ಅಂತಹ ಚಿತ್ರಣಗಳು ನಮಗೆ ಈ ಕೆಳಕಂಡ ಕತೆಗಳಲ್ಲಿ ಕಾಣಿಸುತ್ತವೆ.

➢ ಜಯಂತ್ ಕಾಯ್ಕಿಣಿಯವರ ಪ್ರಮುಖ ಕಥಾ ಸಂಕಲನಗಳಲ್ಲಿ ಒಂದಾದ ಅಮೃತಬಳ್ಳಿಯ ಕಷಾಯದಲ್ಲಿರುವ **'ಡೈಮಂಡ್ ಸರ್ಕಸ್ಸಿನಲ್ಲಿ ಒಂದು ಹೆರಿಗೆ'** ಪ್ರಮುಖವಾದದ್ದು, ಈ ಕತೆಯಲ್ಲಿ ಸರ್ಕಸ್ಸಿನಲ್ಲಿ ಎಲ್ಲರ ಮುಂದೆ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಸಂತೋಷ ನೀಡುವ ಕಲಾವಿದರ ಬವಣೆಗಳು ಎಷ್ಟಿರುತ್ತವೆ ಎಂಬುದನ್ನು ವಿವರಿಸಿದ್ದಾರೆ. ಅಷ್ಟೇ ಅಲ್ಲದೆ ಒಂದು ಹೆಣ್ಣು ಸಹಜವಾಗಿ ಬಯಸುವ ತಾಯ್ತನದ ಆನಂದವನ್ನು ಅನುಭವಿಸಲು ಕಂಪನಿಯ ಒಪ್ಪಿಗೆ ಬಹಳ ಮುಖ್ಯವೆಂಬುದನ್ನು ಅಲ್ಲದೆ, ಈ ಹೆಣ್ಣು ತನ್ನ ಗಂಡ ಹೂವಿಂದ ಹೂವಿಗೆ ಹಾರುವ ದುಂಬಿಯಂತೆ ಆದರೂ ಕೂಡ ಬೇರೆ ಕಲಾವಿದರಿಗೆ ಸಹಾಯ ಮಾಡುವ ರೀತಿಯನ್ನು ವಿವರಿಸಿದ್ದಾರೆ. ಹಡೆದವರು ತವು ಅನುಭವಿಸಿದ ನೋವುಗಳು ತಮ್ಮ ಮಕ್ಕಳಿಗೆ ಬೇಡ ಎಂಬುದನ್ನು ಬಯಸುವಂತೆ, ಇಲ್ಲಿ ಡಂಪಿ ಗರ್ಭವನ್ನು ಧರಿಸಿದಾಗ ಕಂಪನಿಯ ಮಾಲೀಕ ಹುಟ್ಟುವ ಮಗು ಕಂಪನಿಗೆ ಸೇರುತ್ತದೆ ಎಂದು ಆನಂದ ಪಡುವಾಗ ಆ ಹೆಣ್ಣು ಹೆರಿಗೆಯ ಬೇನೆಯಲ್ಲೂ ಆ ಕಂಪನಿಯನ್ನು ಬಿಟ್ಟು ನಡುರಾತ್ರಿಯಲ್ಲಿ ಹೊರ ಹೋಗುವ ಪ್ರಸಂಗ ಎಂತಹ ಕಲ್ಲು ಹೃದಯದವರನ್ನು, ಮಮತೆಯಲ್ಲಿ ಕರಗಿಸುವಂತೆ ಮಾಡುತ್ತದೆ. ಅದರ ವಿಸ್ತೃತ ರೂಪವನ್ನು ಈಗ ಅರಿಯೋಣ. ಜಯಂತ್ ಕಾಯ್ಕಿಣಿಯವರ ಡೈಮಂಡ್ ಸರ್ಕಸ್ಸಿನಲ್ಲಿ ಒಂದು ಹೆರಿಗೆ ಕತೆಯಲ್ಲಿ ಬರುವ ಡಂಪಿ ತಬ್ಬಲಿ, ಹೆಣ್ಣು ಮಗಳು. ದೊಡ್ಡಮ್ಮನ ಆಶ್ರಯದಲ್ಲಿ ಬೆಳೆಯುತ್ತಾಳೆ. ಅಲ್ಲದೆ ಆಕೆ ಸರ್ಕಸ್ಸಿನಲ್ಲಿ ಬಹಳ ಸಾಹಸಮಯವಾದ ಹುಲಿಯ ಬಾಯಿಗೆ ತಲೆ ಇಡುವ ಒಂದು ದೃಶ್ಯ ಸರ್ಕಸ್ಸಿನ ಬಹಳ ಆಕರ್ಷಕವಾದ ಸರ್ಕಸ್ ಆಗಿರುತ್ತದೆ. ಇಲ್ಲಿ ಹೆಣ್ಣು ಮಕ್ಕಳು ಶಾಲೆ ಓದುಗಳಲ್ಲೇ ದಿನ ಕಳೆಯುವ ಇಂತಹ ದಿನಗಳಲ್ಲಿ ಸರ್ಕಸ್ಸಿನಲ್ಲಿ ಇಂತಹ ಧೈರ್ಯ ಪ್ರವೃತ್ತಿಗೆ ಇಳಿಯುವ ಸಾಹಸವನ್ನು ಯಾವ ತಂದೆ-ತಾಯಿಯವರು ಒಪ್ಪುವುದಿಲ್ಲ. ಆದರೆ ತಂದೆ-ತಾಯಿ ಇಲ್ಲದ ಡಂಪಿ ಇಂತಹ ಸಾಹಸ ಕೃತ್ಯಕ್ಕೆ ಕೈ ಹಾಕುತ್ತಾಳೆ ಎಂಬುದನ್ನು ಅರಿತುಕೊಳ್ಳಬೇಕು. ಹಣವೇ ಅನಿವಾರ್ಯ ಆದ ಕಾರಣ ಆಕೆ ಈ ವೃತ್ತಿಯಲ್ಲಿ ಇರುತ್ತಾಳೆ. ಅಷ್ಟೇ ಅಲ್ಲದೆ ಆಕೆಯು ಎಲ್ಲರಂತೆ ಗಂಡ-ಮಕ್ಕಳೊಂದಿಗೆ ಸುಖವಾಗಿರಬೇಕೆಂದು ಬಯಸುತ್ತಾಳೆ. ಆದರೆ ಸರ್ಕಸ್ಸಿನ ಕಂಪನಿಗಳಲ್ಲಿ ದಪ್ಪಗಿರುವವರಿಗೆ ಅವಕಾಶಗಳು ಗಿಟ್ಟುವುದಿಲ್ಲ. ಮಕ್ಕಳಾದರೆ, ಮೈ ಜೋಲು ಬೀಳುತ್ತದೆ. ಇದರಿಂದ ಕೆಲಸಕ್ಕೆ ಮಣ್ಣುಬೀಳುತ್ತದೆ ಎಂಬ ಕಾರಣದಿಂದ ಆಕೆ ತನ್ನ ಹೆಣ್ತನದ ಬಯಕೆಯನ್ನು ತಡೆಹಿಡಿಯುತ್ತಾಳೆ. ಇದು ಎಲ್ಲಾ ಕಲಾವಿದ ನಟಿಯರ ಬವಣೆಯು ಆಗಿರುತ್ತದೆಯೇನೋ ಎನಿಸುತ್ತದೆ. ಏಕೆಂದರೆ,

ಸಿನಿಮಾ ನಟಿಯರಲ್ಲೂ ಮದುವೆಯಾಗಿ ಮಕ್ಕಳಾದ ನಂತರ ನಟನೆಯಲ್ಲಿ ಮುಂದುವರೆಯುವವರು ಕಡಿಮೆ ಮಂದಿ ಹಾಗಾಗಿ ಅವರಿಗೆ ಅವಕಾಶಗಳು ಕೈ ಜಾರದಿರಲೆಂಬ ಒಂದೇ ಆಸೆಯಿಂದ ಹೆಣ್ತನದ ಬಯಕೆಗಳನ್ನು ಅವರು ಮುಂದೂಡುತ್ತಾ ಬರಬಹುದು ಇಷ್ಟುಮಾತ್ರವಲ್ಲದೆ ಡಂಪಿಯ ಬದುಕಿನಲ್ಲಿ ಗಂಡ ಶಫಿಯು ಒಂದು ರೀತಿಯ ಮನೋಚಾಂಚಲ್ಯವನ್ನು ಹೊಂದಿರುವಂತಹ ವ್ಯಕ್ತಿ. ಇದರಿಂದ ತನ್ನ ಬದುಕನ್ನು ಭದ್ರಪಡಿಸುವುದಕ್ಕಾಗಿ ಆಕೆ ಗರ್ಭವನ್ನು ಧರಿಸುತ್ತಾಳೆ. ಇದು ಎಲ್ಲಾ ಸಾಮಾನ್ಯ ಸ್ತ್ರೀಯರ ಬದುಕಿನ ಸಾಮ್ಯತೆಯನ್ನು ಹೋಲುತ್ತದೆ. ಗಂಡನಿಂದ ನೆಮ್ಮದಿ ಸುಖ-ಸಂತೋಷಗಳು ದೊರೆಯದೇ ಮೋಸ ಹೋದ ಮಹಿಳೆಯರು, ಮಕ್ಕಳ ಆಟ-ಪಾಠ, ತೊದಲುನುಡಿ, ಮುಗ್ಧನೋಟಗಳನ್ನು ನೋಡಿ ಆನಂದ ಪಡುತ್ತಾರೆ. ತಮ್ಮ ದು:ಖವನ್ನು ಮರೆಯುವಂತೆ ಡಂಪಿಯೂ ಅದನ್ನು ಹಂಬಲಿಸುತ್ತಾಳೆ. ಆದರೆ, ಇದು ಕಂಪನಿಗೆ ವಿರೋಧವೆನಿಸಿದರೂ ಆಕೆ ಅದನ್ನು ರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯೂ ಆಗುತ್ತಾಳೆ. ಮಾತ್ರವಲ್ಲದೆ, ಕಂಪನಿಯಲ್ಲಿ ಹುಟ್ಟಿದ ಮಗು ಕಂಪನಿಗೆ ಸೇರಿದ್ದು ಎಂದು ಹೇಳಿತ್ತಾರೆ. ಕಂಪನಿಯು ಈ ಕಠೋರ ನಿಯಮಗಳು ನಮ್ಮಂತಹ ಪ್ರೇಕ್ಷಕರಿಗೆ ತಿಳಿದಿರುವುದೇ ಇಲ್ಲ. ಆಕೆ ತಾನು ಅನುಭವಿಸಿದ ನೋವನ್ನು ತನ್ನ ಮಗು ಅನುಭವಿಸಬಾರದೆಂಬ ಕಾರಣದಿಂದ ಕತ್ತಲೆಯು ಆ ಕರಾಳ ರಾತ್ರಿಯಲ್ಲಿ ಆಕೆ ಕಂಪನಿಯ ತೊರೆದು ಹೋಗುವ ಧೈರ್ಯ ಮಾಡುತ್ತಾಳೆ. ಜನರನ್ನು ರಂಜಿಸುವ ಇವರು ತಮ್ಮ ಬದುಕನ್ನೇ ಇಲ್ಲಿ ಒತ್ತೆ ಇಡುತ್ತಾರೆ. ಕಂಪನಿಗೆ ಇಡೀ ಬದುಕನ್ನೇ ಮಾರಿಕೊಳ್ಳಬೇಕಾದ ಕಲಾವಿದರ ದುರಂತ ಜೀವನ ಇಲ್ಲಿ ಗಾಬರಿಹುಟ್ಟಿಸುತ್ತದೆ. ವೃತ್ತಿ ರಂಗಭೂಮಿಯ ಕಲಾವಿದರ ಬದುಕಿನ ಸಂಕಷ್ಟಗಳ ಬಗೆಗೆ ನಾವು ಯೋಚಿಸುವಂತೆ ಮಾಡುತ್ತದೆ. ಹೆಣ್ಣು ತನ್ನ ಮಕ್ಕಳಿಗೆ ತೊಂದರೆಯಾಗುವ ಸಂದರ್ಭವಿದೆ ಎಂದು ತಿಳಿದಾಗ ಆ ಮಾತೃ ಹೃದಯ ಅವರನ್ನು ಪಾರು ಮಾಡಲು ಹೇಗೆ ಹವಣಿಸುವುದೋ ಅದೇ ರೀತಿಯಾಗಿ ಡಂಪಿ ಅಲ್ಲಿಂದ ಪಾರಾಗಲು ಆ ಹೆರಿಗೆಯ ಬೇನೆಯಲ್ಲೂ ಹೊರಗೆ ಬರುತ್ತಾಳೆ. ಕಂಪನಿಯವರೆಲ್ಲ ಹುಡುಕಿ ಬಂದಾಗ ಡಂಪಿ ಕಂಪನಿಯ ಹೊರಗೆ ಒಂದು ಹೆಣ್ಣು ಮಗುವಿಗೆ ಅದರಲ್ಲೂ ನಾಲ್ಕು ಕೈಗಳಿರುವ ಮಗುವಿಗೆ ಜನ್ಮ ನೀಡಿರುತ್ತಾಳೆ. ಅದು ಕಂಪನಿಗೆ ಸಂತೋಷದಾಯಕ ವಿಚಾರವೇ, ಏಕೆಂದರೆ, ಹಣ ಸಂಪಾದನೆ ಮಾಡುವವರು ದುಡ್ಡಿನ ವಿಚಾರವಷ್ಟನ್ನೇ ಗಣನೆಗೆ ತೆಗೆದುಕೊಳ್ಳುವರು. ಹಾಗಾಗಿ ಇದನ್ನೇ ಪ್ರದರ್ಶನಕ್ಕಿಟ್ಟು ಸಂಪಾದನೆ ಮಾಡಬಹುದು ಎಂದು ಯೋಚಿಸಿದರೂ, ಕಂಪನಿಯ ವೈದ್ಯರು ಇದನ್ನು ಶಸ್ತ್ರಚಿಕಿತ್ಸೆಯಿಂದ ಗುಣಪಡಿಸಬಹುದು ಎಂದಾಗ ಡಂಪಿಯು

ನೆಮ್ಮದಿಯ ನಿಟ್ಟುಸಿರು ಬಿಡುವಳು. ಇದು ತಾಯಿಯ ಮಮತೆಯ ವಾತ್ಸಲ್ಯದ ಜೊತೆಗೆ ಕಲಾವಿದೆಯ ಬದುಕಿನ ಬವಣೆಯನ್ನು ಅನಾವರಣಗೊಳಿಸುತ್ತದೆ.

- ಜಯಂತ್ ಕಾಯ್ಕಿಣಿಯವರ ಕಥಾಸಂಕಲನಗಳಲ್ಲಿ ಒಂದಾದ 'ತೂಫಾನ್ ಮೇಲ್'ನ ತೂಫಾನ್ ಮೇಲ್ ಕತೆಯೂ ಕಲಾವಿದರ ಬದುಕಿನ ವಿವಿಧ ಮಜಲುಗಳನ್ನು ವಿವರಿಸುತ್ತದೆ. ಈ ಕತೆಯಲ್ಲಿ ತೂಫಾನ್ ತನ್ನ 'ಮುನ್ನ' ಎನ್ನುವ ಹೆಸರನ್ನು ವೇಗವಾಗಿ ಬಂದು ಕಣ್ಮರೆಯಾಗುವ ತೂಫಾನ್ ಮೇಲ್ ರೈಲನ್ನು ಕಂಡು ಅದರಲ್ಲಿ ತಮಗೆ ಬೇಕಾದುದನ್ನು ನೀಡಿ ಅದರಲ್ಲೇ ಮಾಯವಾಗುವ ತನ್ನ ತಂದೆಯ ನೆನಪಿಗಾಗಿ ಈ ಹೆಸರನ್ನು ಇಟ್ಟುಕೊಂಡಿರುತ್ತಾನೆ. ಈ ಕತೆಯಲ್ಲಿ ತೂಫಾನ್ ಒಬ್ಬ ಸ್ಟಂಟ್ ಕಲಾಗಾರನಾಗಿರುತ್ತಾನೆ. ಆತನ ಗೆಳೆಯ ಬಲರಾಂ ಹಾಗೂ ಸಹನಟಿ ಮಧುವಂತಿ ಈತನ ಸ್ನೇಹಿತರು. ಬಲರಾಂ ಹಾಗೂ ಮಧುವಂತಿ ಮದುವೆಯಾಗಿ ಸೋನುವೆಂಬ ಹೆಣ್ಣುಮಗುವಿಗೆ ಜನ್ಮ ನೀಡಿದ್ದರೂ ಇತ್ತೀಚೆಗೆ ಅವರ ನಡುವೆ ಹೊಂದಾಣಿಕೆಯ ಕೊರತೆ ಕಂಡು ಬರುತ್ತದೆ. ಅಷ್ಟೇ ಅಲ್ಲದೆ, ಅನುಮಾನದ ಪಿಶಾಚಿಯಂತೆ, ಬೇಜವಾಬ್ದಾರಿಯ ಸೋಗಿನಲ್ಲಿ ಸೋಮಾರಿಯಾದ ಬಲರಾಂ ಕೆಲಸ ಕಾರ್ಯಗಳನ್ನು ಬಿಟ್ಟು ಮಧುವಂತಿಯ ಚಲನವಲನಗಳನ್ನು ಗಮನಿಸುವುದು ಆಕೆಗೆ ನುಂಗಲಾರದ ತುತ್ತಾಗಿದೆ. ಅಷ್ಟೇ ಅಲ್ಲದೆ ಗಾಜು ಒಡೆಯುವ ಪ್ರಸಿದ್ಧ ಕಲಾಕಾರನಾದ ತೂಫಾನ್ ಬಳಿ ಇವರ ಒಂದು ಸಮಸ್ಯೆಯನ್ನು ಹೇಳಿದಾಗ ಆತನಿಗೆ ತನ್ನ ತಾಯಿಯೂ ಇಂತಹ ನೋವನ್ನು ಅನುಭವಿಸುತ್ತಿದ್ದಳೇ? ಎಂಬ ಪ್ರಶ್ನೆ ಮೂಡುತ್ತದೆ. ಒಟ್ಟಾರೆಯಾಗಿ ಕಲಾವಿದರ ವಿವಿಧ ಮನಸ್ಥಿತಿಗಳನ್ನು, ಅನುಭವಿಸುವ ನೋವುಗಳನ್ನು ಈ ಕತೆಯಲ್ಲಿ ವ್ಯಕ್ತಪಡಿಸಿದ್ದಾರೆ.

- ಬಣ್ಣ ಬಳಿದುಕೊಂಡು ತೆರೆಯ ಮೇಲೆ ಎಲ್ಲರೆದುರು ಭೇಷ್ ಎನಿಸಿಕೊಳ್ಳುವ ಮಂದಿಯಂತೆ ಮಧುವಂತಿಯೂ ಸಹನಟಿಯಾಗಿ ಅಭಿನಯಿಸುತ್ತಿದ್ದು ಈಕೆಯ ಗಂಡ ಬಲರಾಂ. ಈಕೆಯ ಮನೆಯ ಪೂರ್ಣ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಿರುತ್ತಾಳೆ. ಏಕೆಂದರೆ ಈಕೆಯ ಗಂಡ ಭದ್ರತೆಯೇ ಇಲ್ಲದಿರುವ ಕೆಲಸಕ್ಕೆ ತಿಲಾಂಜಲಿಯನ್ನು ಇಟ್ಟಿರುತ್ತಾನೆ. ಅಲ್ಲದೆ ಮಧು ತನ್ನ ಮಗಳು ಸೋನುವನ್ನು ಇಂಗ್ಲೀಷ್ ಶಾಲೆಗೆ ಸೇರಿಸಬೇಕು ಎನ್ನುವ ಮಾತು ಪ್ರತಿಯೊಬ್ಬ ತಂದೆ ತಾಯಿಗಳ ಆಸೆಯೂ ತಮ್ಮ ಮಕ್ಕಳನ್ನು ಒಳ್ಳೆಯ ಶಾಲೆಗೆ ಸೇರಿಸಿ ಚೆನ್ನಾಗಿ ಓದಿಸಬೇಕು ಎಂಬುದನ್ನು ಆಲೋಚಿಸುತ್ತಾರೆ ಎಂಬುದು ಗೊತ್ತಾಗುತ್ತದೆ. ಮಾತ್ರವಲ್ಲದೆ ತಂದೆಯಿಂದ ಆಗದೆ ಇದ್ದರೂ ತಾಯಿ ತಾನೂ ಎಂತಹ ಕಷ್ಟದ

ಕೆಲಸವನ್ನು ಮಾಡಲು ಸಿದ್ಧಳಿರುತ್ತಾಳೆ ಎಂಬುದನ್ನು "ಮಧ್ಯವಯಸ್ಸಿನಲ್ಲೂ ಉರಿಬಿಸಿಲಿನಲ್ಲಿ ಹಗಲು ವೇಷ ಹಾಕಿ ನೃತ್ಯ ಮಾಡೋದು"[3] ಎಂದಾಗ ಆಕೆಯ ಮನಸ್ಥಿತಿ ಅರಿವಿಗೆ ಬರುತ್ತದೆ. ಅಷ್ಟೇ ಅಲ್ಲದೆ ಸಹ ಕಲಾವಿದರನ್ನು ಯಾರು ಗುರುತಿಸದೆ ಅವರ ಜೀವನ ನಿರ್ವಹಣೆಯೂ ಕಷ್ಟದಿಂದ ಕೂಡಿರುತ್ತದೆ ಎಂಬುದು ಗೊತ್ತಾಗುತ್ತದೆ. ಇವತ್ತಿಗೂ ಮೈಯಲ್ಲಿ ಶಕ್ತಿ ಇರುವವರೆಗೆ ಚಿತ್ರೀಕರಣದಲ್ಲಿ ಭಾಗವಹಿಸಿ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡು ಸ್ಕ್ರೀನ್‌ನಲ್ಲಿ ನಕ್ಕು ನಲಿಸಿದ ಎಷ್ಟೋ ಮಂದಿ ಕಲಾವಿದರ ಕುಟುಂಬಗಳು ಇಂದು ನೋವನ್ನು ಅನುಭವಿಸುತ್ತಿರುವುದನ್ನು ಕಾಣಬಹುದಾಗಿದೆ. ಮಧುವಂತಿ ತೂಫನ್‌ಗೆ ಸೆಟ್‌ನಲ್ಲಿ ನಿನಗೆ ನೀಡುವ ನಾನ್ ವೆಜ್ ಸೋನುಗೆ ಕೊಂಡೊಯ್ಯುವೆ ಎಂದು ಹೇಳುವ ಮಾತು ಹುಟ್ಟೆಯ ಪಾಡಿನ ಸ್ಥಿತಿಯನ್ನು ತಿಳಿಸುತ್ತದೆ. ಮಧುವಂತಿ ನೃತ್ಯ ಮಾಡುವಾಗ ಗಂಡ ಬಲರಾಂ ಮರೆಯಲ್ಲಿ ಕುಳಿತು ವೀಕ್ಷಿಸುವುದನ್ನು ತಿಳಿದಯೀಕೆಯ ಅತಂತ್ರ ಸ್ಥಿತಿ ಮನ ಕರಗಿಸುತ್ತದೆ. ಇವರು ಗಂಡನ ನಂಬಿಕೆ ಗಳಿಸಲು ಎಷ್ಟು ಕಷ್ಟ ಪಡುತ್ತಾರೆಂದು ಅದು ನಿಜವಾಗಿದ್ದರೂ ಬಲರಾಂನಂತವರು ಅದು ನಟನೆ ಎಂದು ಭಾವಿಸುವ ಗಂಡ ಒಂದು ರೀತಿಯಲ್ಲಿ ಮಾನಸಿಕ ನೆಮ್ಮದಿಗಾಗಿ ಹಾತೊರೆಯುತ್ತಿರುತ್ತಾರೆ ಎಂಬುದು ಗೊತ್ತಾಗುತ್ತದೆ. ಈ ನಡುವೆ ಕಲೆಗೆ ಪ್ರಾಮಾಣಿಕರಾಗಿರಬೇಕು. ಗಂಡನಿಗೂ ಪ್ರಾಮಾಣಿಕರಾಗಿರಬೇಕು. ಇದರ ನಡುವೆ ನಲುಗುವ ಇವರ ಸ್ಥಿತಿಯೇ ದಾರುಣ. ಅಲ್ಲದೆ ಮಧುವಂತಿ ಹಾಗೂ ಬಲರಾಂ ಒಂದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದು ಒಬ್ಬರಿಗೊಬ್ಬರು ಚೆನ್ನಾಗಿ ಅರಿತ ನಂತರ ಮದುವೆಯಾದರೂ ಅವರಲ್ಲಿ ಹೊಂದಾಣಿಕೆ ಕಷ್ಟವಾಗಿ ಅನುಮಾನಗಳು ಹತ್ತಿರ ಸುಳಿಯುತ್ತದೆ ಇಲ್ಲಿ ಇಂತಹ ನಮ್ಮನಡುವಿನ ಕೆಲವು ನಟ ನಟಿಯರನ್ನು ನೆನೆಯಬಹುದಾಗಿದೆ. ಒಟ್ಟಾರೆಯಾಗಿ ಇಂತಹ ಒತ್ತಡದಲ್ಲೂ ತನ್ನ ಕಲಾ ನೈಪುಣ್ಯತೆಯನ್ನು ಪ್ರದರ್ಶಿಸಲೇಬೇಕಾದ ಅನಿವಾರ್ಯ ಇಂತಹ ಕಲಾವಿದೆಯರದು. ಅನ್ನದ ಪ್ರಶ್ನೆ, ಬದುಕಿನ ಪ್ರಶ್ನೆ, ಮಕ್ಕಳ ಭವಿಷ್ಯದ ಪ್ರಶ್ನೆ ಹೇಗೆ ಇಂತಹವರನ್ನು ಹಣ್ಣುಗಾಯಿ ನೀರುಗಾಯಿ ಮಾಡಿರುತ್ತದೆ . ಇದಾವುದರ ಅರಿವೆ ಇಲ್ಲದೆ ಪ್ರೇಕ್ಷಕ ಆಕೆಯ ಕಲಾ ಪ್ರದರ್ಶನದಿಂದ ಸುಖ ಪಡೆಯುತ್ತಾನೆ. ಆಕೆಯನ್ನು ಸದಾ ಸುಖಿ ಎಂದೇ ಭಾವಿಸುತ್ತಾನೆ. ಕಲಾವಿದೆಯರ ಬದುಕಿನ ಇಂತಹ ವಿಪರ್ಯಾಸಗಳಿಗೆ ಈ ಕತೆ ಕನ್ನಡಿ ಹಿಡಿಯುತ್ತದೆ. ಒಟ್ಟಾರೆಯಾಗಿ ಜಯಂತರು ಕಲಾವಿದರ ಜೀವನ ದೋಣಿ ಹೇಗೆ ಬಿರುಗಾಳಿಗೆ ಸಿಲುಕಿ ಅಲುಗಾಡುತ್ತಿದ್ದರೂ ಅದನ್ನು ಒಂದು ತಳಹದಿಯ ಮೇಲೆ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ ಎಂಬುದನ್ನು ಚಿತ್ರಿಸಿದ್ದಾರೆ.

- ಜಯಂತ್ ಕಾಯ್ಕಿಣಿಯವರು ಜೀವನ ನಿರ್ವಹಣೆಗಾಗಿ ಹಲವಾರು ವೃತ್ತಿಗಳನ್ನು ಆರಿಸಿಕೊಂಡು ಅದರಲ್ಲಿ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುವವರ ಜೀವನ ಚಿತ್ರಣಗಳನ್ನು ಬಹಳ ಸೂಕ್ಷ್ಮವಾಗಿ ವಿವರಿಸಿದ್ದಾರೆ . ಅಂತಹ ಕತೆಗಳಲ್ಲಿ ಒಂದಾದದ್ದು 'ಮಧುಬಾಲ'. ಈ ಕತೆಯಲ್ಲಿ ಡ್ಯಾನ್ಸ್ ಗರ್ಲ್ ಆಗಿ ಆಕೆ ಬದುಕನ್ನು ಕಟ್ಟಿಕೊಳ್ಳಲು ಈ ವೃತ್ತಿಯನ್ನು ಆರಿಸಿಕೊಂಡಿರುತ್ತಾಳೆ. ಆದರೆ ಆಕೆಗೆ ದುಡ್ಡಿನ ಮಾಲೆ, ಚಿನ್ನವನ್ನು ತೋರಿಸಿ ಆಕೆಯನ್ನು ಕರೆಯುವ ಪರಿ ಹೆಣ್ಣನ್ನು ಗಂಡು ಯಾವಾಗಲೂ ತನ್ನ ಭೋಗದ ವಸ್ತುವಾಗಿ ಬಳಸಲು ಕಾಯುತ್ತಿರುತ್ತಾನೆ ಎಂಬುದಕ್ಕೆ ಸಾಕ್ಷಿಯಾಗಿದೆ. ಇದಕ್ಕೆ "ಭಾರತೀಯ ಸಾಂಸ್ಕೃತಿಕ ಪರಿಧಿಯಲ್ಲಿ, ಜೀವವಿರೋಧಿ ನೆಲೆಯಲ್ಲಿ, ದೇಹಪ್ರಧಾನವಾಗಿಟ್ಟುಕೊಂಡು ನಡೆಸಿದ ಸ್ತ್ರೀಯರ ಮೇಲಿನ ಲೈಂಗಿಕ ದೌರ್ಜನ್ಯದ ಸ್ವರೂಪ"[9]ವನ್ನು ಕಾಣುತ್ತೇವೆ ಎಂಬ ನಾವಡರ ಮಾತುಗಳನ್ನು ಇಲ್ಲಿ ನೆನೆಯಬಹುದಾಗಿದೆ.

ಮಧುಬಾಲ ಕತೆಯಲ್ಲಿ ಒಬ್ಬ ಡ್ಯಾನ್ಸ್ ಗರ್ಲ್ ಕೇವಲ ವೃತ್ತಿಯಾಗಿ ಇದನ್ನು ಆರಿಸಿಕೊಂಡಿದ್ದರೂ ಎಲ್ಲರೂ ಆಕೆಯನ್ನು ಮುಕ್ಕುವ ದುರಾಸೆಯಿಂದ ನೋಡುತ್ತಾರೆ. ಆಕೆಗೆ ಗೆಳತಿಯರಾಗಿ ತ್ರಿಪಾಠಿ ಹಾಗೂ ಕಾಮಿನಿಯರು ಇದ್ದರೂ ಅವರವರದೇ ಆದ ತುಡಿತ-ಮಿಡಿತಗಳ ಸಮ್ಮಿಲನಗಳನ್ನು ಇಲ್ಲಿ ಕಾಣಬಹುದು. ಮಧುಬಾಲಾಳಿಗೆ ತಾನೂ ಇತರರಂತೆ ಸಭ್ಯಸ್ತ ಗೃಹಿಣಿಯಂತಿರಬೇಕೆಂಬ ಹಂಬಲದ ಜೊತೆಗೆ ತನ್ನನ್ನು ಕಾಮದ ದೃಷ್ಟಿಯಿಂದ ನೋಡದ ಪ್ರೀತಿಯಿಂದ ಕಾಣುವ, ಮಮತೆ ತೋರಿ ಮುದ್ದುಗರೆಯುವ ಪ್ರೇಮಿಯ ಹಂಬಲವುಳ್ಳವಳಾಗಿರುತ್ತಾಳೆ. ಅದೇ ವಯಸ್ಸಿನ ಕಾಮಿನಿ ಅತಿಯಾದ ದೈವಭಕ್ತಿಯನ್ನು ಹೊಂದಿದವಳಾಗಿದ್ದು, ಈಕೆ ತನ್ನ ಮೇಕಪ್ ಕಿಟ್ಟನಲ್ಲಿ ಹಾಗೂ ತನ್ನ ಪರ್ಸ್‌ಗಳಲ್ಲಿ ಸಂಕಷ್ಟಹರ ಗಣೇಶನನ್ನು ಪೂಜಿಸುತ್ತಿರುತ್ತಾಳೆ. ಆಕೆಯ ಈ ಮನಸ್ಥಿತಿ ಅವರಲ್ಲೂ ಕೂಡ ವಿಶೇಷವಾಗಿ ಇರುವಂತಹ ದೈವಭಕ್ತಿಯನ್ನು ಸಾರುತ್ತದೆ. ಅದೇ ರೀತಿ ತ್ರಿಪಾಠಿಯೂ ಮತ್ತೊಬ್ಬ ಗೆಳತಿಯಾಗಿದ್ದು ಈಕೆ ತನ್ನ ಕಳೆದು ಹೋದ ತನ್ನ ತಾಯಿಯನ್ನು ಹುಡುಕುವುದರಲ್ಲಿ ದಿನಗಳ್ನು ದೂಡುತ್ತಿರುತ್ತಾಳೆ. ಇದರಿಂದಾಗಿ ಅವರಲ್ಲಿಯೂ ಕೂಡ ಸಂಬಂಧಗಳ ಸೆಲೆಯೆಂಬುದು ವಿಶಾಲವಾಗಿ ಹರಡಿಕೊಂಡಿದ್ದು ಅದನ್ನು ಕಳೆದುಕೊಳ್ಳಲು ಯಾರೂ ಇಚ್ಛಿಸುವುದಿಲ್ಲ ಎಂಬುದು ಎಳೆ ಇಲ್ಲಿ ಗೊತ್ತಾಗುತ್ತದೆ. ಮಾತ್ರವಲ್ಲದೆ, ಮಧುಬಾಲಾಳು ಬಯಸಿದ ಬದುಕು ಸಿಗುವಂತಾದರೂ, ಆಕೆ ಒಂದು ದಿನದ ಆ ತೃಪ್ತಿಯನ್ನು ಅನುಭವಿಸಿ ಅದರಲ್ಲಿ ತಾನು ಮುಂದುವರೆಯಲು ಅಸಾಧ್ಯವೆಂದು ಅರಿತು ತನ್ನ ಇಚ್ಛೆಯ ಪಯಣವನ್ನು ಅರ್ಧಕ್ಕೆ ನಿಲ್ಲಿಸಿ, ಅಲ್ಲಿಂದ ತಾನು ತನ್ನದೇ ಆದ ನೆಲೆಗೆ ಹಿಂದಿರುಗುವ ಪರಿಯನ್ನು ಕತೆಯಲ್ಲಿ ಕಾಣಬಹುದು. ಅವಳ ವಿಸ್ತೃತವಾದ ರೂಪವನ್ನು ನೋಡೋಣ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಾಚೀನ ಕಾಲದಿಂದ ದೇವದಾಸಿ ಎಂಬ ಹೆಸರಿನಲ್ಲಿ ಸ್ತ್ರೀಯನ್ನು ತಮ್ಮ ಆಸೆ-ಅಭಿಲಾಷೆಗಳನ್ನು ಪೂರೈಸುವ ಒಂದು ವಸ್ತುವಾಗಿ ಬಳಸಿಕೊಂಡು ಪೋಷಿಸಿದ ಅನೇಕ ನಿದರ್ಶನಗಳಿವೆ. ಇಂದಿಗೂ ದೇಶದ ಹಲವು ಕಡೆ ಇದು ಜೀವಂತವಾಗಿ ಉಳಿದಿದೆ. ದೇವಾಲಯಗಳಲ್ಲಿ ದೇವರಿಗಾಗಿ ಮತ್ತು ದೇವರ ಸೇವೆಗಾಗಿ ಎಂಬ ಹೆಸರಿನಲ್ಲಿ ರಂಗಮಂಟಪಗಳಲ್ಲಿ ನೃತ್ಯ ಮಾಡಿಸುತ್ತಿದ್ದರು. ಆದರೂ ಆ ಸೇವೆ ಸಲ್ಲುತ್ತಿದ್ದುದು ಅಂದಿನ ಪ್ರತಿಷ್ಠಿತ ವ್ಯಕ್ತಿಗಳಿಗೆ ಮಾತ್ರ ಎಂಬುದು ವಾಸ್ತವ. ಅಷ್ಟೇ ಅಲ್ಲದೆ, ಬಂಗಾರದ ಹೆಣ್ಣುಗಳೆಂದು ರಾಜ ಮಹಾರಾಜರು ಮತ್ತು ಶ್ರೀಮಂತರು ಇವರುಗಳನ್ನು ಬಳಸಿಕೊಂಡು ಯಾವುದೇ ಹೊಣೆಗಾರಿಕೆ ಇಲ್ಲದೆ ಮೋಜನ್ನು ಅನುಭವಿಸುತ್ತಿದ್ದರು. ಬಹುಶ: ಇದೇ ಪ್ರವೃತ್ತಿ ವರ್ತಮಾನದಲ್ಲಿ ಬಾರ್‌ಗಳಲ್ಲಿ ಮತ್ತು ಕ್ಯಾಸಿನೋಗಳಲ್ಲಿ ಡ್ಯಾನ್ಸ್ ಗರ್ಲ್‌ಗಳಾಗಿ ದುಡಿಸಿಕೊಳ್ಳುವಲ್ಲಿ ಸರ್ವವ್ಯಾಪಿಯಾಗುತ್ತಿದೆ. ಭಾರತ ಮಾತ್ರವಲ್ಲದೆ ಥೈಲ್ಯಾಂಡಿನಂತಹ ದೇಶದಲ್ಲಿ ದೇಶದ ಹಣಗಳಿಕೆಯ ಒಂದು ಮೂಲ ಉದ್ಯಮವಾಗಿ ಈ ಮಹಿಳೆಯರ ನೃತ್ಯ ಬಳಕೆಯಾಗುತ್ತಿದೆ. ಇದು ಅತ್ಯಂತ ವಿಷಾದದ ಸಂಗತಿಯೂ ಹೌದು. ಇಲ್ಲಿ ಮಧುಬಾಲಗಳಂತಹವರಿಗೆ ಬದುಕಿನ ಅನಿವಾರ್ಯ ಕಾರಣಕ್ಕಾಗಿ ಇವರಿಗೆ ಇದೊಂದು ವೃತ್ತಿ ಹಾಗೂ ಇದೊಂದು ಅನಿವಾರ್ಯವಾಗಿದೆ. ಆದರೆ ನೋಡುಗರಿಗೆ ಅವಳೊಂದು ಬಳಸಿಕೊಳ್ಳಲು ಯೋಗ್ಯವಾದ ಭೋಗವಸ್ತುವಿನಂತೆ ಕಾಣುತ್ತಾಳೆ. ಆದರೆ, ವಾಸ್ತವದ ಸಂಗತಿಯೆಂದರೆ ಅವರಿಗೆ ಅವರದೇ ಆದ ಬದುಕಿದೆ, ಕನಸಿದೆ. ಸತ್ಯ, ಶೌಚ, ಶೀಲ ಎಲ್ಲವೂ ಇದೆ. ಇಂತಹ ಕಾಮಾಂಧರ ಮಧ್ಯೆಯೂ ಇದನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತಿರುವುದು ನಮಗೆ ಈ ಕತೆಯಲ್ಲಿ ತಿಳಿದು ಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಮಧುಬಾಲಾಳನ್ನು ಕಾಣಬಹುದಾಗಿದೆ.

'ಮಧುಬಾಲಾ' ಕತೆಯಲ್ಲಿ ಮಧುಬಾಲಾಳು ಎಲ್ಲರ ಬೇಡಿಕೆಯ ಹೆಣ್ಣಾಗಿರುತ್ತಾಳೆ. ಈಕೆಯ ಒಲವಿಗಾಗಿ ಪರಿತಪಿಸುವ ಬಹಳ ಮಂದಿ ಶ್ರೀಮಂತರು ಈಕೆಗೆ ಹಣ, ಹೊನ್ನುಗಳ ಆಮಿಷವನ್ನು ಒಡ್ಡಿದರೂ ಈಕೆ ಬಯಸುವುದು ಏಕಾಂತ ಭಾವೆಯನ್ನು ಮಾತ್ರ. ಹೀಗಿರುವಾಗ ಈಕೆಯ ಮನವನ್ನು ಅರಿತವಳಂತೆ ಈಕೆಯ ಗೆಳತಿ ಕಾಮಿನಿ ಏಕಾಂತ್‌ಭಾವೆಗೆ ಆಕೆಯನ್ನು ಹೊರಗೆ ಸುತ್ತಾಡಲು ಕರೆದುಕೊಂಡು ಹೋಗು ಎಂದಾಗ, ಮಧುಬಾಲ ಅವನನ್ನು ತನ್ನ ಹತ್ತಿರದವ ಎಂಬಂತೆ ಹೇಳಿ ಅಲ್ಲಿಂದ ಕಾಲ್ತೆಗೆಯುತ್ತಾಳೆ. ಅಲ್ಲದೆ ತನ್ನ ಹುಟ್ಟುಹಬ್ಬದ ದಿನ ತನ್ನ ಆಸೆ ಈಡೇರುತ್ತದೆ ಎಂಬುದು ಅವುಗಳಿಗೆ ಸಂತೋಷವೇ ಸರಿ. ಏಕೆಂದರೆ ಆಕೆ ಬಯಸುತ್ತಿದ್ದುದು ತಮ್ಮ ಪ್ರೀತಿಸುವ ಗಂಡಿಗಾಗಿ ಇದಕ್ಕಾಗಿ ಅವಳು ಹಂಬಲಿಸುತ್ತಿದ್ದಳು. ಸಮಾಜದಲ್ಲಿ

ತನ್ನನ್ನು ಗೌರವದಿಂದ ಕಾಣುವ ಹೆಂಡತಿಯ ಪದವಿಯನ್ನು ಆಕೆ ಬಯಸುತ್ತಿದ್ದಳೇ ಹೊರತು ಹಾಸಿಗೆಯ ಮರು ಕ್ಷಣದ ಸುಖವಲ್ಲ. ಹೀಗಾಗಿ ತನ್ನ ಬಯಕೆಯಂತೆ ಎಲ್ಲಾ ಕಡೆ ಸಂತೋಷದಿಂದ ಓಡಾಡುತ್ತಾಳೆ. ತನ್ನ ಗೆಳತಿಯ ಕಳೆದು ಹೋದ ತಾಯಿಯ ಹುಡುಕಾಟವನ್ನೂ ಮಾಡುತ್ತಾಳೆ. ಇವೆಲ್ಲ ಒಬ್ಬ ನೃತ್ಯ ಕಲಾವಿದೆಯು ಹೊರಗಿನವರಿಗೆ ತಳುಕು ಬಳುಕಿನ ವೈಯ್ಯಾರವನ್ನು ಮಾತ್ರ ತೋರಿಸುವವಳಾಗಿ ಕಾಣುತ್ತಾಳೆ. ಆದರೆ, ಅವಳಲ್ಲಿಯೂ ಅಷ್ಟೇ ನೋವುಗಳು ತುಂಬಿರುತ್ತವೆ. ಅಲ್ಲದೆ ಆಟೋಚಾಲಕ ಏಕಾಂತ್‌ಭಾವೆಗೆ ಒಳ್ಳೆ ಹುಡುಗೀನೇ ಹೊಡೆದೆ ಎಂದಾಗ ಇಲ್ಲಿ ಆಕೆಯ ಎರಡೂ ರೀತಿಯ ಸ್ವಭಾವಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಆಕೆಯು ಅಂದದಲ್ಲಿಯೂ ಹಾಗೂ ನಡವಳಿಕೆಯಲ್ಲಿಯೂ ಅಷ್ಟೇ ಒಳ್ಳೆಯ ಸ್ವಭಾವದವಳಾಗಿರುತ್ತಾಳೆ. ಹಾಗೆಯೇ ಆಕೆ ಮರಳುವಾಗ ಪ್ಲೈ ಓವರ್ ಮೇಲೆ ಹೋಗಲು ಬಯಸುತ್ತಾ ಮೌನವಾಗಿ ಕುಳಿತಿರುತ್ತಾಳೆ. ಹೆಣ್ಣಿನ ಒಂದು ಮೌನವೂ ಕೂಡ ಒಂದು ಭಾಷೆಯೇ. ಏಕೆಂದರೆ, ಹೆಣ್ಣಿನ ಕಣ್ಣಿರು, ನಗು, ಮೌನ ಇವುಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಭಾಷೆಯ ರೂಪದಲ್ಲಿ ಬಳಸಿಕೊಳ್ಳುವುದುಂಟು. ಹಾಗೆ ಬರುವಾಗ ಇದ್ದಕ್ಕಿದ್ದಂತೆ ಆಕೆ ಗಾಡಿಯಿಂದ ಕೆಳಗಿಳಿದು ವಾಪಸ್ಸು ಹೊರಟು ಹೋಗುತ್ತಾಳೆ.

ಆಗ ಆಕೆಯ ಮನಸ್ಥಿತಿಯನ್ನು ಅರಿಯುವುದಾದರೆ, ತಾವು ಬಯಸಿದ ಬದುಕು ತಮಗೆ ದೊರಕುತ್ತಿದೆ ಎಂದು ಖುಷಿಯಲ್ಲಿರುವಾಗಲೇ ನಾವು ಅದನ್ನು ಅನುಭವಿಸಲು ಸಾಧ್ಯವಿಲ್ಲ. ಏಕೆಂದರೆ, ಇದಕ್ಕೆ ಸಂಬಂಧಿಸಿದಂತೆಯೇ ಹಲವಾರು ಸಂಸಾರಗಳು ಅದರ ಆಧಾರದಲ್ಲಿ ಜೀವನ ನಡೆಸುತ್ತಿರುತ್ತವೆ. ಆಕೆಯನ್ನು ನಂಬಿ ಅವಳ ಕುಟುಂಬ ಇರುತ್ತದೆ. ಅದನ್ನು ಕಾಪಾಡುವುದು ಅವಳ ಜವಾಬ್ದಾರಿಯಾಗಿರುತ್ತದೆ. ಇಷ್ಟು ಮಾತ್ರವಲ್ಲದೆ, ಇವರ ನಿಜನಾಮ ಬೇರೆಯಿದ್ದು, ಅವರನ್ನು ಇಲ್ಲಿ ಬೇರೆ ಹೆಸರಿನಿಂದ ಕರೆಸಿಕೊಳ್ಳುತ್ತಿರುತ್ತಾರೆ. ಏಕೆಂದರೆ ಇವರಿಂದ ತಮ್ಮ ಮನೆತನದ ಪ್ರತಿಷ್ಠೆಗೆ ಕುಂದುಂಟಾಗಬಾರದು ಎಂಬುವುದು ಅವರ ಉದ್ದೇಶವಾಗಿರುತ್ತದೆ. ಅಷ್ಟೇ ಅಲ್ಲದೆ ಮಧು ತನ್ನ ಗೆಳತಿಯ ತಾಯಿಯನ್ನು ಹುಡುಕುತ್ತಾ ಹೋದಾಗ ವೃದ್ಧೆಯೊಬ್ಬಳು ಸಿಕ್ಕಿ ನಿನ್ನ ತಾಯಿ ಸಿಕ್ಕಿದರೇ?. ನಾನೇ ಬರಲೇ ನಿನ್ನೊಂದಿಗೆ ಎಂದು ಕೇಳಿದಾಗ ಮಧುಬಾಲ ಅಲ್ಲಿಂದ ಹೆದರಿ ಓಡುತ್ತಾಳೆ. ಇದು ಈಕೆ ತನ್ನ ಗೆಳತಿಯ ತಾಯಿಯನ್ನು ಎಂದೂ ಕಾಣದಿದ್ದರೂ ಅವರನ್ನು ಹುಡುಕುವ ಈಕೆಯ ಗುಣ ಮೆಚ್ಚುವಂತದ್ದೇ. ಆದರೆ ಇಲ್ಲಿ ಗಮನಕ್ಕೆ ಬರುವ ಮತ್ತೊಂದು ವಿಚಾರವೆಂದರೆ, ಪ್ರತಿಯೊಬ್ಬರೂ ತಾಯಿಯ ಪ್ರೀತಿ, ಮಮತೆಯನ್ನು ಹಂಬಲಿಸುವವರೇ. ಆದರೆ ಬೇರೊಬ್ಬ ಹೆಂಗಸು ನನ್ನನ್ನು ನಿನ್ನ ತಾಯಿಯಂತೆ ಸ್ವೀಕರಿಸು ಎಂದುಕೇಳಿದಾಗ ಅವರನ್ನು ಸ್ವೀಕರಿಸುವ ಮನಸ್ಥಿತಿ ನಮಗೆ ಇರುವುದಿಲ್ಲ ಎಂಬುದು ಕತೆಯಿಂದ ಗೊತ್ತಾಗುತ್ತದೆ.

ಈ ಕತೆಯಲ್ಲಿ ಬರುವ ಮತ್ತೊಬ್ಬ ಕಲಾವಿದೆ ಮಧುವಿನ ಸಹೋದ್ಯೋಗಿ ಗೆಳತಿ ಕಾಂಟಲಗಾ ಕಾಮಿನಿ. ಈಕೆಗೆ ದೇವರ ಮೇಲೆ ವಿಪರೀತ ಭಕ್ತಿ. ಈಕೆಯ ಆರಾಧ್ಯ ದೈವ ವಿಘ್ನ ವಿನಾಶಕ ಗಣೇಶ. ಸಂಕಷ್ಟಹರ ಗಣೇಶ ಚತುರ್ಥಿಯ ದಿನದಂದು ಈಕೆ ಐದಾರು ತಾಸು ನಿಂತು ಗಣೇಶನ ದರ್ಶನ ಮಾಡುವ ಹಠಯೋಗಿ. ಅಷ್ಟೇ ಅಲ್ಲದೆ ತನ್ನ ಡ್ರೆಸ್ಸಿಂಗ್ ರೂಮಿನಲ್ಲಿ ಗಣೇಶನ ಚಿತ್ರಪಟಗಳನ್ನು ಅಂಟಿಸಿಕೊಂಡಿರುತ್ತಾಳೆ. ಒಂದು ಸಲ ಸೇಠ್‌ನ ತಮ್ಮ ದೇವಸ್ಥಾನ ಕಟ್ಟಲು ಹಣ ಕೇಳಲು ಬಂದಾಗ ಆಕೆ ನಮ್ಮ ದೇವರಿಗೆ ಆಲಯ ಎಲ್ಲ ಬೇಡ, ಪರ್ಸಿನಲ್ಲೇ ಜೋಪಾನವಾಗಿ ಇರ್ತಾನೆ. ಅದು ನಮ್ಮ ರವಿಕೆಯಲ್ಲಿ ಇನ್ನೂ ಜೋಪಾನವಾಗಿ ಬೆಚ್ಚಗೆ ಇರುತ್ತದೆ ಇಷ್ಟೇ ಸಾಕು ಎಂದು ಹೇಳುತ್ತಾಳೆ. ಅಲ್ಲದೆ ನಮಗೆ 'ದಿನಗೂಲಿ ಮಾಡುವ ದೇವರೆ ನಮಗೆ ಬೇಕು'[10] ಎಂದಾಗ ಇವರೆಲ್ಲರ ಒಟ್ಟು ಮನಸ್ಥಿತಿ ಅರಿವಿಗೆ ಬರುತ್ತದೆ. ಯಾಕೆಂದರೆ, ಪೂಜೆ, ಪುನಸ್ಕಾರ, ವ್ರತ ನಿಷ್ಠೆ, ನೇಮಗಳು ತಮಗೆ ಮಾತ್ರ ಸೀಮಿತವಾಗಿರುವುವು ಎಂಬಂತೆ ಕೆಲವು ಮಂದಿ ಇರುವಾಗ, ಅಂತಹವರನ್ನು ಮೀರಿಸುವಂತ ದೈವಭಕ್ತಿ ಈಕೆಯಲ್ಲಿದೆ. 'ದನ ತಿನ್ನೋರಿಗೆ ಗೊಬ್ಬರದ ಮೇಲೆ ಆಣೆ' ಎಂಬಂತೆ ಇವರು ಮಾಡುವ ಕೆಲಸವೇ ಬೇರೆ ಎಂದು ಇತರರು ಕೆಟ್ಟ ಅಭಿಪ್ರಾಯ ಪಡುತ್ತಾರೆ. ಆದರೆ, ಇವರಿಗೂ ಅಲ್ಲಿನ ಬದುಕು ಕೇವಲ ವೃತ್ತಿ. ಬುದಕಿಗಿಂತ ಸಾಮಾನ್ಯರಂತೆ ತಾವು ಬದುಕಬೇಕೆಂಬ ಆಸೆಯನ್ನು ಹೊಂದಿದ್ದರು ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಮಧುಬಾಲಾಳ ಮತ್ತೊಬ್ಬ ಗೆಳತಿ 'ಮಾಯಾ ತ್ರಿಪಾಠಿ' ಈಕೆ ತನ್ನ ತಾಯಿಯನ್ನು ಕಳೆದುಕೊಂಡು ಕೆಲವು ವರ್ಷಗಳೇ ಕಳೆದು ಹೋದರೂ ಆಕೆಯನ್ನು ಹುಡುಕುವುದರಲ್ಲೇ ನಿರತಳಾಗಿ ಕೊನೆಗೆ ಕೈಚೆಲ್ಲಿ ಕೂರುತ್ತಾಳೆ. ಆದರೆ ಭಿಕ್ಷುಕಿಯರ ಸಾಲನ್ನು ಕಂಡಾಗ ಮಾತ್ರ ಆಕೆಗೆ ಕರುಳು ಹಿಂಡುವಂತೆ ಆಗುತ್ತದೆ. ಇಲ್ಲಿ ಅವರು ಮಾಡುವ ಕೆಲಸ ಹೊಟ್ಟೆಪಾಡಿಗಾಗಿ. ಯಾವುದಾದರೂ ಸರಿಯೇ. ಆದರೆ ಅದಕ್ಕೆ ಸಮಾಜದಲ್ಲಿ ಮನ್ನಣೆ ಸಿಗಲಿ, ಸಿಗದೇ ಇರಲೀ ಅವರೂ ಕೂಡ ಸಾಮಾನ್ಯರಂತೆ ಪ್ರೀತಿ, ವಿಶ್ವಾಸ, ಮಮತೆ, ಅನುಕಂಪ, ವಾತ್ಸಲ್ಯಗಳನ್ನು ಬಯಸುತ್ತಾರೆ. ಹಾಗೂ ಅವುಗಳಿಗಾಗಿ ಹಂಬಲಿಸುತ್ತಾರೆ. ಆದರೆ ಅವರ ಬದುಕಿನ ಅನಿವಾರ್ಯತೆಗಾಗಿ ಹಾಗೂ ತಾವು ಹೊಂದಿರುವ ಜವಾಬ್ದಾರಿಗಳನ್ನು ನಿರ್ವಹಿಸುವ ಸಲುವಾಗಿ ಇಂತಹ ಕಡೆ ಕೆಲಸ ಮಾಡುತ್ತಿರುತ್ತಾರೆ. ಆದ್ದರಿಂದ ಇಂತಹ ಕಲಾವಿದರಿಗೂ ಗೌರವ ಸಲ್ಲಿಸುವಚಮನಸ್ಥಿತಿ ನಮ್ಮದಾಗಬೇಕಾಗಿದೆ.

ಜಯಂತ್ ಕಾಯ್ಕಿಣಿಯವರ ಪ್ರಮುಖ ಕಥಾಸಂಕಲನಗಳಲ್ಲಿ ಒಂದಾದದ್ದು 'ಅಮೃತ ಬಳ್ಳಿಯ ಕಷಾಯ', ಈ ಕಥಾಸಂಕಲನದ ಪ್ರಮುಖ ಕತೆ 'ಮೋಗ್ರಿಯ ಸತ್ಸಂಗ'. ಇದರಲ್ಲಿ ಮೋಗ್ರಿಯು ಒಂದು 'ಸ್ಲಂ ಬಾಲೆ'

ಯಾಗಿ ಅಲ್ಲಿಯವರ ಜೀವನ ಪಾಠಗಳಂತೆ ನಡವಳಿಗಳನ್ನು ರೂಢಿಸಕೊಂಡಿರುತ್ತಾಳೆ. ಈಕೆಗೆ ತಂದೆಯೊಂದಿಗೆ ಅಷ್ಟು ಬೆರೆತು ಅಭ್ಯಾಸವಿಲ್ಲವಾದರೂ, ಈಕೆಗೆ ಬೆಳೆದು ದೊಡ್ಡವಳಾದ ನಂತರ ತಂದೆಯ ವಿಚಾರಗಳು ಗೊತ್ತಾಗುತ್ತವೆ. ಈಕೆ ಹೈಸ್ಕೂಲ್ ಶಿಕ್ಷಣವನ್ನು ಪೂರೈಸಿದಳು. ಅಲ್ಲದೆ ಗೆಳೆತಿಯೊಂದಿಗೆ ಸೇರಿ ಶೆಟ್ಟಿಯ ಮಗನ ಹೊಸದಾಗಿ ನಿರ್ಮಾಣವಾಗುತ್ತಿರುವ ಕಟ್ಟಡದಲ್ಲಿ ಗುಪ್ತನಿಧಿ ಆಟವನ್ನು ಕಂಡು ಹೇಸಿ ವಾಪಸ್ಸಾದವಳು. ಅಲ್ಲದೆ, ಗೆಳತಿಗೆ ಶೆಟ್ಟಿ ಮಗನ ಸಹಾಯದಿಂದ ಗರ್ಭಪಾತ ಕೂಡ ಮಾಡಿಸಲು ಸಹಾಯಕಳಾದವಳು. ಹೀಗಿರುವ ಈ ಹೆಣ್ಣು ಬಾರ್‌ನಲ್ಲಿ ಡ್ಯಾನ್ಸ್ ಗರ್ಲ್ ಆಗಿ ಕೆಲಸಕ್ಕೆ ಸೇರಿದಾಗ ಕೆಲವರು ನಿಕೃಷ್ಟರಾಗಿ ಕಾಣುತ್ತಾರೆ. ಅಲ್ಲದೆ ಅದೂ ಬೇಡವೆಂದು ನಮತರ ಲೆಕ್ಕ ಬರೆಯುವ ಕೆಲಸಕ್ಕೆ ಲಾಡ್ಜ್‌ಗೆ ಸೇರುತ್ತಾಳೆ.

ಅಲ್ಲಿ ಅಣ್ಣ ತಮ್ಮಂದಿರು ಮೂರು ಮಂದಿ ಇದ್ದು , ಅವರು ಈಕೆ ಆಫೀಸಿಗೆ ತಡವಾಗಿ ಬಂದರೆ ಸಾಕು ಪರಿತಪಿಸುತಿರುತ್ತಾರೆ. ಮೊದಲ ವ್ಯಕ್ತಿ ಈಕೆಯ ಜೊತೆ ತನ್ನ ಎಲ್ಲ ವಿಚಾರಗಳನ್ನು ಹೇಳಿಕೊಳ್ಳುತ್ತಿರುತ್ತಾನೆ. ಈತನೊಬ್ಬ ಕಲಾಕಾರನೂ ಹೌದು. ಒಂದು ಸಲ ಈಕೆಯನ್ನು ತನ್ನ ಮನೆಗೆ ಕರೆದುಕೊಂಡು ಹೋದಾಗ ಅಲ್ಲಿ ಕಾಮಾಟಿ ಮಹಿಳೆಯರು ಇರುತ್ತಾರೆ. ಈಕೆಯನ್ನು ಕಂಡು ಒಳ್ಳೆಯ ಹುಡುಗಿಯೇ ಜೊತೆಯಲ್ಲಿ ಬಂದಿದ್ದಾಳೆ ಮುದುಕನೊಂದಿಗೆ ಎಂದು ಛೇಡಿಸಿದಾಗ, ಈಕೆ ತನ್ನ ಮಗಳಂತೆ ಎಂದು ಹೇಳುತ್ತಾನೆ. ಅಲ್ಲದೆ ತುಂಬಿದ ಬಸುರಿಯೊಬ್ಬಳ ಯೋಗಕ್ಷೇಮವನ್ನು ವಿಚಾರಿಸುತ್ತಾನೆ. ಇಲ್ಲಿಂದ ಮರಳಿದ ಮೋಗ್ರಿಗೆ ತನ್ನ ತಂದೆಯ ಆರೋಗ್ಯ ಸರಿಯಲ್ಲದ ಕಾರಣ ತಾಯಿ ಬಾಯಿ ಬಡಿದುಕೊಳ್ಳುವುದನ್ನು ಕಂಡು ಆಕೆಯನ್ನು ಗಂಡನಲ್ಲಿಗೆ ಕಳುಹಿಸುತ್ತಾಳೆ. ಒಟ್ಟಾರೆಯಾಗಿ ಹೆಣ್ಣು ಕಲಾವಿದೆಯಾಗಿ ಸಂಪಾದನೆಮಾಡುವಾಗ ಒಂದು ರೀತಿಯ ನೋವು, ಬೇರೆಯದೇ ಕೆಲಸವನ್ನು ಮಾಡುವಾಗ ಒಂದು ರೀತಿಯ ನೋವು. ಆದರೆ ಗಂಡಿಗೆ ಎಲ್ಲಾ ಬಂಧಗಳಲ್ಲೂ ಮುಕ್ತವಾಗಿ ಬದುಕುವ ಅರ್ಹತೆ ಇದ್ದರೆ, ಹೆಣ್ಣಿಗೆ ಅವುಗಳಿಂದ ಬಂಧನ ತಪ್ಪಿದ್ದಲ್ಲ. ಎಂಬುದು ಈ ಕತೆಯಲ್ಲಿ ಅನಾವರಣಗೊಳ್ಳುತ್ತದೆ.

ಮೋಗ್ರಿಯು ಒಬ್ಬ ಕಲಾವಿದೆಯಾಗಿ ಬಾರ್‌ನಲ್ಲಿ ಡ್ಯಾನ್ಸ್ ಗರ್ಲ್ ಆಗಿ ಸಪ್ಲಯರ್ ಆಗಿ ಕೆಲಸವನ್ನು ನಿರ್ವಹಿಸುತ್ತಿರುತ್ತಾಳೆ. ಈಕೆ ಬೆಳೆದದ್ದು ಸ್ಲಂನಲ್ಲಾದರೂ ಈಕೆ ಹೈಸ್ಕೂಲ್ ಹಂತವನ್ನು ಮುಗಿಸಿ, ಯೌವ್ವನ ಚಿಗುರುವ ವಯಸ್ಸಿನಲ್ಲಿ ಶೆಟ್ಟಿಯ ಮಗನೊಂದಿಗೆ ಗುಪ್ತನಿಧಿಯ ಚಲ್ಲಾಟವನ್ನು ಕಂಡಳಾದರೂ ಅದರಿಂದ ಹೇಸಿ ಹೊರಬಂದವಳು. ಈಕೆ ಗೆಳತಿಯ ಗರ್ಭಪಾತದಂತಹ ಸಂದರ್ಭದಲ್ಲಿ ಸಹಾಯಕ್ಕೆ ನಿಂತವಳು. ಅಷ್ಟೇ ಅಲ್ಲದೆ ತನ್ನ ಓರಗೆಯವರು ಮದುವೆಯ ಸಂತೋಷದಲ್ಲಿರುವಾಗ ತಾನು ಬಾರ್‌ನಲ್ಲಿ ಕೆಲಸ ಮಾಡುತ್ತಿರುತ್ತಾಳೆ. ಗೆಳತಿ ದಯವಿಟ್ಟು ಮದುವೆಗೆ ಬಾರದೆ ಇದು ಒಂದು ಉಪಕಾರ ಮಾಡು ಎಂದು

ಬೇಡುತ್ತಾಳೆ. ಈಕೆ ಮದುವೆಗೆ ಬಂದರೆ ತನ್ನ ಮರ್ಯಾದೆಗೆ ಕುಂದು ಎಂಬ ಆಲೋಚನೆ ಇವಳದು. ಅಲ್ಲದೆ ಅಲ್ಲಿ ಕೆಲಸ ಮಾಡುವಾಗ ತನ್ನ ಗೆಳತಿಯ ತಮ್ಮ ಬಾರ್‌ನ ಒಂದು ಆಟದಲ್ಲಿ ತಲ್ಲೀನವಾದಾಗ ಈಕೆ ಆತನಿಗೆ ಬುದ್ಧಿವಾದ ಹೇಳಲು ಹೋಗಿ ಅವನಿಂದ ಅವಮಾನಿತಳಾಗುತ್ತಾಳೆ. ವೃತ್ತಿಯ ಮೂಲಕ ವ್ಯಕ್ತಿಯ ಅಂತಸ್ತನ್ನು ಅಳೆಯುವ ಅದರಲ್ಲೂ ಮಹಿಳೆಯನ್ನು ಇನ್ನು ನಿಕೃಷ್ಟವಾಗಿ ಕಾಣುವ ಸ್ಥಿತಿ ಇಲ್ಲಿದೆ. ಅಂದರೆ ತಾನೂ ಮರ್ಯಾದೆಯಿಂದ ಬದುಕನ್ನು ಕಟ್ಟಿಕೊಳ್ಳಲು ಮೋಗ್ರಿ ಬಯಸುತ್ತಿದ್ದರೂ ಅಂತಹ ಜಾಗಗಗಳಿಗೆ ಹೆಣ್ಣುಮಕ್ಕಳು ಹೋಗುವುದು ನಿಷಿದ್ಧವಾದ ಕಾರಣ, ಅಂಥ ಜಾಗದಲ್ಲಿ ಕೆಲಸ ಮಾಡುವುದು ತಪ್ಪು ತಿಳಿಯುವವರಿಗೆ ದಾರಿ ಮಾಡಿಕೊಡುತ್ತದೆ. ಜೊತೆಗೆ ಹಣದ ಅವಶ್ಯಕತೆ ಇದ್ದು. ಎಲ್ಲಿ ಕೆಲಸ ಸಿಕ್ಕರೂ ಮಾಡುವ ಅನಿವಾರ್ಯತೆ ಇರುವ ಎಷ್ಟೋ ಹೆಣ್ಣುಮಕ್ಕಳು ಇಂಥ ಕಡೆಯಲ್ಲಿ ಕೆಲಸ ಮಾಡುತ್ತಾರೆ. ಆದರೆ ಸಮಾಜದಲ್ಲಿ ಗೌರವವೂಕೂಡ ಸಿಗುವುದಿಲ್ಲ. ಇದರಿಂದಾಗಿ ಎಷ್ಟೋ ಮಂದಿ ಮರ್ಯಾದೆಗೆ ಅಂಜಿ ಈ ರೀತಿಯ ಕೆಲಸವನ್ನು ನಿರಾಕರಿಸುವುದೂ ಉಂಟು. ಅದೇ ಪರಿಸ್ಥಿತಿ ಅಲ್ಲಿ ಮೋಗ್ರಿಗೆ ಎದುರಾದಾಗ ಆಕೆಯೂ ಕೂಡ ಈ ಕೆಲಸವನ್ನು ಬಿಟ್ಟು ಬೇರೆ ಕಡೆಲೆಕ್ಕ ಬರೆಯುವ ಕೆಲಸಕ್ಕೆ ಸೇರುತ್ತಾಳೆ. ಅಲ್ಲದೆ ಮೋಗ್ರಿಯ ಗೆಳತಿ ಮದುವೆಗೆ ಬರಕೂಡದು ಎಂದವಳು ಕೊನೆಗೆ ಗಂಡನಿಂದ ತಿರಸ್ಕೃತಳಾದಾಗ ಹಾಗೂ ಮಗುವೂ ಇಲ್ಲದಾದಾಗ ಮೋಗ್ರಿಯ ಬಳಿ ಜೀವನಕ್ಕೊಂದು ಕೆಲಸದ ಅನಿವಾರ್ಯತೆ ಇದೆ. ಬಾರ್‌ನಲ್ಲಾದರೂ ಪರವಾಗಿಲ್ಲ ನನಗೊಂದು ಕೆಲಸ ಕೊಡಿಸು ಎಂದು ಕೇಳಿದಾಗ ಸಮಾಜದಲ್ಲಿ ಬಾಳುವೆ ಎನ್ನುವುದು ನಾವು ನಡೆಯುವ ರೀತಿಯಲ್ಲಿಯೇ ಇರುತ್ತದೆ. ಅದನ್ನು ಯಾರೊಂದಿಗೂ ಹೇಳಿ ಹೀಗಳೆಯಬಾರದು ಎಂದು ತಿಳಿಯುತ್ತದೆ. ಹಾಗೆ ಮೋಗ್ರಿಯಂತೆ ಎಷ್ಟೋ ಮಂದಿ ಹೆಣ್ಣುಮಕ್ಕಳು ಕೆಟ್ಟ ದೃಷ್ಟಿಗಳಿಗೆ ಗುರಿಯಾಗಿ ಮನಸ್ಸಿಲ್ಲದ ಮನಸ್ಸಿನಿಂದ ಕೆಲಸ ನಿರ್ವಹಿಸುತ್ತಿರುವ ಪರಿಸ್ಥಿತಿ ಸಮಾಜದಲ್ಲಿದೆ. ಇಂತಹದರ ಅತಂತ್ರ ಪರಿಸ್ಥಿತಿಯನ್ನು ಕಾಯ್ಕಿಣಿಯವರ ಈ ಕತೆಯಲ್ಲಿ ಅನಾವರಣಗೊಳಿಸಿರುವುದನ್ನು ಕಾಣಬಹುದು. ಇಂತಹ ಇಕ್ಕಟ್ಟುಗಳ ಮಧ್ಯೆಯೂ ಬದುಕನ್ನು ಕಟ್ಟಿಕೊಳ್ಳುಲು ಹೆನಗುವುದೇ ಇವರ ವಿಶಿಷ್ಟತರಯಾಗುತ್ತದೆ.

ಒಟ್ಟಾರೆಯಾಗಿ ಕಲಾವಿದೆಯರ ಮೇಲೆ ನಡೆಯುವ ಶೋಷಣೆಗಳು ಹಲವಾರು. ಇದರ ಸ್ವರೂಪ ಸಂಕೀರ್ಣವಾದುದು. ಅದು ಹಲವಾರು ಬಗೆಯಲ್ಲಿ ಹರಿದು ಹಂಚಿಹೋಗಿರುತ್ತದೆ. ಮೇಲ್ವರ್ಗ, ಮೇಲ್ಜಾತಿಯವರಲ್ಲಿ ಇದೇ ನೃತ್ಯ ಕಲೆ ಇದ್ದರೆ ಅದು ಅವರಿಗೆ ಕೀರ್ತಿ, ಗೌರವ ಹಣ ಪ್ರಶಸ್ತಿಗಳನ್ನು ತಂದು ಕೊಡುತ್ತದೆ. ಆದರೆ ಬದುಕಿನ ಅನಿವಾರ್ಯಕ್ಕಾಗಿ ನೃತ್ಯಗಾರ್ತಿಯಾದವರಿಗೆ ಈ ಸೌಲಭ್ಯಗಳಿಲ್ಲ. ಬದಲಾಗಿ ಆರೋಪಗಳಿಗೆ, ಶೋಷಣೆಗಳಿಗೆ ಇವರು ಬಲಿಯಾಗುವುದೇ ದುರಂತ ಸಂಗತಿ. ತಮ್ಮ ಕುಟುಂಬದಿಂದ ಅಂದರೆ, ಗಂಡನಿಂದಲೂ ಶೋಷಿಸಲ್ಪಡುತ್ತಿರುವವರನ್ನೂ ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ. ಇಂದಿನ

ಮಹಿಳಾ ಜಾಗೃತಿಯ ಸಂದರ್ಭದಲ್ಲಿ ಪುರುಷ ಕೇಂದ್ರಿತ ಈ ಸಾಂಸ್ಕೃತಿಕ ಮೌಲ್ಯಗಳನ್ನು ಪುನರ್ ವಿಮರ್ಶಿಸಬೇಕಾದ ಅಗತ್ಯವಿದೆ. ಈ ಆಲೋಚನೆಗಳನ್ನು ಓದುಗರಲ್ಲಿ ಮೂಡಿಸುವಲ್ಲಿ ಕಾಯ್ಕಿಣಿಯವರು ಕಟ್ಟಿಕೊಡುವ ಚಿತ್ರಣಗಳು ಸಹಕರಿಸುತ್ತವೆ.

- ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಸಣ್ಣ ಕಲಾವಿದರನ್ನು ಮುಖ್ಯವಾಹಿನಿಯಲ್ಲಿ ಯಾರೂ ಗುರುತಿಸದಿರುವವರನ್ನು ತಮ್ಮ ಕತೆಗಳಲ್ಲಿ ಅಂತಹವರನ್ನು ಅನಾವರಣಗೊಳಿಸುತ್ತಾರೆ. ಏಕೆಂದರೆ ಒಂದು ಚಿತ್ರದ ಮುಖ್ಯ ಪಾತ್ರವಹಿಸುವ ನಾಯಕ-ನಾಯಕಿಯರನ್ನು ಜನತೆ ಗುರುತಿಸುತ್ತಾರೆ. ಆದರೆ ಅದಕ್ಕೆ ಪೂರಕವಾಗಿರುವ ಪಾತ್ರಗಳನ್ನು ಗುರುತಿಸುವವರು ಕಡಿಮೆ. ಇಂದು ನಾಯಕ-ನಾಯಕಿಯರ ಹುಚ್ಚು ಅಭಿಮಾನದ ಗುಂಗಿನಲ್ಲಿ ತಮ್ಮ ಪ್ರಾಣವನ್ನೇ ಕಳೆದುಕೊಳ್ಳುವ ಮಂದಿಯನ್ನು ಕಾಣುತ್ತೇವೆ. ಆದರೆ ಅಂತಹ ಮಂದಿಗೆ ಪೂರಕವಾಗಿ ನಿಂತ ಹಲವಾರು ಪಾತ್ರಗಳ ಬಗ್ಗೆ ಜಯಂತ್ ಕಾಯ್ಕಿಣಿಯವರು ಬೆಳಕನ್ನು ಚೆಲ್ಲುತ್ತಾರೆ.
- ಬೇರೆಯವರಿಗೆ ಮನೋರಂಜನೆಯನ್ನು ನೀಡುತ್ತಾರೆ. ಆದರೆ ಬದುಕು ಕಟ್ಟಲು ಸಾಹಸದ ಅವಶ್ಯಕತೆ ಇದ್ದೇ ಇರುತ್ತದೆ. ಇಂಥದೊಂದು ಕತೆಯನ್ನು "ತೂಫಾನ್ ಮೇಲ್"ನಲ್ಲಿ ಕಾಣಬಹುದಾಗಿದೆ. ತೂಫಾನ್ ಮೇಲ್ ಒಂದು ವೇಗವಾಗಿ ಬಂದು ಹೋಗುವ ಒಂದು ರೈಲಾದರೂ ಅಂತಹ ಓಡುವ ರೈಲಿನಿಂದ ಜಿಗಿದು ತನ್ನ ಹೆಂಡತಿ ಮಗನಿಗೆ ಬೇಕಾದ ಗಂಡನ್ನು ನೀಡಿ ಮತ್ತೇ ಅದೇ ರೈಲಿಗೆ ನೆಗೆಯುವ ತೂಫಾನನ ಅಪ್ಪನ ಸಾಹಸ ಅಮೋಘ. ಕುಟುಂಬದ ಮೇಲಿನ ಇವನ ಪ್ರೀತಿಯೇ ಇಲ್ಲಿ ವಿಶಿಷ್ಟವಾದದು. ಬರಬರುತ್ತಾ ಇದು ನಿಂತು ಹೋದಾಗ ತೂಫಾನ್ ತನ್ನ ಮುನ್ನ ಎನ್ನುವ ಹೆಸರನ್ನೇ "ತೂಫಾನ್ ಮೇಲ್" ಎಂದು ಬದಲಾಯಿಸಿಕೊಳ್ಳುತ್ತಾನೆ. ಇದರಲ್ಲಿ ಇವನೊಬ್ಬ ಸ್ಟಂಟ್ ಕಲಾವಿದನಾಗಿದ್ದು, ಮಧುವಂತಿ, ಬಲರಾಂ, ಸೋನು, ಮುಂತಾದ ಪಾತ್ರಗಳು ಬರುತ್ತವೆ. ಈ ಕತೆಯಲ್ಲಿ ಸಣ್ಣ ಪಾತ್ರದಲ್ಲಿ ಸಹಕಲಾವಿದರಾಗಿ ಅಭಿನಯಿಸುವ ಕಲಾವಿದರ ಬದುಕಿನ ಬವಣೆಗಳನ್ನು ವಿವರಿಸಿದ್ದಾರೆ. ಅಷ್ಟೇ ಅಲ್ಲದೆ ಬಲರಾಂ ಮಧುವಂತಿಯನ್ನು ಮದುವೆಯಾಗಿದ್ದು, ಆಕೆಯ ಮೇಲೆ ನಂಬಿಕೆ ಇಲ್ಲದೆ ಅನುಮಾನದಿಂದ ಸಂಭಾಳಿಸುತ್ತಿರುತ್ತಾನೆ. ಸ್ಟಂಟ್ ಕಲಾವಿದನಾದ ಅವನು ಪ್ರಾಣಕ್ಕೆ ಕುತ್ತು ಬರುವಂತಹ ಇಂತಹ ಕೆಲಸ ಬೇಡವೇ ಬೇಡವೆಂದು ಕೈಚೆಲ್ಲಿ ಕೂತಿದ್ದಾನೆ. ಇಂತಹ ಜಗಳಗಳನ್ನು ಮನಃಪೂರ್ವಕವಾಗಿ ಆಲಿಸಿ ಅವರಿಗೆ ಸಮಾಧಾನ ಮಾಡುವ ದೊಡ್ಡಮನಸ್ಸು ತೂಫಾನ್‌ನದು. ಅಲ್ಲದೆ ಬಲರಾಂ ತನ್ನ ಹೆಂಡತಿ ವಿಚಾರವಾಗಿ ನಾನು ಅವಳನ್ನು ಮುಟ್ಟಲು

ಹೋದರೆ ನಾಚುತ್ತಾಳೆ. ಇಲ್ಲಿ ಬಿಗಿ ರವಿಕೆಯನ್ನು ತೊಟ್ಟು ಎದೆಯನ್ನು ಹಿಂದು ಮುಂದು ಮಾಡಿ ಕುಣಿಸುತ್ತಾಳಲ್ಲ ಇಲ್ಲಿ ನಾಚಿಕೆ ಇಲ್ಲವೇ ಎಂದು ತನ್ನ ವೈಯಕ್ತಿಕ ವಿಚಾರಗಳನ್ನು ಹೇಳಿಕೊಳ್ಳುವಷ್ಟು ಹತ್ತಿರದವನಾಗಿರುತ್ತಾನೆ ತೂಫಾನ್. ಬಲರಾಂನ ಕೆಟ್ಟತನದ ಅತಿರೇಕ ಇಲ್ಲಿದೆ. ತೂಫಾನ್ ಒಬ್ಬ ಸ್ಟಂಟ್ ಕಲಾವಿದನಾಗಿದ್ದು, ಈತ ತನ್ನ ತಂದೆಯ ಸಾಹಸ ಕಾರ್ಯ ಓಡುತ್ತಿರುವ ರೈಲಿನಿಂದ ನೆಗೆದು ಗಂಟು ಬಿಸಾಡಿ ಮತ್ತೆ ರೈಲಿಗೆ ಜಿಗಿಯುವ ಸಾಹಸಮಯ ದೃಶ್ಯವನ್ನು ಅವನನ್ನು ಸ್ಟಂಟ್ ಮಾಸ್ಟರನ್ನಾಗಿ ರೂಪಿಸಿದೆ. ಅಲ್ಲದೆ ಆತನೂ ಕೂಡ ಮುನ್ನ ಎಂಬ ಹೆಸರನ್ನು ತೂಫಾನ್ ಮೇಲ್ ಎಂಬುದಾಗಿ ಬದಲಾಯಿಸಿಕೊಳ್ಳುತ್ತಾನೆ. ಇದು ಚಿತ್ರರಂಗವನ್ನು ಪ್ರವೇಶಿಸಿದಾಗ ಆಗುವ ಒಂದು ಬದಲಾವಣೆ ಆಗಿದೆ. ಅಲ್ಲದೆ ಮಧುವಂತಿ ಬಂದು ತನ್ನ ದು:ಖಗಳನ್ನು ತೋಡಿಕೊಳ್ಳುವಾಗ ಆಕೆ ಈಗ ಬೇಡ ನೀನು ಕಷ್ಟದ ಶೂಟಿಂಗ್‌ನಲ್ಲಿದ್ದೀಯಾ ಅದನ್ನು ಮುಗಿಸು ನಂತರ ಹೇಳುವೆ ಎಂದು ಹೇಳುವಾಗ ಆಕೆಯಲ್ಲೂ ಆತನ ಯೋಗಕ್ಷೇಮದ ಕಾಳಜಿಯನ್ನು ಕಾಣಬಹುದು. ಅಷ್ಟೇ ಅಲ್ಲದೆ ಗ್ಲಾಸ್ ಒಡೆಯುವ ಸುಪ್ರಸಿದ್ಧ ಬೇಡಿಕೆಯ ಕಲಾವಿದ ಇವನಾಗಿದ್ದು ಕಡಿಮೆ ಹಣಕ್ಕೆ ಒಂದು ಶಾಟ್‌ಗೆ ಒಪ್ಪಿಗೆ ನೀಡಿರುವೆ, ಈಗಲೂ ಕೇಳು ತೊಂದರೆ ಇಲ್ಲ ಎಂದು ಯಾರೋ ಹೇಳಿದಾಗ ತೂಫಾನ್ ಮಾತು ಆಡಿದರೆ ಹೋಯಿತು. ಮುತ್ತು ಒಡೆದರೆ ಹೋಯಿತು ಎನ್ನುವಂತೆ ಮಾತಿಗೆ ಬೆಲೆಯನ್ನು ಕೊಡುತ್ತಾನೆಯೇ ಹೊರತು ದುಡ್ಡಿಗಾಗಿ ಅಲ್ಲ ಅದನ್ನು ಈತ "ಚುಪ್‌ರೇ ತಲೆ ತಿನ್ನಬೇಡ ನಾನೇನು ಮೈಮುಟ್ಟದ ಮೇಲೆ ರೇಟು ಹೆಚ್ಚುಮಾಡುವ ಕೆನಡಿ ಬ್ರಿಡ್ಜಿನ ಹುಡುಗಿ ಎಂದುಕೊಂಡೆಯಾ? ಮಾತು ಆದ ಮೇಲೆ ಮುಗೀತು. ಅಷ್ಟೂ ನಿಯತ್ತು ಇಲ್ಲದಿದ್ರೆ ಹ್ಯಾಗೆ?".[11] ಎನ್ನುವಾಗ ನಾವು ಒಂದು ವಿಚಾರವನ್ನು ಗಮನಿಸಬೇಕಾಗುತ್ತದೆ. ಇಂದು ಬಣ್ಣದ ಲೋಕದಲ್ಲಿ ವೇಷ ಹಾಕಿ ಮರೆಯುವ ಜನರ ಮಾತಿಗೆ ಬೆಲೆಯೇ ಇಲ್ಲ ಎಂದು ಎಲ್ಲರೂ ತಿಳಿಯುತ್ತಾರೆ. ಜೊತೆಗೆ ಕೆಲವೊಂದು ಸೌಲಭ್ಯಗಳನ್ನು ಅವರಿಗೆ ನೀಡುವುದೇ ಇಲ್ಲ (ಬ್ಯಾಂಕ್ ಸಾಲ) ಹೀಗಿರುವಾಗ ಕಲಾವಿದರೂ ಕೂಡ ಮಾತಿಗೆ ಹೆಚ್ಚಿನ ಬೆಲೆ ನೀಡುತ್ತಾರೆ ಎಂಬುದನ್ನು ಜಯಂತ್ ಕಾಯ್ಕಿಣಿಯವರ ಈಕತೆಯಿಂದ ಗೊತ್ತಾಗುತ್ತದೆ.

- ಅದೇ ರೀತಿಯಾಗಿ ಮತ್ತೊಬ್ಬ ಸ್ಟಂಟ್ ಕಲಾವಿದನಾಗಿ ಜೀವನ ರೂಪಿಸಿಕೊಂಡಿದ್ದ ಬಲರಾಂ ಈ ಉದ್ಯೋಗದಲ್ಲಿ ಯಾವುದೇ ರೀತಿಯ ಭರವಸೆಯನ್ನು ಕಾಣಲು ಸಾಧ್ಯವಿಲ್ಲ ಜೊತೆಗೆ ಹೆಚ್ಚುಕಡಿಮೆ ಆದರೆ ಪ್ರಾಣಕ್ಕೆ ಕುತ್ತು ಎನ್ನುವ ಕಾರಣದಿಂದಲೇ ಕೆಲಸವನ್ನೇ ಬಿಟ್ಟು ಮನೆಯಲ್ಲೇ ಕಾಲ ಕಳೆಯುತ್ತಿರುತ್ತಾನೆ. ಅವನೇ ತಿಳಿದುಕೊಂಡಿರುವಂತೆ " ಇನ್ಸೂರೆನ್ಸ್ ಇಲ್ಲ, ಮೆಡಿಕಲ್ ಇಲ್ಲ, ಸುಮ್ನೆ ಯಾಕೆ ಜೀವ ಜೋಖಿಂ ಮಾಡೋದು"[12] ಎಂದು ಹೇಳುತ್ತಾನೆ. ಅಂದರೆ ತಮ್ಮ ಒಂದು

ಸ್ಟಂಟ್‌ಗಳಿಂದ ಜನರನ್ನು ಪ್ರೇಕ್ಷಕರನ್ನು ರಂಜಿಸಬಹುದಾದರೂ ಅದರಿಂದ ಹೆಚ್ಚುಕಡಿಮೆ ಆದರೆ, ಪ್ರಾಣಕ್ಕೆ ಕುತ್ತು ಹೀಗಿರುವ ವ್ಯಕ್ತಿ ಅಂತಹ ಸಾಹಸಮಯ ಕೆಲಸವನ್ನು ನಿರ್ವಹಿಸುವುದೂ ಕೂಡ ಅಷ್ಟೇ ದುರ್ಲಬ. ಅವನು ಹೇಳಿದಂತೆ ಎಷ್ಟೋ ಸ್ಟಂಟ್‌ಗಳನ್ನು ಮಾಡುವಾಗ ಅವರುಗಳಿಗೆ ನೋವುಗಳು ಉಂಟಾಗುತ್ತವೆ. ಅಷ್ಟೇ ಅಲ್ಲದೆ ಅವರ ಸಂಭಾವನೆಯೂ ಕೂಡ ಕಡಿಮೆ ಇದ್ದು ಅವರು ಪಡೆದಿದ್ದೆಲ್ಲಾ ಅವರ ಚಿಕಿತ್ಸಾ ವೆಚ್ಚಕ್ಕೆ ಭರಿಸಬೇಕಾಗುತ್ತದೆ. ಜೀವಕ್ಕೆ ಕುತ್ತು ತರುವ ಕೆಲಸವನ್ನು ನಿರಾಕರಿಸಿದರು ಅವರು ಬೇರೆಲ್ಲೂ ಕೆಲಸಕ್ಕೆ ಹೋಗುವ ಧೈರ್ಯ ಮಾಡುವುದಿಲ್ಲ. ಏಕೆಂದರೆ , ಅದು ಪ್ರತಿಷ್ಠತೆಯ ಕಾರಣ. ಹಾಗಾಗಿ ಬಲರಾಂ ಮನೆಯಲ್ಲಿ ಹೆಂಡತಿಯ ಸಂಪಾದನೆಯಲ್ಲಿ ಕಾಲ ದೂಡುತ್ತಾ, ಅನುಮಾನ ಪಡುತ್ತಾ, ನೆಮ್ಮದಿಯನ್ನು ಹಾಳು ಮಾಡಿಕೊಂಡಿದ್ದಾನೆ. ಇಂದಿಗೂ ಇಂತಹ ಹಲವಾರು ಕಲಾವಿದರನ್ನು ಕಾಣಬಹುದಾದರೂ, ಅವರ ಬವಣೆ ಏನು ಎಂಬುದನ್ನು ಇಲ್ಲಿ ಕಾಯ್ಕಿಣಿ ಅನಾವರಣಗೊಳಿಸಿದ್ದಾರೆ.

- ಬಣ್ಣದ ಲೋಕದ ಬದುಕಿನ ಕನಸನ್ನು ಕಟ್ಟಿಕೊಂಡು ಹಳ್ಳಿಯಿಂದ ಪ್ಯಾಟೆಗೆ ಬರುವ ಬಹಳ ಮಂದಿಯನ್ನು ಕಾಣುತ್ತೇವೆ. ಆದರೆ, ಈ ಬಣ್ಣದ ಲೋಕದಲ್ಲಿ ಹೆಜ್ಜೆಯೂರಿ ನಿಲ್ಲಬೇಕಾದರೆ, ಅವರಿಗೆ ಬೆನ್ನುಗಾವಲಾಗಿ ಹಣ, ತಂದೆ-ತಾಯಿಯರ ಸಹಕಾರ ಜೊತೆಗೆ ಬೇರೆ ಕಡೆಯಿಂದ ಅಂದರೆ, ಪ್ರತಿಷ್ಠಿತ ವ್ಯಕ್ತಿಗಳ ಕಡೆಯಿಂದ ಸಹಕಾರಗಳು ದೊರೆತಾಗ ಮಾತ್ರ ಅವರು ಇಲ್ಲಿ ನೆಲೆಯೂರಲು ಸಾಧ್ಯವಾಗುತ್ತದೆ. ಅಂದ ಮಾತ್ರಕ್ಕೆ ಯಾವ ಸಹಾಯ/ಸಹಕಾರಗಳು ಇಲ್ಲದೆ ಇರುವವರು ನೆಲೆಯೂರಿಲ್ಲ ಎಂದಲ್ಲ, ಆದರೆ ಅವು ಬಹಳ ಮುಖ್ಯವಾಗಿರುತ್ತವೆ. ಹಾಗೆ ಹಳ್ಳಿಯಿಂದ ಮುಂಬಯಿಗೆ ಕನಸಿನ ಮೂಟೆಯೊಂದಿಗೆ ಬಂದವ ಮಿಥುನ-2. ಯಾರೋ ನೋಡಿ ನೀನು ಮಿಥುನ್ ಚಕ್ರವರ್ತಿಯಂತೆ ಇರುವೆ ಎಂದು ಹೊಗಳಿದಾಗ, ಆ ಹೊಗಳಿಕೆಯ ಗಾಳಿಗೋಪುರದಲ್ಲಿ ಕುಳಿತು ತೇಲಿದವನು ಮಿಥುನ್. ಆದರೆ ಆ ಗೋಪುರ ಉರುಳುವುದು ಅವನ ನಿಜವಾದ ಜೀವನಕ್ಕೆ ಕಾಲಿಟ್ಟಾಗ. ಅವನು ಆಸೆಯ ಬೆನ್ನೇರಿ ಮುಂಬಯಿ ತಲುಪಿದರೂ ಅವನು ಪಡೆಯ ಬೇಕೆಂದು ಓಡಾಡುವ ಕೆಲಸದಲ್ಲಿ ಅವನಿಗೆ ಸಿಗುವುದು ಅಲ್ಪ ಮಾತ್ರ. ಅದರಲ್ಲಿಯೇ ತೃಪ್ತಿ ಪಟ್ಟುಕೊಳ್ಳುವ ಗುಣವನ್ನು ಮಿಥುನ್ ಬೆಳೆಸಿಕೊಳ್ಳಬೇಕಾಗುತ್ತದೆ. ಮಿಥುನ್ ತನ್ನ ರೂಪವೇ ಅವನಿಗೆ ಒಂದು ವರವೆಂದು ತಿಳಿದಿದ್ದ ಆತ, ಆರೂಪವನ್ನು ಕ್ಯಾಮರಾದ ಮುಂದೆ ತೋರಿಸಲಾಗದೆ ಕೇವಲ ತನ್ನ ಸ್ಟಂಟ್‌ಗಳ ಮೂಲಕ ಗುರುತಿಸಿಕೊಳ್ಳುವಂತಾಗುತ್ತದೆ. ಶೂಟಿಂಗ್‌ಗಳಿಗೆ ಹೋದಾಗಲೂ ಕೂಡ ಇವನನ್ನು ಸ್ಟಂಟ್ ಕಲಾವಿದನಾಗಿ ಮಾತ್ರ ಆರಿಸಿಕೊಳ್ಳುವವರೇ ಹೊರತು ಅವನ ರೂಪದಿಂದಲ್ಲ

ಇಂತಹ ಎಷ್ಟೋ ಮಂದಿ ಈರೀತಿಯ ನೋವನ್ನು ಅನುಭವಿಸುತ್ತ ಇಂದಿಗೂ ಅದೇ ವೃತ್ತಿಗಳಲ್ಲಿ ಮುಂದುವರೆದುಕೊಂಡು ಹೋಗುತ್ತಿರುವರು.

- ಹಳ್ಳಿಯಿಂದ ಸಿನಿಮಾದ ಹುಚ್ಚು ಹೊಂದಿದ ಕೆಲವು ಮಂದಿ ತಮ್ಮ ರೂಪವೇ ಬಂಡವಾಳವಾಗುತ್ತದೆ ಎನ್ನುವ ಗುಂಗಿನಲ್ಲಿ ಸಿನಿಮಾದಲ್ಲಿ ಮಿಂಚಬೇಕು ಕ್ಯಾಮರಾ ಮುಂದೆ ಅಭಿನಯಿಸಬೇಕೆಂಬ ಆಸೆಯನ್ನು ಬಹಳಷ್ಟು ಮಂದಿ ಹೊಂದಿರುತ್ತಾರೆ. ಅಂತಹ ಕನಸನ್ನು ಹೊತ್ತುಮಾಯಾನಗರಿಗೆ ಬಂದವ ಮಿಥುನ್-2 ಏಕೆಂದರೆ ಈತ ಮಿಥುನ್ ಚಕ್ರವರ್ತಿಯನ್ನು ಹೋಲುವಂತೆ ಇರುವುದೇ ಅವನು ಈ ರಂಗಕ್ಕೆ ಬರಲು ಕಾರಣ. ಇಂದು ಎಷ್ಟೋ ಮಂದಿ ಸೆಲೆಬ್ರಿಟಿಗಳಂತ ತಾವಿದ್ದೇವೆ ಎಂಬ ಕಾರಣದಿಂದ ಅವರನ್ನು ಹೋಲುವಂತೆ ಮಾತಾಡುವ ಭಂಗಿ, ಅವರಂತೆ ನಡೆಯುವ ಶೈಲಿಗಳನ್ನು ಕಲಿತು 'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬಂತೆ ಹೊಟ್ಟೆ ಹೊರೆಯುವ ಜನರಿದ್ದಾರೆ. ಅದು ಅವರವರ ವೈಯಕ್ತಿಕ ಇರಲಿ, ಹೀಗೆ ಕನಸಿನ ಕುದುರೆಯ ಬೆನ್ನೇರಿ ಬಂದ ಮಿಥುನ್ ರಸ್ತೆಯ ಬದಿಯಲ್ಲಿ ಸ್ಟೌ ರಿಪೇರಿ ಮಾಡುವ ಅಂಗಡಿಯಲ್ಲಿ ಕೆಲಸ ಮಾಡಿ ರಸ್ತೆಯ ಅಂಚಿನಲ್ಲಿ ಬೀಡಾಡಿಗಳು ಮಲಗುವಲ್ಲಿ ಮಲಗುತ್ತಾನೆ. ಇವನಿಗೆ ಯಾರೋ ಒಬ್ಬ ಮಧ್ಯವರ್ತಿಯ ಸಹಾಯದಿಂದ ಅವಕಾಶ ಸಿಗುತ್ತದೆ.ಆತನಿಗೆ ತನ್ನ ಇಚ್ಛೆ ಈಡೇರುತ್ತದೆ ಎನ್ನುವಲ್ಲಿ ' ಸ್ವರ್ಗಕ್ಕೆ ಮೂರೇ ಗೇಣು' ಎನ್ನುವಾಗಲೇ ಆತನಿಗೆ ನಟಿಸುವ ಅವಕಾಶ ದೊರಕುತ್ತದೆ. ಆದರೆ, ಆತನಿಗೆ ಕ್ಯಾಮರಕ್ಕೆ ತನ್ನ ಮುಖ ತೋರಿಸುವ ಅವಕಾಶ ದೊರಕುವುದೇ ಇಲ್ಲ.• ಇಂದಿಗೂ ಎಷ್ಟೋ ಮಂದಿ ಗಾಂಧೀನಗರದಲ್ಲಿ ಅವಕಾಶಕ್ಕಾಗಿ ಬೀದಿಬೀದಿ ಅಲೆಯುತ್ತಿರುತ್ತಾರೆ. ಆದರೆ ಅವಕಾಶಗಳು ದೊರೆತರೂ ಈ ರೀತಿಯ ಪಾತ್ರಗಳೇ ಅಂದರೆ ಪೋಷಕ ಪಾತ್ರವೇ ಹೊರತು ಪ್ರಧಾನ ಪಾತ್ರವಂತೂ ಅಲ್ಲವೇ ಅಲ್ಲ ಹೀಗೆ ಮಿಥುನ್ ಒಂದು ಕಡೆಯಲ್ಲಿ ಅವಕಾಶ ಸಿಕ್ಕಿದ್ದಕ್ಕೆ ಸಂತೋಷ ಅನುಭವಿಸಿದರೂ ಮತ್ತೊಂದು ಕಡೆ ತಾನು ಅಂದುಕೊಂಡಂತಹ ಅವಕಾಶ ದೊರೆಯಲಿಲ್ಲ ಎಂಬ ಬೇಜಾರು ಮತ್ತೊಂದು ಕಡೆ ಅವನಿಗಿದೆ. ಹೀಗೆ ಮಿಥುನ್ ಕೆಲವೊಂದು ಡೂಪ್ ಮಾಡುವ ಪ್ರಸಂಗಗಳು ಬಂದಾಗ ಆತನಿಗೆ ಕೆಲವೊಂದು ಮೂಳೆಮುರಿತಗಳು ಆಗುತ್ತವೆ . ಆದರೆ ಅವುಗಳನ್ನು ಕಷ್ಟಪಟ್ಟು ಮಾಡಿದ ನಂತರ ಅದಕ್ಕಾಗಿ ಮಿಥುನ್ ಚಕ್ರವರ್ತಿಯ ಫೋಸುಗಳನ್ನು ಹಾಕುತ್ತಾರೆ. ಹೀಗೆ ಇಂದಿನ ಜಗತ್ತಿನಲ್ಲೂ ಚಿತ್ರರಂಗಗಳಲ್ಲಿ ಪ್ರಖ್ಯಾತ ಪಡೆದ ನಟನೊಬ್ಬ ಹೆಚ್ಚಿಗೆ ಶ್ರಮಪಡದೇ ಅನಾಯಾಸವಾಗಿ ಹೆಸರುಗಳಿಸುತ್ತಿದ್ದಾರೆ. ಆದರೆ, ಹೆಚ್ಚು ಶ್ರಮವಹಿಸಿ ಪ್ರಾಣದ ಹಂಗನ್ನು ತೊರೆದು ನಟಿಸುವವರನ್ನು ಗುರುತಿಸದಿರುವುದೇ ಈ ಪ್ರಪಂಚದ್ದಾಗಿದ್ದರೆ, ಅಂತಹವರ ಬದುಕಿನ ಚಿತ್ರಣಗಳನ್ನು ಜಯಂತ್

ಕಾಯ್ಕಿಣಿಯವರ ಕತೆಗಳಲ್ಲಿ ಕಾಣಬಹುದಾಗಿದೆ. ಅಂತಹ ಸಣ್ಣ ಪಾತ್ರಗಳು ಹೇಗೆ ನಾಯಕರಿಗೆ ಪೋಷಕರಾಗಿ ನಿಂತು ತೆರೆಮರೆಯಲ್ಲಿ ತಮ್ಮನ್ನು ಅಡಗಿಸಿಕೊಂಡು ನಾಯಕರಿಗೆ ಹೇಗೆ ಸಹಾಯಕರಾಗಿ ನಿಲ್ಲುತ್ತಾರೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ, ಇಂದಿನ ದಿನಗಳಲ್ಲಿ ಪೋಷಕ ಪಾತ್ರಗಳ ನಟ ನಟಿಯರು ಜೀವನವನ್ನು ನಡೆಸಲು ಪ್ರಾಣವನ್ನು ಪಣವಾಗಿಟ್ಟು ಹೋರಾಡುತ್ತಿರುವವರನ್ನು ಕಾಣಬಹುದು. ಹೀಗೆ ಮಿಥುನ್ ಇಷ್ಟೆಲ್ಲಾ ಪ್ರಯತ್ನಗಳನ್ನು ಮಾಡಿದರೂ ಮಿಥುನ್ ಚಕ್ರವರ್ತಿ ಅವನಿಗೊಂದು ನಗೆಯನ್ನು ಸೂಚಿಸದೆ ಹೊರಟು ಹೋಗುತ್ತಾನೆ. ಅದು ಅಂದಿನ ನಾಯಕ ನಾಯಕಿಯರ ಪ್ರತಿಷ್ಠತೆಯನ್ನು ತಿಳಿಸುತ್ತದೆ. ಹೀಗಾಗಿ ಮಿಥುನ್‌ಗೆ ತನ್ನ ಪಾಲಿಗೆ ಬಂದದ್ದೇ ಇಷ್ಟು ಎಂದು ಸಮಾಧಾನಗೊಳ್ಳುತ್ತಾನೆ. ಹೀಗೆ ನಾಯಕ ನಾಯಕಿಯರು ಇಂದು ಪ್ರಖ್ಯಾತಿಯನ್ನು ಪಡೆದಿದ್ದಾರೆ ಎಂದರೆ ಅವರ ಹಿಂದಿರುವ ಹಲವಾರು ಕೈಗಳನ್ನು ಇಲ್ಲಿ ನೆನೆಯಬೇಕಾಗುತ್ತದೆ. ಅದು ಬಿಟ್ಟು ತಾನೊಬ್ಬನೇ ಈ ಮಟ್ಟಕ್ಕೆ ಬೆಳೆದೆ ಎಂದರೆ ಅದು ಅತಿಶಯೋಕ್ತಿಯೇ ಸರಿ. ಹಾಗಾಗಿ ಹತ್ತಿದ ಏಣಿಯನ್ನು ಒದೆಯದೆ ಅದು ಏರಲು ಸಹಾಯ ಮಾಡಿತು ಎಂಬುದನ್ನು ಅರಿತು ಅದನ್ನು ಇಳಿಯಲು ಹಾಗೆಯೇ ಸಹಾಯಕವಾಗುತ್ತದೆ ಎಂದು ಜೋಪಾನವಾಗಿ ಇಡಬೇಕು ಎಂಬುದನ್ನು ಮರೆಯಬಾರದು. ಅದೇ ರೀತಿ ಇಂದು ಪ್ರಖ್ಯಾತಿಗಳಿಸಿದವರು ಹೆಸರು ಮಾಡಲು ಸಹಕರಿಸಿದವರನ್ನು ಮರೆಯಬರದು ಎಂಬುದನ್ನು ತಿಳಿಯಬಹುದಾಗಿದೆ. ಮತ್ತೊಬ್ಬರನ್ನು ಎತ್ತರಕ್ಕೇರಿಸಿ ತಾವು ದಕ್ಕಿದಷ್ಟೇ ತಮ್ಮದು ಎಂದುಕೊಳ್ಳುವ ವಿಶಿಷ್ಟತೆ ಇವರದು. ಅಸೂಯೆ ಇವರಲಿಲ್ಲ.

- ಜಯಂತ್ ಕಾಯ್ಕಿಣಿಯವರು ಕಲಾವಿದರು ಎಲ್ಲರಿಗೂ ರಂಜನೆಯನ್ನು ನೀಡುವವರು ಅವರು ಎಷ್ಟು ಯಾತನೆಗಳನ್ನು ಅನುಭವಿಸುತ್ತಿರುತ್ತಾರೆ ಎಂಬುದನ್ನು ಇವರ ಕಥನಗಳಲ್ಲಿ ಕಾಣಬಹುದಾಗಿದೆ. ಅದು ಒಂದು ರೀತಿಯಲ್ಲಿ ಸಿನಿಮಾ ಚಿತ್ರರಂಗಕ್ಕೆ ಸೇರಿದವರಿರಬಹುದು, ನಾಟಕ ಕ್ಷೇತ್ರಕ್ಕೆ ಸೇರಿದವರಿರಬಹುದು ಇವರೆಲ್ಲ ಕಲೆಯೇ ಜೀವನ ಎಂದು ಪ್ರೇಕ್ಷಕರನ್ನು ರಂಜಿಸಲುತಮ್ಮಿಂದ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಅವರು ಪ್ರಯತ್ನಿಸುತ್ತ ಅದರಲ್ಲಿ ಯಶಸ್ವಿಯನ್ನು ಕಾಣುತ್ತಾ ಪ್ರೇಕ್ಷಕರ ಕಣ್ಣಿನಲ್ಲಿ ಅವರು ಒಂದು ರೀತಿಯ ಜಾದೂಗಾರರೇ ಆಗಿರುತ್ತಾರೆ. ಈ ರೀತಿಯ ಜಾದುಗಳನ್ನು ಮಾಡುವಾಗ ದೇಹದಲ್ಲಿ ಶಕ್ತಿಯೂ, ಅಷ್ಟೇ ಮುಖ್ಯವಾಗಿರುತ್ತದೆ. ದೇಹಕ್ಕೆ ವಯಸ್ಸಾದಂತೆ ಅವರಲ್ಲಿರುವ ಚೈತನ್ಯವೂ ಕಡಿಮೆಯಾಗುತ್ತಾ ಹೋಗುತ್ತದೆ. ಆಗ ಪ್ರೇಕ್ಷಕರಿಗೆ ಅದು ಅಷ್ಟು ಸೊಗಸು ಎನಿಸುವುದಿಲ್ಲ. ಹಾಗಂತ ಅಂತಹವರನ್ನು ಕಂಪನಿಯಿಂದ ತೆಗೆಯುವ ಮನಸ್ಸು ಬರುವುದಿಲ್ಲ. ಎಲ್ಲಾ

ಕ್ಷೇತ್ರಗಳಲ್ಲೂ ಪೈಪೋಟಿ ಇರುವಂತೆ ಈ ಸರ್ಕಸ್ಸಿನ ಕ್ಷೇತ್ರದಲ್ಲೂ ಯುವ ಪ್ರತಿಭೆಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಇಂತಹ ಕಲಾವಿದರ ಕತೆಯ ಹಂದರವನ್ನು ಜಯಂತರ 'ಬಾವಿಯಲ್ಲೊಂದು ಬಾಗಿಲು' ಎಂಬ ಕತೆಯಲ್ಲಿ ಕಾಣಬಹುದು. ಇಲ್ಲಿ ಸರ್ಕಸ್ಸಿನ ಮಿಲನ್ ಮೃತ್ಯುಕೂಪದ ಮೋಟಾರ್ ಸೈಕಲ್ ಸವಾರ ತೇಜಬಲಿ ಹಾಗೂ ಅದರ ಮೂಲಕ ರಾಂಪ್ಯಾರೇಯ ನಡುವಿನ ಮನಸ್ಸಿನ ತೊಳಲಾಟಗಳನ್ನು ಕಾಣಬಹುದು. ತನ್ನಿಂದ ಕಂಪನಿಗೆ ಯಾವ ಉಪಕಾರವೂ ಇಲ್ಲ ಎಂಬ ಭಾವನೆ ತೇಜಬಲಿಗೆ ಇದದರೆ, ತೇಜಬಲಿಯಂತಹ ಒಳ್ಳೆಯ ಕಲಾವಿದರನ್ನು ಸರಿಯಾಗಿ ನೋಡಿಕೊಳ್ಳಲು ತನ್ನಿಂದ ಸಾಧ್ಯವಾಗುತ್ತಿಲ್ಲ ಎಂಬ ತೊಳಲಾಟವನ್ನು ರಾಂಪ್ಯಾರೆಯಲ್ಲಿ ಕಾಣಬಹುದಾಗಿದೆ. ಒಟ್ಟಾರೆಯಾಗಿ ಕಲಾವಿದ ಹಾಗೂ ಮಾಲೀಕರ ಮನಸ್ಸಿನ ತೊಳಲಾಟವನ್ನು ಈ ಕತೆಯಲ್ಲಿ ಕಾಣಬಹುದಾಗಿದೆ. ಇವರಿಬ್ಬರ ಮನಸ್ಥಿತಿಯೂ ಇಲ್ಲಿ ವಿಶಿಷ್ಟ.

- ಕಲಾವಿದರ ಬದುಕನ್ನು ಕಟ್ಟಿಕೊಳ್ಳಲು ಸಾಹಸವನ್ನು ಮಾಡಲೇ ಬೇಕಾಗುತ್ತದೆ. ಮೊದಮೊದಲು ಸಂತೋಷಕ್ಕಾಗಿ ಆಸಕ್ತಿಯಿಂದ ಪ್ರಾರಂಭವಾದ ಈ ಸಾಹಸ ಕ್ರಿಯೆ ಕೊನೆಗೆ ಅದೇ ಬದುಕಿನನಿರ್ವಹಣೆಗೆ ಅನಿವಾರ್ಯವಾಗುತ್ತದೆ. ಆದರೆ ವಯಸ್ಸಾದಂತೆ ಅವರಲ್ಲಿ ಆ ಸಾಹಸ ಸಾಗುವುದಿಲ್ಲ. ಜೊತೆಗೆ ಪರಿಣಿತಿಯೂ ಸಾಕಾಗುವುದಿಲ್ಲ. ಹಾಗಾಗಿ ಒಂದು ಹಂತದವರೆಗೆ ಮಾತ್ರ ಅದರಲ್ಲಿ ಮುಂದುವರೆಯಬಹುದು. ಆದರೆ ತದನಂತರ ಪ್ರೇಕ್ಷಕರ ಮೆಚ್ಚುಗೆಯನ್ನು ಸಹ ಗಳಿಸಲು ಸಾಧ್ಯವಾಗುವುದಿಲ್ಲ. ಅದೇ ತರಹವಾಗಿ ಇಲ್ಲಿ ರಾಕೇಟ್ ತೇಜಬಲಿಗೆ ಎದುರಾಗುವ ಕಷ್ಟ ಈತ ಎಂತಹ ವ್ಯಕ್ತಿ ಎಂಬುದನ್ನು ರಾಂಪ್ಯಾರೇ ಹೇಳುವ "ನೀನು ಹುಲಿ ತೇಜಬಲೀ, ಹುಲಿ ಹುಲಿ ಉಪವಾಸ ಇದ್ದೀತು ಆದರೆ ಖಂಡಿತ ಹುಲ್ಲು ತಿನ್ನುವುದಿಲ್ಲ. ನೀನು ಹುಲ್ಲು ತಿನ್ನಬಾರದು. ನೀನು ವೀರ ಕುಶಲಕರ್ಮಿ ಸಮಾಜ ನಿನ್ನನ್ನು ತಲೆಯ ಮೇಲೆ ಇಟ್ಟುಕೊಳ್ಳಬೇಕು".[13] ಎಂದು ಹೇಳುವ ಮಾತುಗಳು ಆತನೊಬ್ಬ ಎಂತಹ ಕಲಾವಿದ ಎಂಬುದು ತಿಳಿಯುತ್ತದೆ. ಆದರೆ ದೇಹಕ್ಕೆ ವಯಸ್ಸಾದಂತೆ ಪ್ರೇಕ್ಷಕರ ಮನಸ್ಸು ಈಗ ಯೌವ್ವನದ ಚಿಲುಮೆ ಚಿಮ್ಮುತ್ತಿರುವ ಭಗನ್ ಮತ್ತು ಪಟ್ಟೋ ಕಡೆಗೆ ವಾಲುತ್ತಿರುವುದು ಗೊತ್ತಾಗುತ್ತದೆ. ಅಲ್ಲದೆ ತನ್ನಿಂದ ಮತ್ತೆ ಅಂತಹ ತಾರುಣ್ಯವನ್ನು ತರಲು ಅಸಾಧ್ಯ ಹಾಗೆಂದು ಮಾಲೀಕನ ಬಳಿ ತಾನು ಪ್ರಾಮಾಣಿಕವಾಗಿ ಹೋಗಿ ತನ್ನನ್ನು ಬಿಟ್ಟು ಬಿಡಿ ಹೋಗುತ್ತೇನೆ. ನಿಮಗೆ ತೊಂದರೆಯಾಗುವುದು ಬೇಡ ಎಂದು ಬಹಳ ವಿನಮ್ರವಾಗಿ ಬೇಡಿಕೊಳ್ಳುತ್ತಾನೆ. ಇವನ ಮನಸ್ಸಿನ ಅಗಾಧತೆಯೇ ಇವನ ವಿಶಿಷ್ಟತೆ. ಆದರೆ ಇಂದಿನ ಮೈಗಳ್ಳ ಕೆಲಸಗಾರರು ದೇಹದಲ್ಲಿ ಶಕ್ತಿ ಇದ್ದರೂ ಕೆಲಸ ಮಾಡದೆ ತಿಂಗಳಿಗೆ ಸಂಬಳ ಎಣಿಸಿಕೊಳ್ಳುವ

ಕೈಗಳನ್ನು ಕಾಣುತ್ತೇವೆ. ಆಗ ನಮಗೆ ತಿಳಿಯುವುದು ತೇಜಬಲಿ ಎಂತಹ ಪ್ರಾಮಾಣಿಕ ವ್ಯಕ್ತಿ ಎಂಬುದು ಆದರೆ ಇವರಿಗೆ ಯಾವುದೇ ರೀತಿಯ ಭದ್ರತೆಯು ದೊರೆಯದೇ ಜೀವನ ನಡೆಸುವುದು ಬಹಳ ಕಷ್ಟ ಎಂಬುದನ್ನು ಜಯಂತರು ಈ ಕತೆಯಿಂದ ಅನಾವರಣಗೊಳಿಸಿದ್ದಾರೆ.

- ಒಬ್ಬ ಕಲಾವಿದನ ಕಷ್ಟ ಹೇಗಿರುತ್ತದೋ ಹಾಗೆಯೇ ಒಬ್ಬ ಕಂಪನಿ ನಡೆಸುವವನ ಕಷ್ಟವೂ ಅಷ್ಟೇ ಇರುತ್ತದೆ. ಕಂಪನಿ ನಡೆಸುವ ಮಾಲೀಕ ಕೇವಲ ಸಂಪಾದನೆ ಮಾಡುವ ವ್ಯವಹಾರಿಕ ಮನುಷ್ಯನೆಂದು ಮಾತ್ರ ಗುರುತಿಸುತ್ತೇವೆ. ಆದರೆ ಆ ವ್ಯಕ್ತಿಗಳು ಅನುಭವಿಸುವ ತೊಂದರೆಗಳನ್ನು ಕಾಯ್ಕಿಣಿಯವರ ಕತೆಗಳು ಅನಾವರಣಗೊಳಿಸುತ್ತವೆ. ಮಾಲೀಕರು ಇಂದು ನಾಯಕನಿಂದ ತಮ್ಮ ಕಂಪನಿಗಳು ಓಡುತ್ತಿದೆಯಾದರೂ ಅವನಿಗೆ ಅಗತ್ಯವಿರುವ ಪೂರೈಕೆಗಳನ್ನು ನಾನೂ ಪೂರೈಸಲಾಗುತ್ತಿಲ್ಲ ಎಂದು ಅವರ ಮನಸ್ಸು ಹೇಗೆ ತುಡಿಯುತ್ತದೆ ಎಂಬುದನ್ನು ಅನಾವರಣಗೊಳಿಸಿದ್ದಾರೆ. ಅಷ್ಟೇ ಅಲ್ಲದೆ ತಮ್ಮ ಕಡೆಯಿಂದ ಪ್ರೇಕ್ಷಕರಿಗೆ ಯಾವ ರೀತಿಯ ನಿರಾಸೆಯೂ ಆಗಬಾರದು ಎಂದು ಅವರು ಎಲ್ಲಾ ರೀತಿಯ ಎಚ್ಚರಿಕೆಗಳನ್ನು ವಹಿಸುತ್ತಾರೆ. ರಾಮ್ ಪ್ಯಾರೇಯ ಸರ್ಕಸ್ಸಿನ ಕಂಪನಿ ಬೆಂಕಿಗೆ ಆಹುತಿಯಾಗಿ ನಷ್ಟವನ್ನು ಅನುಭವಿಸಿದ್ದರೂ ಆತ ತಾನು ತೇಜುಬಲಿಗೆ ಯಾವುದೇ ರೀತಿಯ ಅನುಕೂಲವನ್ನು ಮಾಡಿಕೊಡಲಾಗುತ್ತಿಲ್ಲ, ನೀನೊಬ್ಬ ದೊಡ್ಡಕಲಾವಿದ ಆದರೆ ನಿನ್ನ ಅದೃಷ್ಟ ಕೆಟ್ಟಿ "ನಮ್ಮಂತಹ ಚಿಲ್ಲರೆ ಸ್ಟಂಟ್ ಕಲೆಯ ಕಂಪನಿಗೆ ಬಂದಿದ್ದೀಯ, ನಿನ್ನಿಂದ ನಮಗೇನೋ ಒಳ್ಳೆಯದಗಿದೆ. ಆದರೆ ನಿನಗೆ ತಕ್ಕ ಸ್ಥಳ. ಮಾನ ಕೊಡುವ ಸ್ಥಿತಿ ನಮ್ಮದಲ್ಲ ಇದ್ದಲ್ಲೇ ಸುಧಾರಿಸಿಕೊಳ್ಳುವ"[14] ಎನ್ನುವ ಮಾತು ಆತನ ಮನಸ್ಸಿನ ಆಳವನ್ನು ತಿಳಿಸಿಕೊಡುತ್ತದೆ, ಏಕೆಂದರೆ ಕಂಪನಿಯ ಪ್ರತಿಯೊಬ್ಬ ಕೆಲಸಗಾರನು ಆ ಕಂಪನಿಯ ಮುಂದುವರೆಸುವ ಶಕ್ತಿಗಳಾಗಿರುವುದರಿಂದ ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಬ ತುಡಿತ ಪ್ರತಿಯೊಬ್ಬ ಮಾಲೀಕರಿಗೂ ಇರುತ್ತದೆ ಎಂಬುದು ಗೊತ್ತಾಗುತ್ತದೆ. "ನಿನ್ನನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿಲ್ಲ ಕ್ಷಮಿಸು".[15] ಎಂದು ಅಳುವಾಗ ಹಾಗೆಯೇ ನನಗೆ ಒಳ್ಳೆಯ ಸಮಯ ಬರಲಿ ನಿನಗೊಬ್ಬ ಅಸಿಸ್ಟಂಟ್ ಹುಡುಗನನ್ನು ಕೊಡುತ್ತೇನೆ ಎಂದು ಹೇಳುವಾಗ ಆಗಲಿ ಅವರಲ್ಲೂ ಕೂಡ ಆಶಾಭಾವನೆಯೊಂದಿಗೆ ಮುಂದೆ ಇಂತಹ ನಟರನ್ನು ಸಲುಹಬೇಕು ಎಂಬ ಭಾವವಿರುತ್ತದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಇಂದಿನ ಚಿತ್ರರಂಗದಲ್ಲಿ ವಯಸ್ಸಾದಂತೆ ಅವರನ್ನು ಮೂಲೆಗುಂಪು ಮಾಡಿ ಆ ಚಿತ್ರಕ್ಕೆ ಅವರಿಗೆ ನೀಡಬೇಕಾದ ಸಂಭಾವನೆಯನ್ನು ನೀಡಿ ಕಳುಹಿಸುತ್ತಾರೆ. ಮುಂದೆ ಅವರಿಗೂ–ತಮಗೂ ಸಂಬಂದವೇ ಇಲ್ಲ ಎಂಬ ರೀತಿಯಲ್ಲಿ ವರ್ತಿಸುತ್ತಾರೆ. ಆದರೆ ಕಾಯ್ಕಿಣಿಯವರು ಮಾಲೀಕರಿಗೂ

ಕೆಲವರಿಗೆ ಈ ರೀತಿಯ ಕೃತಜ್ಞತೆಯ ಅರಿವು ಬಹಳಷ್ಟು ಆಳವಾಗಿ ಇರುತ್ತದೆ ಎಂಬುದರ ವಿಶಿಷ್ಟತೆಯನ್ನು ಸ್ಪಷ್ಟಪಡಿಸುತ್ತಾರೆ.

➢ ಒಟ್ಟಾರೆಯಾಗಿ ಸಾಹಸ ಎಂಬುದು ಪ್ರೇಕ್ಷಕರಿಗೆ ಮನರಂಜನೆಯಾಗಿ ಕಂಡುಬಂದರೆ, ಕಲಾವಿದರಿಗೆ ಬದುಕು ಕಟ್ಟಿಕೊಳ್ಳಲು ಅನಿವಾರ್ಯವಾಗಿ ತೋರುತ್ತದೆ. ಪ್ರಾರಂಭದಲ್ಲಿ ಸಿಕ್ಕ ಆಸಕ್ತಿ, ಸಂತೋಷದಾಯಕವಾಗಿ ಆರಂಭಗೊಂಡ ಇದು ಬದುಕಿನ ನಿರ್ವಹಣೆಯ ಆಯಾಮವಾಗಿ ಕಂಡುಬರುತ್ತದೆ. ಬಿಟ್ಟರೆ ಬೇರೆ ದಾರಿಯೂ ಇಲ್ಲ. ಅದನ್ನು ಅವನು ಮಾಡಲೇ ಬೇಕು. ಆದರೆ ವಯಸ್ಸಾದಂತೆ ಇದು ದುಸ್ಸಾಧ್ಯ ಏಕೆಂದರೆ, ಒಂದು ಹಂತದವರೆಗೆ ಮಾತ್ರ ಅವನಿಂದ ಇದನ್ನು ಮಾಡಲು ಸಾಧ್ಯವಿರುತ್ತದೆ. ಆದರೆ ಆ ಹಂತ ಮೀರಿದರೆ ಅವನಿಂದ ಇದು ಅಸಾದ್ಯವೆನಿಸುತ್ತದೆ. ಮಾಡಲು ಹೋದರೆ ಅದಕ್ಕೆ ಬೇಕಾದ ಪರಿಣಿತ ಸಾಕಾಗುವುದಿಲ್ಲ ಎನಿಸುತ್ತದೆ. ಆಗ ಅವನು ಪ್ರೇಕ್ಷಕನಿಂದ ಮೆಚ್ಚುಗೆ ಗಳಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಕಂಪನಿಯ ಮಾಲೀಕರಿಗೆ ನಷ್ಟವಾದಂತೆ ಆಗುತ್ತದೆ. ಇದು ಅವರ ಅರಿವಿಗೂ ಬರುತ್ತದೆ. ಇಂತಹ ವಿಶಾದದಲ್ಲಿ ಅವನು ಬದುಕುತ್ತಿರುತ್ತಾರೆ. ಆದರೆ, ಸರ್ಕಾರದಿಂದ ಯಾವುದೇ ರೀತಿಯ ಪಾರಿತೋಷಕಗಳನ್ನು ನೀಡಿದರೂ, ಅವರಿಗೆ ವಯಸ್ಸಾದಾಗ ಅವರು ಹಿಂದೆ ಜನರನ್ನು ರಂಜಿಸದೆ ಎಂಬ ಸಂತೋಷದಲ್ಲೆ ಕಾಲವನ್ನು ದೂಡಬೇಕಾಗುತ್ತದೆ. ಇಂತಹ ಅನೇಕ ಕಲಾವಿದರ ಬದುಕಿನ ಬವಣೆಯನ್ನು ಈ ಕತೆಗಳು ಅನಾವರಣಗೊಳಿಸುತ್ತವೆ. ಅದರೆ ಅಂದಿನ ತುತ್ತಿನ ಚೀಲವನ್ನು ತುಂಬುವುದೂ ಕೂಡ ಅರಿವಿಗೆ ಕಷ್ಟವಿರುತ್ತದೆ ಎಂಬುದನ್ನು ಕಾಯ್ಕಿಣಿಯವರು ವಿವರಿಸಿದ್ದಾರೆ. ಕಲಾವಿದರ ವಿವಿಧ ಮುಖಗಳನ್ನು ಕಾಯ್ಕಿಣಿಯವರು ತಮ್ಮ ಕತೆಗಳಲ್ಲಿ ವರ್ಣಿಸುತ್ತ ಅವರ ವಿಸಿಷ್ಟತೆಯನ್ನು ಅನಾವರಣಗೊಳಿಸಿದ್ದಾರೆ.

ಕೊನೆಟಿಪ್ಪಣಿಗಳು.

8. ತುಫಾನ್ ಮೇಲ್–ಜಯಂತ್ ಕಾಯ್ಕಿಣಿ, ಪುಟ 66, 2005
9. ಪಾತರದವರು, ಪ್ರಕಾಶಾಕರು, ಪ್ರೋ.ಎಎ.ವಿ. ನಾವಡ, ನಿರ್ದೇಶಕರು, ಪುನರಾಂಗ, ಕ.ವಿ.ವಿ. ಹಂಪಿ, ಪುಟ 6
10. ಮಧುಬಾಲ–ಜಯಂತ್ ಕಾಯ್ಕಿಣಿ, ಪುಟ 22
11. ತುಫಾನ್ ಮೇಲ್–ಜಯಂತ್ ಕಾಯ್ಕಿಣಿ, ಪುಟ 66, 2005

12. ತುಫಾನ್ ಮೇಲ್-ಜಯಂತ್ ಕಾಯ್ಕಿಣಿ, ಪುಟ 66, 2005
13. ಬಾವಿಯೊಳಗೊಂದು ಬಾಗಿಲು- ಜಯಂತ್ ಕಾಯ್ಕಿಣಿ, ಪುಟ ಸಂಖ್ಯೆ 85
14. ಬಾವಿಯೊಳಗೊಂದು ಬಾಗಿಲು- ಜಯಂತ್ ಕಾಯ್ಕಿಣಿ, ಪುಟ ಸಂಖ್ಯೆ 85
15. ಬಾವಿಯೊಳಗೊಂದು ಬಾಗಿಲು- ಜಯಂತ್ ಕಾಯ್ಕಿಣಿ, ಪುಟ ಸಂಖ್ಯೆ 85

ವಿಶೇಷ ಮಹಿಳೆಯರು

ಸಾಮಾನ್ಯವಾಗಿ ಯಾವುದೇ ಮಹಿಳೆ ಒಂದು ಸಂಧರ್ಭವನ್ನು ಅಥವಾ ವ್ಯಕ್ತಿಯನ್ನು ಪರಿಗಣಿಸಬೇಕಾದರೆ, ತನ್ನದೇ ಆದ ನೆಲೆಯಿಂದಲೇ ಪರಿಗಣಿಸುವ ಪ್ರಯತ್ನವನ್ನು ಅವಳು ಮಾಡುತ್ತಾಳೆ. ಅಂದರೆ ಅದನ್ನು ಅವಳು ಅರಿತುಕೊಳ್ಳುವ ಮೊದಲು ಅದನ್ನು ಕುರಿತು ಮೊದಲು ಮೊದಲು ತಾಯಿಯಾಗಿ ಆಲೋಚಿಸುತ್ತಾಳೆ ಅಂದರೆ ಅಲ್ಲಿ ಒಂದು ಅಂತಃಕರಣ ಸದಾ ಜಾಗೃತವಾಗಿ ಅವಳಲ್ಲಿ ಇರುತ್ತದೆ ಯಾವ ಮಹಿಳೆಯು ಸಹ ಇದಕ್ಕೆ ಹೊರತಲ್ಲ. ಹಾಗೆಂದ ತಕ್ಷಣ ಆಕೆ ಬದುಕು ಅಷ್ಟಕ್ಕೆ ಸೀಮಿತವಲ್ಲ, ಹಾಗೆ ಸೀಮಿತ ಅಂದುಕೊಳ್ಳುವುದು ತಪ್ಪು. ಅವಳಲ್ಲಿ ಧೈರ್ಯವಿದೆ, ಸಹನಶೀಲತೆ ಇದೆ, ಬದುಕನ್ನು ಕಟ್ಟಿಕೊಳ್ಳುವ ನಿರ್ವಹಿಸುವ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಈ ಎಲ್ಲಾ ಗುಣಗಳೂ ಅವಳಲ್ಲಿ ಇವೆ. ಇಂತಹ ಸ್ವಾವಲಂಬಿಯಾಗಿ ಬದುಕನ್ನು ಕಟ್ಟಿಕೊಳ್ಳುವ ಸಬಲೆಯಾಗಿ ಹೆಣ್ಣು ನಿಲ್ಲುತ್ತಳೆ. ಅಷ್ಟೇ ಅಲ್ಲದೆ ತನ್ನ ಜೀವನದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಆಕೆ ಅದಕ್ಕೆ ಬದ್ಧಳಾಗಿ ಬದುಕುವ ಮನಸ್ಥಿತಿಯು ಸಹ ಅವಳಲ್ಲಿ ಇರುತ್ತದೆ. ಇಂತಹ ಪಾತ್ರಗಳು ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಅನಾವರಣಗೊಂಡಿವೆ. ಸ್ವಾವಲಂಬಿಯಾಗಿ ಬದುಕನ್ನು ಕಟ್ಟಿಕೊಂಡು ಅದರಲ್ಲೆ ಬದುಕುವ ಛಲವನ್ನು ಹೊಂದಿರುತ್ತಾಳೆ. ಯಾವುದೇ ರೀತಿಯಿಂದಲಾದರೂ ತನ್ನ ಬದುಕನ್ನು ಕಟ್ಟಿಕೊಂಡು ತನ್ನ ಕುಟುಂಬವನ್ನು ಸಲಹುತ್ತಾಳೆ. ಆ ಒಂದು ಬದ್ಧತೆ ಆಕೆಗೆ ಇರುತ್ತದೆ. ಆ ಬದ್ಧತೆಯನ್ನು ಅವಳು ಉಳಿಸಿಕೊಳ್ಳುತ್ತಾಳೆ. ಅಂತಹ ವಿಶಿಷ್ಟ ಪಾತ್ರಗಳನ್ನು ಕಾಯ್ಕಿಣಿಯವ ಕತೆಗಳಲ್ಲಿ ಕಾಣಬಹುದಾಗಿದೆ. ಹೆಣ್ಣು ಎಂದರೆ ಇಷ್ಟೇ ಆಕೆ ತಾಯಿ ಮಾತ್ರ, ಅಬಲೆ, ತ್ಯಾಗಿ ಮಾತ್ರ ಎಂದು ಸಮಾಜ ಅವಳನ್ನು ಗುರುತಿಸುತ್ತದೆ. ಅದಕ್ಕೂ ಮೀರಿ ತನ್ನ ವ್ಯಕ್ತಿತ್ವ ಸಾಮರ್ಥ್ಯವನ್ನು ಪ್ರಕಟ ಮಾಡುವ ಪ್ರಯತ್ನವನ್ನು ಮಾಡುತ್ತಾಳೆ. ಈ ಮೂಲಕ ಪೂರ್ವನಿರ್ಧಾರಗಳನ್ನು ಹೆಣ್ಣು ಸುಳ್ಳು ಮಾಡುತ್ತಾಳೆ. ಅಂತಹ ಪ್ರಬುದ್ಧತೆ ಹೆಣ್ಣಿಗೆ ಇದೆ. ಮನಸ್ಸಿನ ಪ್ರಬುದ್ಧತೆ ಇದ್ದಾಗ ಮಾತ್ರ ಅದನ್ನು ಮಾಡಲಿಕ್ಕೆ ಸಾಧ್ಯ. ಬರೀ ದೈಹಿಕ ಶ್ರಮದಿಂದ ಮಾತ್ರವಲ್ಲ ಮನಸ್ಸಿನ ಪ್ರಬುದ್ಧತೆ ಇಲ್ಲಿ ಬಹಳ ಮುಖ್ಯವಾಗುತ್ತದೆ. ಪ್ರಬುದ್ಧತೆಯಿಂದ ನಡೆದುಕೊಳ್ಳುವ ಸಾಮರ್ಥ್ಯ ಹೆಣ್ಣಿಗೆ ಇದೆ. ಅರಿಸ್ಟಾಟಲ್ ಹೇಳುತ್ತಾರೆ, ಹೆಣ್ಣಿಗೆ ಆತ್ಮವೇ ಇಲ್ಲ, ಹಾಗಾಗಿ ಅವಳನ್ನು ವ್ಯಕ್ತಿಯಾಗಿ ಪರಿಗಣಿಸುವ ಅಗತ್ಯವಿಲ್ಲ ಎಂದು ಹೇಳುತ್ತಾರೆ. ಆದರೆ, ಇಲ್ಲಿ ಆತ್ಮವೂ ಇದೆ. ಆತ್ಮಶಕ್ತಿಯೂ ಇದೆ ಎಂಬುದನ್ನು ನಾವಿಲ್ಲಿ ಗುರುತಿಸಬಹುದಾಗಿದೆ. ಪರಂಪರೆಯಿಂದ ನೋಡಿದಾಗಲೂ ಅದನ್ನೆಲ್ಲ ಸಾಧ್ಯಮಾಡಿ ತೋರಿಸಿದ್ದಾಳೆ. ಅಲ್ಲದೆ ಇವತ್ತಿಗೂ ಸಹ ಅದನ್ನೆಲ್ಲ ಸಾಧ್ಯಮಾಡಿ ತೋರಿಸುತ್ತಿದ್ದಾಳೆ. ಅದನ್ನು ನಾವು ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ

ಗುರುತಿಸಬಹುದಾದ ಪ್ರಯತ್ನವನ್ನು ಮಾಡುತ್ತಿದ್ದೇವೆ. ಉದಾ: ಡೈಮಂಡ್ ಸರ್ಕಸ್ಸಿನಲ್ಲಿ ಒಂದು ಹೆರಿಗೆಯ ಕಥೆಯಲ್ಲಿ ಬರುವ ಡಂಪಿ ಪಾತ್ರವಿರಬಹುದು, ಮಧುಬಾಲ ಕತೆಯಲ್ಲಿ ಬರುವ ಮಧುಬಾಲ, ತೂಫಾನ್ ಮೇಲ್ ಕತೆಯಲ್ಲಿ ಬರುವ ಮಧುವಂತಿಯರನ್ನು ನಾವಿಲ್ಲಿ ಕಾಣಬಹುದು. ಹೆಣ್ಣಾಗಿ ಇವರು ಬದುಕನ್ನು ಹೇಗೆ ಕಟ್ಟಿಕೊಳ್ಳುತ್ತಿದ್ದಾರೆ ಎಂಬುದನ್ನು ಹಾಗೆಯೇ ತಮ್ಮ ಘನತೆಯನ್ನು ಉಳಿಸಿಕೊಳ್ಳುವ ಪ್ರಯತ್ನದ ಜೊತೆಗೆ ಆಕ್ರಮಣಕಾರಿಯಾಗಿ ಬರುವ ಪುರುಷರ ಸಾಮರ್ಥ್ಯವನ್ನು ಅವರು ದಿಕ್ಕರಿಸಿ ಕೆಲವು ಉಪಾಯಗಳಿಂದಲೋ ಅಥವಾ ನೇರವಾಗಿಯೋ ಸೆಣೆಸಾಡಿ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಅಲ್ಲದೆ ವೃತ್ತಿಯನ್ನು ವೃತ್ತಿಯಾಗಿ ಸ್ವೀಕರಿಸುತ್ತಾರೆಯೇ ಹೊರತು ಆ ಮೂಲಕ ತಮ್ಮ ವೈಯಕ್ತಿಕ ಬದುಕನ್ನು ಕಳೆದುಕೊಳ್ಳುವುದು ಮಹಿಳೆಯರಿಗೆ ಇಷ್ಟವಿರುವುದಿಲ್ಲ. ಇಷ್ಟೇ ಅಲ್ಲದೆ, ಗಂಡನಿಂದಲೂ ಅನುಮಾನಗಳಿಗೆ ಗುರಿಯಾದಾಗ ಅವರು ಹೇಗೆ ಮಾನಸಿಕವಾಗಿ ಜರ್ಜರಿತರಾಗುರತ್ತಾರೆ ಎಂಬುದನ್ನು ಹಾಗೆ ಜರ್ಜರಿತರಾದರೂ ಸಹ ತಮ್ಮ ದೇಹದ ಸೌಂದರ್ಯವನ್ನು ಕಾಪಾಡಿಕೊಂಡು ವೃತ್ತಿ ನಿರ್ವಹಣೆಗಾಗಿ, ಗಂಡನೊಂದಿಗೂ ಹೊಂದಿಕೊಂಡು ಪ್ರೇಕ್ಷಕರಿಗೂ ಆಕೆ ಉತ್ತಮ ಪ್ರದರ್ಶನವನ್ನೂ ಸಂತೋಷವನ್ನೂ ನೀಡಬೇಕು,. ಈ ಮಧ್ಯೆ ಮಧುವಂತಿ ಹೈರಾಣಾದರೂ ಸೋಲದೆ, ಶೋಷಿತಳಾದರೂ ಈ ಮಧ್ಯೆ ಬದುಕನ್ನು ಉಳಿಸಿಕೊಳ್ಳುವ ಪ್ರಯತ್ನವನ್ನೂ ಆಕೆ ಮಾಡುತ್ತಿದ್ದಾಳೆ. ಇದು ಹೆಣ್ಣಿನ ವ್ಯಕ್ತಿತ್ವದ ವಿಶಿಷ್ಠತೆಯಾಗಿದೆ. ಇಂತಹ ಹಲವು ಪಾತ್ರಗಳನ್ನು ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ನಾವು ಕಾಣಬಹುದಾಗಿದೆ. ಈ ಕತೆಗಳನ್ನು ಒಂದೊಂದಾಗಿಯೇ ಹೆಣ್ಣಿನ ವಿಶೇಷತೆಯನ್ನು ನೋಡೋಣ. ಅವುಗಳಲ್ಲಿ ಪ್ರಮುಖ ಪಾತ್ರಗಳಾಗಿ ಡಂಪಿ, ಮಧುಬಾಲ, ಮಧುವಂತಿ, ಕುಸುಮ, ಭಾಮಿನಿ ಹೀಗೆ ಹಲವಾರು ಪಾತ್ರಗಳನ್ನು ಕಾಣಬಹುದಾಗಿದೆ.

ಜಯಂತ್ ಕಾಯ್ಕಿಣಿಯವರ ಪ್ರಮುಖ ಕಥೆಗಳಲ್ಲಿ ಒಂದಾದದ್ದು 'ಡೈಮಂಡ್ ಸರ್ಕಸ್ಸಿನಲ್ಲಿ ಒಂದು ಹೆರಿಗೆ' ಈ ಕತೆಯು ಸರ್ಕಸ್ಸಿನಲ್ಲಿರುವ ಕಲಾವಿದರ ಬವಣೆಗಳನ್ನು ಚಿತ್ರಿಸುತ್ತಾರೆ. ಈ ತೆರನಾದ ವೃತ್ತಿಯಲ್ಲಿ ತಾಯ್ತನವನ್ನು ಪಡೆಯುವಂತಿಲ್ಲ. ಕಾರಣ ಹೆಣ್ಣು ಹೇಗೆ ತನ್ನ ಒಂದು ವೃತ್ತಿ ಜೀವನದಲ್ಲೂ ನಿಷಿದ್ಧವಿದ್ದ ತಾಯ್ತನದ ಒಲವನ್ನು ಬಯಸಿ ಅದನ್ನು ಅನುಭವಿಸುತ್ತಾಳೆ ಎಂಬುದನ್ನು ಚಿತ್ರಿಸಿದ್ದಾರೆ. ಮಾತ್ರವಲ್ಲ ಹೆಣ್ಣಿನಲ್ಲಿ ತಾಯಿಯ ಮಮತೆ, ವಾತ್ಸಲ್ಯ ಹೇಗೆ ಜಾಗೃತಗೊಂಡಿರುತ್ತದೆ ಎಂಬುದನ್ನು ಡಂಪಿ ಆ ಕತ್ತಲೆಯ ಕರಾಳ ರಾತ್ರಿಯಲ್ಲಿ ತಮ್ಮ ಕಂಪನಿಯನ್ನು ತೊರೆದು ಹೆರಿಗೆ ನೋವಿನ ಬೇನೆಯಲ್ಲೂ ಅಲ್ಲಿಂದ ಹೊರನಡೆಯುವುದು ಆಕೆಯಲ್ಲಿ ಜಾಗೃತಗೊಂಡಿರುವ ಮಗುವಿನ ಬಗೆಗಿನ ಪ್ರೀತಿಯನ್ನು ತೋರಿಸುತ್ತದೆ. ಏಕೆಂದರೆ ಡಂಪಿಗೆ ತಂದೆತಾಯಿ ಇಲ್ಲದೆ ತಬ್ಬಲಿಯಾಗಿ ದೊಡ್ಡಮ್ಮನ ಆಶ್ರಯದಲ್ಲಿ ಬೆಳೆದಳು. ಹೀಗೆ

ಸರ್ಕಸ್ಸಿನಲ್ಲಿ ಪ್ರಮುಖವಾದ ಸ್ಥಾನಮಾನವಿತ್ತು. ಹಾಗೆಯೇ ಬೇಡಿಕೆಯ ಕಲಾವಿದೆಯಾಗಿದ್ದಳು. ಆದರೆ ದೊಡ್ಡಮ್ಮ ಈಕೆಯನ್ನು ಬಿಟ್ಟು ಕಂಪನಿಯಿಂದ ಹೊರ ನಡೆಯುತ್ತಾಳೆ. ಇದಾವುದರ ಅರಿವೆ ಇಲ್ಲದ ಡಂಪಿ ಹುಲಿಯ ಬಾಯಲ್ಲಿ ತಲೆ ಇಡುವ ಸಾಹಸನ ಪ್ರದರ್ಶನವನ್ನು ಶಫಿಯೊಂದಿಗೆ ನೀಡುತ್ತಿರುತ್ತಾಳೆ. ಆದರೆ ವಿಚಾರ ಇಳಿದ ನಂತರ ಮಾನಸಿಕ ಖಿನ್ನತೆಗೆ ಒಳಗಾದಾಗ ಶಫಿ ಇವಳೊಂದಿಗೆ ಸ್ನೇಹ ಪ್ರೀತಿ ಪ್ರೇಮವನ್ನು ತೋರಿಸುತ್ತ ಆಕೆಯೊಂದಿಗೆ ಹೊಸ ಜೀವನವನ್ನು ಆರಂಭಿಸುತ್ತಾನೆ. ಆಗ ನಮಗೆಲ್ಲರಿಗೂ ಅರಿವೆಗೆ ಬರುವ ವಿಚಾರವೆಂದರೆ ಹೆಣ್ಣು ಅಬಲೆಯಲ್ಲ. ಸಬಲೆ ಏಕೆಂದರೆ, ಆಕೆಗೆ ಚಿಕ್ಕಂದಿನಲ್ಲಿ ತಂದೆತಾಯಿಯ ಆಶ್ರಯ, ಹಾಗೆಯೇ ಯೌವನಾವಸ್ಥೆಗೆ ಬಂದಾಗ ಗಂಡನ ಒಂದು ಆಶ್ರಯವನ್ನು ಮತ್ತು ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿ ಬದುಕುವುದೇ ಸಾಂಪ್ರದಾಯಿಕ ನಂಬಿಕೆ . ಆದರೆ ಇಲ್ಲಿ ಈಕೆ ಇವೆಲ್ಲವನ್ನೂ ಮೀರಿ ಬೆಳೆಯುವ ಮನಸ್ಸು ಹೆಣ್ಣಿಗೆ ಇದೆ ಎಂಬ ಸತ್ಯವನ್ನು ಪ್ರಕಟಮಾಡುತ್ತಾಳೆ. ಇಂದಿನ ಹೆಣ್ಣುಮಕ್ಕಳು ಸಾಧಿಸಿ ತೋರಿಸುತ್ತಿರುವ ಸಾಧನೆಗಳನ್ನು ಇದರ ಜೊತೆಗಿಟ್ಟು ನಾನು ಹೆಣ್ಣನ್ನು ಕುರಿತು ಹೊಸದೃಷ್ಟಿಕೋನವನ್ನು ಬೆಳೆಸಿಕೊಳ್ಳಬಹುದಾದ ಸಾಮ್ಯತೆಗಳ ಬಗೆಗೆ ಹೀಗೆ ಶಫಿಯೊಂದಿಗೆ ಜೀವನವನ್ನು ಆರಂಭಿಸಿದ ಡಂಪಿಗೆ ಎಲ್ಲಾ ಹೆಂಗಸರ ಬಯಕೆಯಂತೆ ತಾಯ್ತತನದ ಹಂಬಲ ಕಾಡುತ್ತದೆ. ಏಕೆಂದರೆ, "ಭಾರತೀಯ ಸಂಸ್ಕೃತಿಯಲ್ಲಿ ತಾಯ್ತನಕ್ಕೆ ವಿಶಿಷ್ಠ ಸ್ಥಾನವಿದೆ ತಾಯ್ತನದಿಂದಲೇ ಹೆಣ್ಣಿನ ಅನನ್ಯತೆ ಸ್ಥಿರಗೊಳ್ಳುತ್ತದೆ".[16] ಅಲ್ಲದೆ "ಮಹಿಳೆ ತಾನು ತಾಯಿಯಾಗದಿದ್ದರೆ ಸಂಪೂರ್ಣವಾದ ಹೆಣ್ಣಲ್ಲ ಎಂಬ ಭಾವನೆ ಮತ್ತು ವೃದ್ಧಾಪ್ಯದಲ್ಲಿ ತಮಗೆ ಆಸರೆ ಇರುವುದಿಲ್ಲ ಎಂಬ ನಂಬಿಕೆಯಿಂದ ಬಳಲುತ್ತಾಳೆ. ಮಕ್ಕಳಿಲ್ಲದಿದ್ದರೆ, ಪುರುಷರಿಗಿಂತ ಹೆಣ್ಣು ಹೆಚ್ಚು ಮಾನಸಿಕ ಯಾತನೆಯನ್ನು ಅನುಭವಿಸುತ್ತಾಳೆ".[17] ಹೀಗಾಗಿ ಆಕೆಯೂ ಕೂಡ ಮಗುವಿನ ಹಂಬಲವನ್ನು ಶಫಿಯ ಬಳಿ ಇಟ್ಟಾಗ ಆತ ಅದನ್ನು ತಿರಸ್ಕರಿಸುತ್ತಾನೆ. ಅಲ್ಲದೆ, ಅದು ಕಂಪನಿಯ ನಿಯಮಗಳಿಗೆ ವಿರುದ್ಧ ಎಂದು ಹೇಳುವುದರ ಜೊತೆಗೆ ದಿನೇ ದಿನೇ ದಢೂತಿಯಾಗುತ್ತಿರುವ ನಿನ್ನ ದೇಹ ಮುಂದೆ ಜೋತುಬಿದ್ದಿರುವುದು ನಿನ್ನ ಮುಂದಿನ ಅನ್ನಕ್ಕೂ ಮಣ್ಣು ಬೀಳುವುದು ಖಂಡಿತ ಎಂಬಂತೆ ಹೀಯ್ಯಾಳಿಸುತ್ತಾನೆ. ಇಲ್ಲಿ ಹೆಂಡತಿಯನ್ನು ಹಣ ಗಳಿಸಿ ತರುವ ಒಂದು ಯಂತ್ರದಂತೆ ಭಾವಿಸುವ ಅನೇಕ ಪುರುಷರಿಗೆ ಇವರು ಉದಾಹರಣೆಯಾಗುತ್ತಾನೆ. ಒಟ್ಟಾರೆಯಾಗಿ ಈಕೆ ಯಾವುದೇ ಒಂದು ಸಣ್ಣ ದೈಹಿಕ ಬದಲಾವಣೆಯೂ ಅವಳಲ್ಲಿ ದೊಡ್ಡ ಪ್ರಮಾದದಂತೆ ಕಾಣುತ್ತಿತ್ತು. ಮಾತ್ರವಲ್ಲ ಶಫಿಯಿಂದ ಬದುಕು ಒಂದು ಘಟ್ಟ ತಲುಪುವುದು ಸಾಧ್ಯವಿಲ್ಲ ಎಂದು ಅರಿತ ಡಂಪಿ, ಗೊತ್ತಾಗದ ರೀತಿಯಲ್ಲಿ ಗರ್ಭವನ್ನು ಕಾಪಾಡಿಕೊಳ್ಳುತ್ತಾಳೆ. ಮಾತ್ರ ಶಫಿ ಕರೆತಂದಿದ್ದ ರಾಂಚಿ ಸಹೋದರಿಯರಿಗೆ ಸಹೋದರಿಯ ವಾತ್ಸಲ್ಯವನ್ನು ತೋರಿಸುತ್ತಾಳೆ ಇದು ಹೆಂಗಸರು ತಮಗೆ ಯಾರೇ ದ್ರೋಹ ಮಾಡಿದರೂ ಅದನ್ನು ಕ್ಷಮಿಸಿಬಿಡುವ

'ಕ್ಷಮಯಾ ಧರಿತ್ರಿಯಾಗಿ' ಬಿಡುತ್ತಾರೆ ಎಂಬುದನ್ನು ಇಲ್ಲಿ ನಮಗೆ ನೆನಪಿಸುತ್ತಾಳೆ. ಮಾತ್ರವಲ್ಲ ಕಂಪನಿಯ ಕಡೆಯಿಂದ ಡಂಪಿಯ ಆರೈಕೆ ಚೆನ್ನಾಗಿ ನಡೆದರೂ ಕೊನೆಗೆ ಅವರ ಕಣ್ಣು ಹುಟ್ಟುವ ಮಗುವಿನ ಕಡೆಗಿದೆ ಎಂದು ಅರಿವಾದಾಗ ಡಂಪಿ ತನ್ನ ಮಡಿಲಿನ ತನ್ನ ಕರುಳ ಕುಡಿಯನ್ನು ಉಳಿಸಿಕೊಳ್ಳುವ ಹಾಗೆಯೇ ತಾನು ಅನುಭವಿಸಿದ ಯಾತನೆ ತನ್ನ ಮಗು ಅನುಭವಿಸಬಾರದೆಂದು ಮನಸ್ಸಿನಲ್ಲಿ ದೃಢನಿರ್ಧಾರವನ್ನು ಮಾಡುತ್ತಾಳೆ. ಏಕೆಂದರೆ ತಾಯಿಯಾದವಳು ತಾನು ಅನುಭವಿಸಿದ್ದ ನೋವು ತನ್ನ ಮಕ್ಕಳಿಗೆ ಬೇಡ ಎಂದು ಆಕೆ ನಿರ್ಧರಿಸುತ್ತಾಳೆ. ಇದಕ್ಕೆ ಒಂದು ಉದಾಹರಣೆಯಾಗಿ ಹಳ್ಳಿಯಲ್ಲಿ ದೊಡ್ಡ ಜಮೀನ್ದಾರರ ಮನೆಗೆ ಸೊಸೆಯಾಗಿ ಹೋದ ಹೆಣ್ಣುಮಗಳು ಆ ದೊಡ್ಡ ಸಂಸಾರದಲ್ಲಿ ಒಳ್ಳೆಯ ಸೊಸೆಯಾಗಿ, ಮಡದಿಯಾಗಿ ಅತ್ತಿಗೆಯಾಗಿ, ವಿವಿಧ ಸ್ಥಾನಗಳನ್ನು ನಿರ್ವಹಿಸುವುದರ ಜೊತೆಗೆ ಆ ದೊಡ್ಡ ಕುಟುಂಬದ ಘನತೆಯ ಹೆಣ್ಣಾಗಿ ಕೆಲಸದ ಆಳಾಗಿ ವಿವಿಧ ಸ್ತರಗಳನ್ನು ಬಹಳ ಜೋಪಾನವಾಗಿ ನಿರ್ವಹಿಸಬೇಕಾಗುತ್ತದೆ. ಆಗ ಆಕೆ ತನಗೆ ಹುಟ್ಟಿದ ಹೆಣ್ಣು ಮಕ್ಕಳನ್ನು ಜಮೀನು ಇಲ್ಲದಿದ್ದರೂ ಪರವಾಗಿಲ್ಲ, ಕೂಲಿ ಮಾಡಿ ನೆಮ್ಮದಿ ಜೀವನ ನಡೆಸುವ ಪ್ಯಾಟೆ ಕಡೆಗೆ ಮದುವೆ ಮಾಡುವ ನಿರ್ಧಾರವನ್ನು ನಾವಿಲ್ಲಿ ಸ್ಮರಿಸಬಹುದು. ಅದೇ ರೀತಿಯಾಗಿ ಡಂಪಿ ಆ ನಡು ರಾತ್ರಿಯಲ್ಲಿ ತನ್ನ ಮಗುವನ್ನು ಕಂಪನಿಯ ಮುಷ್ಟಿಯಿಂದ ಬಚಾವು ಮಾಡುವ ಉದ್ದೇಶದಿಂದಲೇ ಕಂಪನಿ ತೊರೆದು ಹೊರ ಬರುತ್ತಾಳೆ. ಆದರೆ ಆಕೆ ಬಿಡಿ ಹೆಂಗಸಲ್ಲ. ಅವಳಲ್ಲಿ ಮತ್ತೊಂದು ಜೀವವಿರುವ ಕಾರಣ ಅವಳು ಅಂದು ಕೊಂಡ ಗಡಿಯನ್ನು ಮುಟ್ಟಲು ಸಾಧ್ಯವಿಲ್ಲದೆ ಅಲ್ಲೆ ಹೆರಿಗೆ ಆಗುತ್ತದೆ. ಇದೊಂದು ಹೆಣ್ತನದ ಮಾತೃತ್ವದ ಹಂಬಲದ ಪರಮಾವಧಿ ಏಕೆಂದರೆ, <u>ಹೆಣ್ತನ ಸಹಜ, ನಿಯಮ ತಾಯ್ತನ ದೈವದ ನಿಯಮ</u> ಹಾಗಾಗಿ ಈಕೆಯನ್ನು ಹುಡುಕಿ ಬಂದವರಿಗೆ ಸಂತೋಷದ ಮೇಲೆ ಸಂತೋಷ ಕಾರಣ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿರುವುದು ಮತ್ತೊಂದು ಆ ಮಗುವಿಗೆ ನಾಲ್ಕು ಕೈಗಳಿರುವುದು. ಆದರೆ ವೈದ್ಯರ ಸಲಹೆಯ ಮೇರೆಗೆ ಇದನ್ನು ಆಪರೇಷನ್‌ನಿಂದ ಸರಿಪಡಿಸಬಹುದು ಎಂಬ ಶಬ್ಧ ಡಂಪಿಯ ಕಿವಿಗೆ ಬಿದ್ದಾಗ ಆಕೆ ನೆಮ್ಮದಿಯ ನಿಟ್ಟುಸಿರು ಬಿಡುವಳು. ಹೀಗೆ ಡಂಪಿ ತನ್ನ ನಿರ್ಧಾರವನ್ನು ತೆಗೆದುಕೊಂಡು ತನ್ನ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನವನ್ನು ಮಾಡುವುದರ ಜೊತೆಗೆ ತನ್ನ ತಾಯ್ತನದ ಬದುಕನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದೇ ಅವಳ ವಿಶಿಷ್ಠತೆಯಾಗುತ್ತದೆ.

➢ ಜಯಂತ್ ಕಾಯ್ಕಿಣಿಯವರ ಪ್ರಮುಖ ಕತೆಗಳಲ್ಲಿ ಒಂದಾದದ್ದು 'ಮಧುಬಾಲ' ಈ ಕತೆಯಲ್ಲಿ ಬಾರ್ ಗಳಲ್ಲಿ ಡ್ಯಾನ್ಸ್ ಗರ್ಲ್ ಆಗಿ ದುಡಿಯುವ ಹೆಣ್ಣನ್ನು ಯಾವ ದೃಷ್ಟಿಯಿಂದ ಜನ ಅವರನ್ನು ನೋಡುತ್ತಾರೆ . ಅಲ್ಲದೆ ಅವರು ಹೇಗೆ ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ ಎಂಬುದನ್ನು ಚಿತ್ರಿಸಿದ್ದಾರೆ. ಇಂತಹ ಹೆಣ್ಣುಮಕ್ಕಳಿಗೂ ತಮ್ಮದೇ ಆದ ಆಸೆ ಆಕಾಂಕ್ಷೆಗಳಿದ್ದು, ಅದನ್ನು

ಈಡೇರಿಸಿಕೊಳ್ಳಬೇಕೆನ್ನುವಷ್ಟರಲ್ಲಿ ಹೇಗೆ ಅವರ ಮೇಲಿನ ಜವಾಬ್ದಾರಿಗಳು ಅವುಗಳಿಂದ ಇವರನ್ನು ವಿಮುಖರಾಗುವಂತೆ ಮಾಡುತ್ತಾರೆ ಎಂಬುದನ್ನು ಜಯಂತ್ ಕಾಯ್ಕಿಣಿಯವರು ಈ ಕತೆಯಲ್ಲಿ ಸವಿಸ್ತಾರವಾಗಿ ಹೇಳಿದ್ದಾರೆ. ಏಕೆಂದರೆ "ಅಸ್ತಿತ್ವವಾದಿ ಕೆಲಸಗಾರ್ತಿಯರ ಸಾಲಿಗೆ ಇವರು ಸೇರುತ್ತಾರೆ. ಅಂದರೆ ಇವಳು ತನ್ನ ಅಸ್ತಿತ್ವ, ಜೀವ ಉಳಿಸಿಕೊಳ್ಳಲು ಕೆಲಸ ಮಾಡುತ್ತಾಳೆ. ಬಡತನದ ರೇಖೆಗಿಂತ ಕೆಳಗಿರುವ ಇವಳ ಕುಟುಂಬ ಇವಳ ದುಡಿಮೆಯನ್ನು ಅವಲಂಬಿಸಿರುತ್ತದೆ".[18] ಸ್ತ್ರೀವಾದಿ ಮನೋ ವಿಜ್ಞಾನ (ಜೀವಿತಾವಧಿಯಲ್ಲಿ ಮನೋವೈಜ್ಞಾನಿಕ ವಿವಾದಾಂಶಗಳು) ಇಂತಹ ಹೆಣ್ಣು ಮಧುಬಾಲ, ಕಾಮುಕ ಶ್ರೀಮಂತರಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಏಕಾಂತ್ ಭಾವೆಯನ್ನು ಕಂಡಾಗ ಇವನೇ ಸರಿಯಾದ ವ್ಯಕ್ತಿಯೆಂದು ನಿರ್ಧರಿಸುತ್ತಾಳೆ. "ತನ್ನನ್ನು ಕರೆದೊಯ್ಯಲೆಂದೇ ಕಾದಿದ್ದ ಕೈತುಂಬ ಉಂಗುರ, ಕಂಠಪೂರ್ತಿ ಚಿನ್ನದಚೈನು ಹಾಕಿಕೊಂಡಿದ್ದ ಇಬ್ಬರು ಬಂಗಾರದ ಮನುಷ್ಯರಿಂದ ತಪ್ಪಿಸಿಕೊಳ್ಳಲೆಂದೇ ಬಂದವಳಂತೆ ಸೀದ ಬಂದು ಏಕಾಂತನ ಕೈಹಿಡಿದು "ನೀನು ನನ್ನ ಕಸಿನ್ ಮತ್ತು ನನ್ನನ್ನು ಕರೆದುಕೊಂಡು ಹೋಗಲು ಬಂದಿದ್ದೀ" ಎಂದು ಪಿಸುಗುಟ್ಟಿ ನಂತರ "ಪ್ಲೀಸ್ ಇದರಲ್ಲಿ ಯಾವ ಲಫಡಾಇಲ್ಲ".[19] ಮಧುಬಾಲ ಎಂದಾಗ ಆಹೆಣ್ಣಿನ ಆತಂಕದ ಜೊತೆಗೆ ತನ್ನನ್ನು ತಾನು ಕಾಪಾಡಿಕೊಳ್ಳಲು ಎಷ್ಟು ಹೆಣಗುತ್ತಿದ್ದಾಳೆ ಎಂಬುದು ಗೊತ್ತಾಗುತ್ತದೆ. ಮಾತ್ರವಲ್ಲದೆ ಅಂತಹ ಕಡೆಯಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳಿಗೆಲ್ಲ ತಮ್ಮ ಭೋಗದ ವಸ್ತುಗಳೆಂದು ಭಾವಿಸುವ ಶ್ರೀಮಂತರ ದುರ್ನಡನೆಯು ಇಲ್ಲಿ ಅನಾವರಣಗೊಂಡಿದೆ. ಇದರಿಂದ ಮಧುಬಾಲಾಳಿಗೆ ಯಾವುದೇ ಹಣ ಚಿನ್ನದ ಮೋಹವಿಲ್ಲದ ಕೇವಲ ಪ್ರೀತಿಯಿಂದ ಕಾಣುವ ತನ್ನನ್ನು ಆರಾಧಿಸುವ ಪ್ರೇಮಿಸುವ ಸಂಗಾತಿಯ ಬಯಕೆಯ ಅರಿವು ಗೊತ್ತಾಗುತ್ತದೆ. ಮಾತ್ರವಲ್ಲ ಆಕೆ ತನ್ನ ಹುಟ್ಟು ಹಬ್ಬದ ದಿನ ಏಕಾಂತ್ ಜೊತೆ ಹೋದಾಗ ಕಾಲ್ದಾರಿಯ ಎರಡೂ ಕಡೆಯಲ್ಲಿ ಕೈ ಚಾಚಿ ಕುಳಿತಿದ್ದ ದೀನರನ್ನು ಕಂಡಾಗ ಈಕೆ ಅಧೀರಳಾಗುತ್ತಾಳೆ. ಏಕೆಂದರೆ ಈಕೆಯ ಗೆಳತಿ ಮಾಯಾ ತ್ರಿಪಾಠಿಯ ತಾಯಿ ಕಳೆದು ಹೋಗಿದ್ದು, ಆಕೆಯೊಂದಿಗೆ ಇವಳು ತಾಯಿಯ ಹುಡುಕಾಟದಲ್ಲಿ ಕಾರ್ಯಪ್ರವೃತ್ತಳಾಗಿರುತ್ತಾಳೆ. ಆದರೆ ತ್ರಿಪಾಠಿ ನಿಲ್ಲಿಸಿದರೂ ಅವಳು ಹೇಳಿದ ಗುರುತಿನ ಆಧಾರದ ಮೇಲೆ ಈ ಹುಡುಕಾಟವನ್ನು ಮುಂದುವರೆಸಿರುತ್ತಾಳೆ. ಆದರೆ ಏಕಾಂತ್ ಭವೆಗೆ ತಾನು ಈ ಜಾಗಕ್ಕೆ ಹೊಸಬಳು ತಾನಲ್ಲ ಎಂದು "ಇಲ್ಲಿನ ಬಹುತೇಕ ಮುದುಕ- ಮುದುಕಿಯರಿಗೆ ನನ್ನ ಮುಖ ಪರಿಚಯ ಇದ್ದೇ ಇತ್ತು. ಮೇಲಾಗಿ ಆಗಾಗ ಅವರ ಬಳಿ ಉದ್ದ ಮೂಗಿನ ಮುದುಕಿಯ ಬಗ್ಗೆ ಕೇಳಿಯೂ ಇದ್ದೆ. ಒಂದು ದಿನ ಏನಾಯಿತು. . . . ನಾನು ವಾಪಸ್ ಹೊರಟಿದ್ದೆ. ಒಬ್ಬಳು ಮುದುಕಿ ಮೆಲ್ಲಗೆ ಎದ್ದು ನನ್ನ ಬೆನ್ನ ಹಿಂದೆ ಬಂದಂತೆ

ಅನಿಸಿತು. ತಿರುಗಿ ನೋಡಿದೆ. ಸಪೂರಗದ್ದದ ಅವಳು ನಡುಗುವ ದನಿಯಲ್ಲಿ ಕ್ಯೂಂ ಬೇಟಾ ನಿನ್ನ ತಾಯಿ ಸಿಗಲಿಲ್ಲವೇ? ಎಂದವಳೇ ನನ್ನ ಕೈ ಹಿಡಿದು ಹಾಗಾದರೆ ನನ್ನನ್ನು ಕರಕೊಂಡು ಹೋಗ್ತೀಯಾ ನಿನ್ನ ಮನೆಗೆ? ಎಂದು ವಿಷಣ್ಣವಾದ ನಗೆಯಲ್ಲಿ ಯಾಚಿಸಿದಳು. ನಾನು ಹೆದರಿದವಳಂತೆ ಓಡಿಬಿಟ್ಟೆ".[20] ಹೇಳಿದಾಗ ಹೆಣ್ಣಿನ ಸಹಜವಾದ ಒಂದು ಮನಸ್ಥಿತಿ ಅರಿವಿಗೆ ಬರುತ್ತದೆ. ಏಕೆಂದರೆ ಮಕ್ಕಳಿಗೆ ತಂದೆ ಇಲ್ಲದಿದ್ದರೆ, ತಬ್ಬಲಿ ಎನಿಸುವುದಿಲ್ಲ. ಅದರೆ ತಾಯಿ ಇಲ್ಲದಿದ್ದರೆ ತಬ್ಬಲಿಗಳಾಗುತ್ತಾರೆ. ಎಂದು ಎಲ್ಲರೂ ಹೇಳುತ್ತಾರೆ. ತಾಯಿ ಬೇಕು ಎಂದು ಹಂಬಲಿಸುವ ತಬ್ಬಲಿಗಳು, ನಾನು ನಿಮ್ಮ ಮನೆಗೆ ಬರುತ್ತೇನೆ ಕರೆದುಕೊಂಡು ಹೋಗು ಎಂದು ಯಾರೋ ಬಂದು ಹೆಂಗಸು ಹೇಳಿದಾಗ ಆಕೆಯನ್ನು ತನ್ನ ತಾಯಿ ಎಂದು ಸ್ವೀಕರಿಸುವ ಮನಸ್ಥಿತಿ ಅವರಿಗೆ ಇರುವುದಿಲ್ಲ. ಹಾಗೆಯೇ ಮಧುವಿನ ಮನಸ್ಸು ಒಂದು ಕ್ಷಣ ಭ್ರಾಂತಿಗೆ ಒಳಗಾದಂತೆ ಎನಿಸಿ, ಅಲ್ಲಿಂದ ಆಕೆ ಕಾಲ್ಕೀಳುತ್ತಾಳೆ. ಹಾಗೆಯೇ ಮಧು ಏಕಾಂತ್ ಭಾವೆ ಅತೀವವಾದ ಒಂದು ರೀತಿಯ ಪ್ರೀತಿಯನ್ನೂ ಹೊಂದಿದ್ದಳು. "ಎಕ್ಕಾ ಪ್ಲೀಸ್ ಬೇಡಾ.. . ಯಾರೂ ಫ್ಲಾಷ್ ಬ್ಯಾಕ್ ಗುಣ ಬೇಡಾ.. ಫ್ಲಾಷ್ ಫಾರ್ವರ್ಡ್ ಗುಣ ಇರಲಿ.. . ಎಕ್ಕಾ .. . ನೀನು ಸ್ಪೆಷಲ್ ಇದ್ದೀ ಅದಕ್ಕೆ ನಿನ್ನ ಜೊತೆ ಹೀಗೆ ನಿದ್ದೆಯಲ್ಲಿ ನಡೆವ ಮುದ್ದು ಪೋರಿ ತರಹ ಬಂದಿದ್ದೇನೆ. . . ನನ್ನ ಮನಸ್ಸಲ್ಲಿ ನಿನಗಾಗಿ ಒಂದು ಸ್ಪೆಷಲ್ ಜಾಗ ಇದೆ".[21] ಎಂದಾಗ ಆಕೆಯಲ್ಲಿರುವ ಬಯಕೆಯ ಅರಿವು ನಮಗೆ ಉಂಟಾಗುತ್ತದೆ. ಏಕೆಂದರೆ ಪ್ರತಿಯೊಂದು ಹೆಣ್ಣಿಗೂ ತನ್ನದೇ ಆದ ಆಸೆ ಅಕಾಂಕ್ಷೆಗಳು ಇದ್ದರೂ ಆ ಹೆಣ್ಣು ಅವುಗಳ ಈಡೇರಿಕೆಗಾಗಿ ಬಯಸದೇ ತನ್ನ ಜವಾಬ್ದಾರಿಯ ಕಡೆಗೆ ಅವಳು ಮುನ್ನಡೆಯುತ್ತಾಳೆ. ಅದೇರೀತಿಯಾಗಿ ಮಧುಬಾಲಾಳು ತನ್ನ ಆಸೆಯಂತೆ ಎಲ್ಲಾ ಕಡೆ ಸುತ್ತಾಡಿ ಫ್ಲೈಓವರ್ ಮೇಲೆ ಹೋಗಲು ಬಯಸಿ, ಹಾಗೆ ನಿದ್ರೆಗೆ ಒರಗುತ್ತಾಳೆ. ನಂತರ 'ಛೆ. ಇದೆಲ್ಲಿ ಹೋಗ್ತಿದ್ದೇವೆ ನಾವು ಠೆಹರೋ. ಠೆಹರೋ ತಡಾ ಆಗ್ತದೆ, ತಡಾ ಆಗ್ತದೆ ಎಂದು ರಂಪ ಮಾಡಿ ಟ್ಯಾಕ್ಸಿ ಹೊರಳಿಸಿ ಗೋರೆಗಾಂವ್ ಲಿಂಕ್ ರಸ್ತೆಯ ಸಮೀಪದ ತನ್ನ ಖೋಲಿಯ ಬಳಿ ನಿಲ್ಲಿಸಿ ಬೀದಿ ದೀಪಗಳನ್ನು ಸೀಳುತ್ತ ಹೋಗಿ ಮರೆಯಾದಳು".[22] ಆಕೆಗೆ ಬಯಕೆ ಒಂದು ಕಡೆಯಿದ್ದರೆ ಅದರಲ್ಲಿ ತಾನು ಮುನ್ನಡೆದರೆ, ತನ್ನನ್ನೇ ನಂಬಿರುವವರ ಗತಿಯ ಬಗ್ಗೆ ಆಕೆ ಚಿಂತಿಸುತ್ತಾಳೆ. ಹೆಣ್ಣು ನಿಸ್ವಾರ್ಥಿ. ತನಗಾಗಿ ಏನನ್ನೂ ಬಯಸದೇ ಇತರರ ಸುಖ ಸಂತೋಷಗಳಲ್ಲೇ ತನ್ನನ್ನು ತಾನು ಮರೆಯುತ್ತಾಳೆ. ಅದರಿಂದಾಗಿ ಇಲ್ಲಿ ಬೇಕು ಎಂಬ ಭಾಗ್ಯ ಬಾಗಿಲಲ್ಲೇ ಕುಳಿತಿರುವಾಗ ಅದರಲ್ಲಿ ಮುನ್ನಡೆಯುವ ಧೈರ್ಯ ತೋರದೆ ಮಧುಬಾಲ ತನ್ನ ಒಂದು ನಿಜ ಜೀವನಕ್ಕೆ ಹಿಂದಿರುಗುತ್ತಾಳೆ ಎಂದು ಎಷ್ಟೋ ಹೆಣ್ಣು ಮಕ್ಕಳ ಸ್ಥಿತಿಯೂ ಇದೇ ರೀತಿ

ಆಗಿದೆ ಎಂದು ಹೇಳುವುದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ ಎಂದೇ ಹೇಳಬಹುದು. ಇದರೊಂದಿಗೆ ಇವಳ ವೃತ್ತಿಪರತೆಯೂ ಇಲ್ಲಿ ವಿಶಿಷ್ಟವೆನಿಸುತ್ತದೆ.

➢ ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ವ್ಯಕ್ತಿ ವಿಶಿಷ್ಟತೆಯ ನೆಲೆಗಳ ಹುಡುಕಾಟದಲ್ಲಿ ಕಂಡು ಬರುವ ಪ್ರಮುಖ ಸ್ತ್ರೀಯರ ವಿಶಿಷ್ಟತೆಯನ್ನು ಗಮನಿಸಿದಾಗ ತೂಫಾನ್ ಮೇಲ್ ಕತೆಯಲ್ಲಿ ಬರುವ ಮಧುವಂತಿಯೂ ವಿಶೇಷತೆಯಿಂದ ಕಂಡು ಬರುತ್ತಾಳೆ. ಏಕೆಂದರೆ, "ಕುಟುಂಬ ಹಾಗೂ ಕಾರ್ಯಕ್ಷೇತ್ರ ಎರಡರಲ್ಲೂ ಪಾತ್ರ ವಹಿಸುವುದು ಮಹಿಳೆಯ ವ್ಯಕ್ತಿತ್ವ ವಿಕಸನ, ಆರೋಗ್ಯ ಮತ್ತು ಸುಸ್ಥಿತಿಗೆ ಲಾಭಕರ ಎಂಬುದು ನಿಜ. ಆದರೆ ಇದರಲ್ಲಿ ಸಮಸ್ಯೆಗಳೂ ಇವೆ. ಮನೆ ಕೆಲಸ ಎರಡನ್ನೂ ನಿಭಾಯಿಸಲು ಹೆಚ್ಚು ಶಕ್ತಿ, ಸಮಯ ಬೇಕು, ಇವೆರಡರ ಬೇಡಿಕೆಗಳ ನಡುವೆ ಘರ್ಷಣೆಯೂ ಉಂಟಾಗುತ್ತದೆ. ಕೆಲವೊಮ್ಮೆ ಪುರುಷನ ಮತ್ಸರ, ಅಸಹನೆಗೆ ಮಹಿಳೆ ತುತ್ತಾಗಬೇಕಾಗುತ್ತದೆ. ತಾಯಿಯಾದಾಗ ಈ ಸಮಸ್ಯೆಗಳು ಇನ್ನೂ ಹೆಚ್ಚುತ್ತವೆ. ಹೊರಗೆ ದುಡಿದರೂ ಹೆಣ್ಣಿನ ಗೃಹಕೃತ್ಯದ ಜವಾಬ್ದಾರಿಗಳು ಕಡಿಮೆಯಾಗುವುದಿಲ್ಲ. ಬದಲಿಗೆ 'ಡಬಲ್ ಶಿಫ್ಟ್" ಕೆಲಸ. ಅಂದರೆ ಹೊರಗೂ ದುಡಿದು ಮನೆಯನ್ನೂ ನಡೆಸುವ ಹೊರೆ ಅವಳಿಗೆ, ತಾಯಂದಿರು ಹೊರಗೆ ದುಡಿದರೂ ಮಕ್ಕಳ ಪ್ರಥಮ ಪಾಲಕರು ಅವರೇ . ಈಕೆ ಸಮಯ ಶಕ್ತಿಗಳನ್ನು ಸರಿಯಾಗಿ ಎಲ್ಲ ಕೆಲಸಕ್ಕೂ ಹಂಚಲಾಗದೆ, ಮಾನಸಿಕ ಯಾತನೆಯನ್ನು ಅನುಭವಿಸುತ್ತಾಳೆ".[23] ಅದೇ ರೀತಿಯಾಗಿ ಮಧುವಂತಿಯ ಸಹನಟಿಯಾಗಿ ತನ್ನ ಮಧ್ಯ ವಯಸ್ಸಿನಲ್ಲಿ ದುಡಿಯುತ್ತಿರುತ್ತಾಳೆ. ಸ್ಟಂಟ್ ಕಲಾವಿದನಾದ ಬಲರಾಂ ನೊಂದಿಗೆ ವಿವಾಹವಾಗಿದ್ದು, ಸೋನು ಎಂಬ ಎಂಟು ವರ್ಷ ಮಗುವಿನ ತಾಯಿಯಾಗಿದ್ದಾಳೆ. ಆದರೆ ಗಂಡನ ಒಂದು ಬೇಜವಾಬ್ದಾರಿಯಿಂದಾಗಿ, ಮನೆಯನ್ನು ಸಂಭಾಳಿಸುವ ಸಲುವಾಗಿ ದುಡಿಮೆ ಅನಿವಾರ್ಯವಾಗಿದೆ. ಅಲ್ಲದೆ ಮನೆಯಲ್ಲಿ ಗಂಡನಿಂದ ಚಿತ್ರಹಿಂಸೆಯನ್ನು ಅನುಭವಿಸುತ್ತಿದ್ದರೂ, ಪ್ರೇಕ್ಷಕರಿಗೆ ತನ್ನ ನಗುಮೊಗದೊಂದಿಗೆ ಶೂಟಿಂಗ್‌ನಲ್ಲಿ ಭಾಗವಹಿಸಬೇಕಾದುದು ಅನಿವಾರ್ಯವಾಗಿದೆ.

ಅಲ್ಲದೆ ತಮ್ಮ ಸಮಸ್ಯೆಯನ್ನು ತನ್ನ ನೆಚ್ಚಿನ ಗೆಳೆಯರಲ್ಲಿ ಹೇಳಿಕೊಂಡು ಅದನ್ನು ಹೇಗಾದರೂ ಮಾಡಿ ಬಗೆಹರಿಸಿಕೊಳ್ಳಬೇಕೆಂಬ ಹಂಬಲ ಆಕೆಯಲ್ಲಿಯೂ ಇದೆ. ಒಟ್ಟಾರೆಯಾಗಿ ಮಧುವಂತಿ ಮಧ್ಯಮವರ್ಗದ ಹೆಣ್ಣುಮಕ್ಕಳು ತಾವು ಅನುಭವಿಸುತ್ತಿರುವ ಮನೋವೇದನೆಯನ್ನು ಅನುಭವಿಸುತ್ತಿದ್ದರೂ ಬದುಕಬೇಕೆಂಬ ಛಲ, ಹಾಗೆಯೇ ಬದುಕಿನ ಬದ್ಧತೆಗೆ ಮಾಡಿಕೊಂಡಿರುವ ಒಪ್ಪಂದಕ್ಕಾಗಿ ದುಡಿಯುವುದು ಅನಿವಾರ್ಯವಾಗಿದೆ. ಇವರಿಗೆ ತಮ್ಮ ಮನೆಯನ್ನು ಸಂಭಾಳಿಸಿ, ತಮ್ಮ ಮಕ್ಕಳನ್ನು ಇತರ ಮಕ್ಕಳಂತೆಯೇ

ಓದಿಸಬೇಕೆಂಬ ಹಂಬಲವಿರುತ್ತದೆ ಎಂಬುದನ್ನು 'ಸೋನಿಗೆ ಇಂಗ್ಲೀಷ್ ಮೀಡಿಯಂಗೆ ಹಾಕಬೇಕು".[24] ಎಂಬ ಮಾತು ಸ್ಪಷ್ಟಪಡಿಸುತ್ತದೆ. ಏಕೆಂದರೆ, ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನಾದರೂ ಕೊಡಿಸಿದರೆ, ಅವು ಮುಂದೆ ಚೆನ್ನಾಗಿ ಓದಿ ಒಳ್ಳೆಯ ಕೆಲಸಕ್ಕಾದರೂ ಸೇರಲಿ ಎಂಬುದು ತಾಯಂದಿರ ಆಶಯವಾಗಿರುತ್ತದೆ. ಅದಕ್ಕಾಗಿ ತಾವು ಎಷ್ಟೇ ಕಷ್ಟದ ಕೆಲಸವಾದರೂ ಮಾಡಲು ಸಿದ್ಧ ಎಂಬುದನ್ನು ಈ ಮಧ್ಯವಯಸ್ಸಿನಲ್ಲಿ ಈ ಬಸ್ಸಿಲಿನಲ್ಲಿ ಈ ಹಗಲುವೇಷ ಹಾಕ್ಕೊಂಡು ದಿನಕ್ಕೊಂದು ಸೊಲ್ಲಿಗೆ ನೂರು ಸಲ ಕುಂಡೆ ಅಲ್ಲಾಡಸ್ತಿದ್ದೀನಿ" ಎಂದು ನಕ್ಕು ಎಲ್ಲಿ ತನಕ ಅಲ್ಲಾಡ್ಸೋಕೆ ಆಗತ್ತೋ ಅಲ್ಲಿ ತನಕ ನಡೀಲಿ. ಊಟಿ ಗೀಟಿ ಔಟ್ ಡೋರ್ ಇದ್ರೂ ರೆಡಿ ನಾನು"[25] ಎಂದಾಗ ತಾಯಿಯ ಒಂದು ಅಂತಃ ಕರಣ ತಿಳಿಯುತ್ತದೆ. ಏಕೆಂದರೆ ತನಗೆ ತೊಂದರೆಯಾದರೂ ಚಿಂತೆಯಿಲ್ಲ ತನ್ನ ಮಕ್ಕಳಿಗೆ ಮೋಸವಾಗಬಾರದೆಂದು ಈ ಹೆಣ್ಣು ಮಗಳು ಬಯಸುತ್ತಾಳೆ. ಹಾಗೆಯೇ ಕಷ್ಟಕ್ಕೆ ಕಲ್ಲಾಗಿ, ನೋವಿಗೆ ಜಗ್ಗದೆ ಮುನ್ನಡೆಯಲು ಹಾತೊರೆಯುತ್ತಾಳೆ. ಆದರೆ ಇಂತಹ ಹೆಣ್ಣುಮಕ್ಕಳಿಗೆ ಮಾನಸಿಕ ನೆಮ್ಮದಿಯೂ ಕೂಡ ಇರುವುದಿಲ್ಲ. ಏಕೆಂದರೆ, ಗಂಡಂದಿರಿಂದಲೂ ಇವರು ಚಿತ್ರ ಹಿಂಸೆಗೆ ಗುರಿಯಾಗುತ್ತಿರುತ್ತಾರೆ. ದುಡಿಯಲು ಹೊರಗೆ ಹೋಗುವ ಹೆಂಗಸರನ್ನು ಮನೆಯಲ್ಲಿ ಕೂತು ಕಾಲಹರಣ ಮಾಡುವ ಗಂಡಸರು ಅವರನ್ನು ಅನುಮಾನಿಸುವುದು ಮಾತ್ರವಲ್ಲದೆ, ಮಾನಸಿಕವಾಗಿ ಹಾಗೂ ದೈಹಿಕವಾಗಿ ಚಿತ್ರಹಿಂಸೆಗೆ ಗುರಿಮಾಡುತ್ತಾರೆ. ಅದು ಮಧುವಂತಿಯ ಬದುಕಿನಲ್ಲಿ ವಿಪರೀತವೆಂಬಂತೆ ಶೂಟಿಂಗ್ ನಡೆಯುವ ಜಾಗದಲ್ಲಿ ಬಂದು ಕಳ್ಳನಂತೆ ಬಚ್ಚಿಟ್ಟು ನೋಡುವ ಬಲರಾಂನನ್ನು ಕಂಡಾಗ ಮಧುವಂತಿಕೆಗೆ ಅವನ ಬಗ್ಗೆ ಹೇಸಿಗೆ ಎನಿಸುತ್ತದೆ. ಅಲ್ಲದೆ ಅದನ್ನು ತೂಫಾನ್‌ಗೆ ಹೇಳಲು ಬಂದಾಗ ಬಲರಾಂ ನಾಲ್ಕು ಗೋಡೆಗಳ ಮಧ್ಯೆ ನಡೆಯುವ ವಿಚಾರವನ್ನು ಹೇಳಿ ನಾಟಕದ ನಾಚಿಕೆಯನ್ನು ಈಕೆ ಪ್ರದರ್ಶಿಸುತ್ತಾಳೆ. ಇಲ್ಲಿ ಬಿಗಿಯಾದ ಕುಪ್ಪಸ ತೊಟ್ಟು ಎದೆಯನ್ನು ಮೇಲೆ ಕೆಳಗೆ ಮಾಡುವಾಗ ಇಲ್ಲದ ನಾಚಿಕೆ ಹೇಗೆ ಸಾಧ್ಯವೆಂದು ಹೇಳುವಾಗ ಆಕೆ ಅವಮಾನದಿಂದ ತಲೆ ತಗ್ಗಿಸುತ್ತಾಳೆ. ಅಲ್ಲದೆ ಅವಳಲ್ಲಿ ರೋಷವೆಂಬ ಹೊಗೆಯಾಡುತ್ತಿದ್ದು. " ಅವನ ಕಣ್ಣಲ್ಲಿ ಕಣ್ಣಿಟ್ಟು "ನನ್ನ ಕೆಲಸಾ ಅದೂ ಕೆಲಸಾ!"[26] ಎಂದು ಜೋರಾಗಿ ಚೀರುತ್ತಾಳೆ. ಅಂದರೆ ಹೆಣ್ಣು ಎಂತಹ ಅಪವಾದಗಳನ್ನು ಸಹಿಸಲು ಸಿದ್ಧಳಾದರೂ ತನ್ನ ಮನದ ಕುರಿತು ಮಾತನಾಡುವ ಪ್ರಸಂಗ ಬಂದಾಗ ಆಕೆ ಯಾವುದೇ ಕಾರಣಕ್ಕೂ ಸುಮ್ಮನಿರುವುದಿಲ್ಲ. ಅಲ್ಲದೆ ಆಕೆ ಅಲ್ಲಿ ನಿರ್ವಹಿಸುತ್ತಿದ್ದುದು ಕೆಲಸ ಮಾತ್ರ ಅದೇ ಅವಳ ವೃತ್ತಿ ಬೇಕೆಂದು ಯಾರಾದರೂ ನೋಡಲಿ ಎಂದು ಆ ಕೆಲಸವನ್ನು ಮಾಡುವುದಿಲ್ಲ ಎಂಬುದನ್ನು ಅರ್ಥವಾಗುವ ರೀತಿಯಲ್ಲಿ ಹೇಳುತ್ತಾಳೆ. ಅಷ್ಟು ಮಾತ್ರವಲ್ಲದೆ, ಹೆಣ್ಣಿಗೆ, ತನ್ನ ತಾಯ್ತನದ ಪ್ರೀತಿ ಸದಾ ಜಾಗೃತಗೊಂಡಿರುತ್ತದೆ. ಎಂಬುದನ್ನು ತೂಫನ್ ಬಳಿ ಬಂದ ಮಧುವಂತಿ ಸೆಟ್ ನಲ್ಲಿ ಕೊಡೋ ಚಿಕನ್ ಸೋನಿಗೆ ಇಷ್ಟ, ನೀನು

ತಗೋ ನಾನು ಮನೆಗೆ ತೆಗೆದುಕೊಂಡು ಹೋಗುತ್ತೇನೆ" ಎನ್ನುವ ಮಾತು ಒಂದು ಹಣಕಾಸಿನ ಸ್ಥಿತಿಯನ್ನು ತಿಳಿಸಿದರೆ, ಮತ್ತೊಂದು ಮಗಳ ಬಯಕೆಯನ್ನು ತಿಳಿಸುತ್ತದೆ. ಏಕೆಂದರೆ ಹೆಣ್ಣು ತನ್ನ ಮಕ್ಕಳಿಗೆ ಏನು ಇಷ್ಟ, ಏನು ಕಷ್ಟ ಎಂಬುದನ್ನು ಪ್ರತಿ ಹೆಜ್ಜೆಯಲ್ಲೂ ಗುರುತಿಸುವ ಅವುಗಳನ್ನು ಈಡೇರಿಸುವ ಪ್ರಯತ್ನ ಮಾಡುತ್ತಿರುತ್ತಾಳೆ. ಈ ವೈಶಿಷ್ಟ್ಯತೆಯನ್ನು ಮಧುವಂತಿ ಪಾತ್ರದಲ್ಲಿ ಕಾಣಬಹುದಾಗಿದೆ.

"ಮಹಿಳೆ– ಕೆಲವು ಸಿದ್ಧಮಾದರಿಗಳಲ್ಲೇ ಆಕೆಯನ್ನು ನೋಡುವುದು ಸಾಮಾನ್ಯವಾದ ಸಂಗತಿ. ಈ ಸಿದ್ಧ ಮಾದರಿ ಅವಳಿಗೆ ಸಹಜವಾಗಿ ಬಂದಿರುವುದಕ್ಕಿಂತ ಅನಿವಾರ್ಯ ಸಂದರ್ಭಗಳೇ ಈಕೆಯನ್ನು ಹೀಗೆ ರೂಪಿಸಿವೆ ಎಂಬುದೇ ಬಹುತೇಕ ಸತ್ಯ. "ಹೆಣ್ಣು ಹೆಣ್ಣಾಗಿಯೇ ಜನಿಸುವುದಿಲ್ಲ. ಜಗತ್ತು ಆಕೆಯನ್ನು ಹೆಣ್ಣನ್ನಾಗಿ ರೂಪಿಸುತ್ತದೆ." ಎಂಬ ಸಿಮೊಂತ ಡಿ ಬೊವ ಮಾತನ್ನು ಇಲ್ಲಿ ನೆನೆಯಬೇಕಾಗುತ್ತದೆ.

ಹಾಗೆಯೇ, " ಮೊಲೆ ಮೂಡಿ ಬಂದರೆ ಹೆಣ್ಣೆಂಬರಯ್ಯ, ಮೀಸೆ ಕಾಸೆ ಬಂದರೆ ಗಂಡೆಂಬರಯ್ಯ, ನಡುವೆ ಸುಳಿವಾತ್ಮನು ಹೆಣ್ಣು ಅಲ್ಲ. ಗಂಡು ಅಲ್ಲ ಕಾಣಾ ರಾಮನಾಥ. ಎಂದು ಜೇಡರ ದಾಸಿಮಯ್ಯನವರು 11ನೇ ಶತಮಾನದಲ್ಲೆ ರಚಿಸಿದ್ದಾರೆ.

ಬದುಕಿನ ಅನಿವಾರ್ಯ ಅವಳಲ್ಲಿ ಈ ಗುಣಗಳನ್ನು ತುಂಬಿದ್ದರೂ ಇದನ್ನು ಮೀರಿ ಆಕೆ ಸಬಲೆಯಾಗಿ ವೃತ್ತಿಪರಳಾಗಿ, ತನ್ನ ವಿಶಿಷ್ಠತೆಯನ್ನು ಮೆರೆಯುತ್ತಾಳೆ. ಇಂತಹ ಅನೇಕ ಮಹಿಳಾ ನೆಲೆಗಳನ್ನು ಕಾಯ್ಕಿಣಿಯವರ ಕತೆಗಳಲ್ಲಿ ಗುರುತಿಸಬಹುದು.

ಹೆಣ್ಣಿಗೆ ಅವಳ ಛಲ ಮತ್ತು ಬದುಕನ್ನು ಕುರಿತಾದ ಸಕಾರಾತ್ಮಕ ನೀವು ಇಲ್ಲಿ ವಿಶೇಷವೆನಿಸುತ್ತದೆ. ಬದುಕಿನ ಕುರಿತಾದ ಹಲವಾರು ಬಿಕ್ಕಟ್ಟುಗಳ ಅಂತರಂಗದಲ್ಲಿ ಬೆಂದು ಹೋಗುತ್ತಿದ್ದರೂ, ಇವರ ನಡುವೆ ತನ್ನ ವೃತ್ತಿಗೆ ಚ್ಯುತಿ ಬಾರದಂತೆ , ಬಂಡವಾಳ ಹಾಕಿದ ಕಂಪನಿಯ ಯಜಮಾನನ ಬೊಕ್ಕಸಕ್ಕೆ ಧಕ್ಕೆಯಾಗದಂತೆ ಮುಖದ ತುಂಬ ನಗುವನ್ನು ತುಂಬಿಕೊಂಡು ಕಣ್ಣುಗಳಲ್ಲಿ ಮಾದಕತೆ ತುಂಬಿಕೊಂಡು ಬಳಸಿ ನೃತ್ಯ ಮಾಡುವ ಇವರ ಕೌಶಲ ಇಲ್ಲಿಇವರ ವಿಶಿಷ್ಟತೆಯಾಗಿರುತ್ತದೆ. ಅಷ್ಟೇ ಅಲ್ಲದೆ, ಕಛೇರಿಗಳಲ್ಲಿ ನಗಲೇ ಬೇಕಾದ ಸ್ವಾಗತಕಾರಿಣಿಯರು, ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಜನರನ್ನು ಚಿಯರ್ ಮಾಡಲೆಂದೇ ಇರುವ ಚಿಯರ್ ಗರ್ಲ್‌ಗಳು ಇವರೆಲ್ಲರಿಗೂ ಇದು ವೃತ್ತಿ. ಬದುಕಿನ ಅನಿವಾರ್ಯ ವೈಯಕ್ತಿಕವಾಗಿ ಇವರೆಲ್ಲ ಸಂತೋಷವಾಗಿರುತ್ತಾರೆಯೇ? ಸಂತೋಷ ಇದ್ದಿದ್ದರೆ, ನೆಮ್ಮದಿ ಇದ್ದಿದ್ದರೆ ಇವರೇಕೆ ಈ ವೃತ್ತಿ ಮಾಡುತ್ತಿದ್ದರು. ಇಂತಹ ಚಿತ್ರಣಗಳಲ್ಲಿ ಇವರ ಬದುಕಿನ ಬದ್ಧತೆಯೇ ಒಂದು ವಿಶಿಷ್ಠತೆಯಾಗುತ್ತದೆ.

ಹಾಗೆಯೇ ಮಹಿಳೆ ಶೋಷಣೆಗೆ ಒಳಗಾಗುವ ನೆಲೆಗಳನ್ನೂ, ನಗುವಿನ ಹಿಂದಿರುವ ವಿಷಾದವನ್ನು ಕತೆಗಾರರು ಇಲ್ಲಿ ಬಿಡಿಸಿಡುತ್ತಾರೆ.

- ಜಯಂತ್ ಕಾಯ್ಕಿಣಿಯವರ ಪ್ರಮುಖ ಕಥಾ ಸಂಕಲನಗಳಲ್ಲಿ ಒಂದು 'ತೂಫಾನ್ ಮೇಲ್'. ಇದರಲ್ಲಿನ ಪ್ರಮುಖ ಕತೆ 'ಕಣ್ಮರೆಯ ಕಾಡು". ಹೆಣ್ಣು ಹುಟ್ಟಿದ ಮನೆಗೆ ಹಾಗೂ ಸೇರಿದ ಮನೆಗೆ ಎರಡೂ ಕಡೆಯಲ್ಲಿ ಒಳ್ಳೆಯ ಹೆಸರನ್ನು ತರಬೇಕೆಂದು ಹಂಬಲಿಸುತ್ತಾಳೆ. ಅಲ್ಲದೆ ಆಕೆಗೆ ಹಲವಾರು ಜವಾಬ್ದರಿಗಳೂ ಇರುತ್ತವೆ. ಮಗಳಾಗಿ, ಅಕ್ಕನಾಗಿ, ಹೆಂಡತಿಯಾಗಿ, ಅಮ್ಮನಾಗಿ ಹಲವು ರೀತಿಯ ಕರ್ತವ್ಯಗಳನ್ನು ಆಕೆ ಮುಂದುವರೆಸಿಕೊಂಡು ಹೋಗಬೇಕು. ಅಂತಹ ಒಂದು ಕತೆಯು ಇದಾಗಿದೆ. ಪರುಳೇಕರನ ಕುಟುಂಬದಲ್ಲಿ ಹೆಂಡತಿ ಯಮುನಾಬಾಯಿ, ದೊಡ್ಡ ಮಗಳು ಕುಸುಮ ಮದುವೆ ನಿಶ್ಚಯವಾದ ಎರಡನೇ ಮಗಳು ಪೂರ್ವಿ, ಹಾಗೂ ಮಗ ಮಕರಂದ, ಭೋಟು ಎಂದು ಎಲ್ಲರೂ ಕರೆಯುತ್ತಿದ್ದರು. ದ್ವಿತೀಯ ಪಿ.ಯು.ಸಿ. ಅನುತ್ತೀರ್ಣನಾದ ಈತ ಫೈನಾನ್ಸ್ ವ್ಯವಹಾರಕ್ಕೆ ಕೈಹಾಕಿ ಗೆಳೆಯರಿಂದ ಮೋಸ ಹೋಗಿ, ಒದೆ ತಿಂದನು. ಮರ್ಯಾದೆಗೆ ಅಂಜಿದ ತಂದೆ ಮಗಳ ಮದುವೆಯ ಪ್ರತಿಷ್ಠೆಯ ಕಾರಣದಿಂದ ಈತನನ್ನು ಮನೆಯಿಂದ ಆಚೆ ಹಾಕುತ್ತಾರೆ. ಎಲ್ಲರೂ ಮೌನ ವಹಿಸಿ ಬಿಕ್ಕಿದರೂ ಅವನು ಮರೆಯಾಗುವವರೆಗೂ ನೋಡಿದವಳೆಂದರೆ, ಕುಸುಮ ಮಾತ್ರ. ಪೂರ್ವಿಯನ್ನು ಮದುವೆಯಾಗುವ ಭಾವಿ ಪತಿ ಸುಹಾಸ್ ಇದೊಂದೆ ಕಾರಣವನ್ನು ಹಿಡಿದು ಆಗಲೇ ದರ್ಪ ತೋರಿಸಲು ಪ್ರಾರಂಭಿಸಿದ್ದ ಮದುವೆ ದಿನ ಒಂದು ಬಿಟ್ಟರೆ ಹಸೆಮಣೆಯಿಂದ ಹಾಗೆ ಎದ್ದು ಜಾಗ ಖಾಲಿಮಾಡುತ್ತೇನೆ ಎಂದು ಬೆದರಿಕೆ ಕೂಡ ಹಾಕಿದ್ದ. ಇದರಿಂದ ಹೆದರಿದ ಪೂರ್ವಿ ತನ್ನ ಗೆಳತಿಯರನ್ನು "ಮದುವೆಯ ವೇಳೆ ಒಂದೊಮ್ಮೆ ಭೋಟು ಬಂದರೆ ಅದರಿಂದ ಮದುವೆ ಮುರಿಯುತ್ತದೆ. ನನ್ನ ಬಾಳು ಹಾಳಾಗುತ್ತದೆ ಅಂತ ಹೇಳಿ– ಎಂದು ತನ್ನ ಗೆಳತಿಯರನ್ನು ಆರ್ಯಸಮಾಜದ ಹೊರಗೆ ನಿಲ್ಲಿಸಿದ್ದಳು".[27] ಮಂಗಳ ಸೂತ್ರದ ಒಡೆಯನಾದ ಮೇಲೆ ಸುಹಾಸನ ಟಿಕಾಣಿ, ಪೆರುಳೇಕರನ ಮನೆಗೆ ಬಂದ ನಂತರ ಆತನ ದರ್ಪ ಅತಿಯಾಯಿತು. ಆಗ ಬೇರೆ ಸಂಸಾರ ಹೂಡಿದ ಪರುಳೇಕರ್ ಮಗನನ್ನು ಹುಡುಕಿ ಸಿಗದೆ ಕೊನೆಗೊಂದು ದಿನ ಕೊನೆಯುಸಿರು ಎಳೆದ. ಕೊನೆಗೆ ಯಮುನಾ ಪೂರ್ವಿಯೊಂದಿಗೆ ಬಾಳಲು ಬರಬೇಕಾಯಿತು. ಜೊತೆಗೆ ಕುಸುಮನ ಗಂಡ ದುಬೈಗೆ ಕೆಲಸ ಸಿಕ್ಕು ಹೋದ ನಂತರ ಈಕೆಗೆ ಕ್ಯಾಷ್ ವಿಭಾಗಕ್ಕೆ ವರ್ಗವಾದಾಗ ಈಕೆ ಆ ಕಟ್ಟು ಕಟ್ಟು ಹಣವನ್ನು ಕಂಡಾಗ ತನ್ನ ತಮ್ಮನ ಪ್ರಕರಣ ನೆನಪಿಗೆ ಬರುವುದಿತ್ತು. ತನ್ನ ತಾಯಿ ತನ್ನ ಮಗ ಶ್ರೀಮಂತನಾಗಿದ್ದಾನೆ. ಚೆನ್ನಾಗಿ ಬಾಳುತ್ತಿದ್ದಾನೆ ಎಂದು ಹೇಳುವಾಗ ಈಕೆ ನೆಮ್ಮದಿಯ ನಿಟ್ಟುಸಿರು

ಬಿಡುವಳು. ಮಾತ್ರವಲ್ಲ. ಅವ ಎಂದಾದರೂ ಸಿಕ್ಕರೆ ಅವನಿಗೆ ನೀಡಲಿಕ್ಕೆಂದೇ ಹೆಚ್ಚಿಗೆ ಹಣವನ್ನು ಪರ್ಸಿನಲ್ಲಿ ಇಟ್ಟುಕೊಂಡಿರುವಂತಹವಳು. ತಂಗಿ ಪೂರ್ವಿ ಜಬರ್ದಸ್ತಿನಿಂದ ತಾಯಿಯನ್ನು ಹೀನಾಯವಾಗಿ ಹಳಿಯುವಳು. ಕೊನೆಗೆ ಒಂದು ದಿನ ಕುಸುಮಾಗೆ ತನ್ನ ತಮ್ಮನ ಇರುವಿಕೆ ತಿಳಿದು ಬಂದಾಗ ಪೂರ್ವಿಯೊಂದಿಗೆ ಹೋಗಿ ನೋಡಲು ಹೋಗುತ್ತಾಳೆ. ಪೂರ್ವಿ ತನ್ನದೇ ಆದ ಜೀವನ ಲೋಕದಲ್ಲಿ ಬಡಬಡಿಸುತ್ತಾ ಹೋಗುತ್ತಾಲೆ. ಆದರೆ ಕುಸುಮಾಗೆ ಅಂಗಡಿಯ ಹತ್ತಿರ ಹೋದಂತೆ, ತನ್ನ ಎದೆಯ ಢವಗುಟ್ಟುವಿಕೆ ಹೆಚ್ಚಾದಂತೆ ಅನಿಸುತ್ತದೆ. ಪೂರ್ವಿ ತನಗೆ ಸಂಬಂದವೇ ಇಲ್ಲ ಎನ್ನುವಂತೆ ದೂರ ನಿಲ್ಲುತ್ತಾಳೆ. ಹತ್ತಿರಕ್ಕೆ ಹೋಗಿ ನೋಡಿದ ಕುಸುಮಾಗೆ ಏನನ್ನಿಸಿತೋ ಏನೋ ಅವ ಆರಾಮವಾಗಿರಲಿ ಅವನ ಚಿಕ್ಕ ಅಂಗಡಿ, ಅವನ ಪುಟ್ಟ ದೇವರು ಅವನನ್ನು ಕಾಪಾಡು ಎಂದು ಅಲ್ಲಿಂದ ಭೋಟು ಎಂಬ ನಿಟ್ಟುಸಿರಿನಿಂದ ಆಕೆ ಬರುತ್ತಾಳೆ. ಇದು ಒಂದು ಕಡೆ ತಮ್ಮನನ್ನು ತಮ್ಮೆಲ್ಲರ ಬಂಧನದಿಂದ ರಕ್ಷಿಸುವ ರೀತಿಯೊಂದಿಗೆ ಆಕೆ ಆತನನ್ನು ಕಂಡು ನೆಮ್ಮದಿಯ ನಿಟ್ಟುಸಿರು ಬಿಡುವಳು .ಇದು ವಾತ್ಸಲ್ಯವನ್ನು ತೋರಿಸಿದಂತಿದೆ. ಇದೇ ಇವಳ ವಿಶಿಷ್ಟತೆಯಾಗಿದೆ.

- ಜಯಂತ್ ಕಾಯ್ಕಿಣಿಯವರ 'ಕಣ್ಮರೆಯ ಹಾಡು' ಕತೆಯಲ್ಲಿ ಕುಸುಮಾಳ ಪಾತ್ರ ಅಮೋಘವಾದುದ್ದಾಗಿದೆ. ಏಕೆಂದರೆ, ತಂದೆಯಿಂದ ಹೊರದೂಡಲ್ಪಟ್ಟ ತಮ್ಮನನ್ನು ಬಾಗಿಲಲ್ಲಿ ನಿಂತು ಕಣ್ಮರೆಯಾಗುವವರೆಗೂ ನೋಡಿದ ಈಕೆ ಅವ ಚಿಕ್ಕವನಿದ್ದಾಗ ಹೆಚ್ಚಿನ ಪ್ರೀತಿ ತೋರೆ ಹೆಚ್ಚು ಎತ್ತಿ ಆಡಿಸಿದವಳೇ ಅವಳು. ಮಕ್ಕಳಿಲ್ಲದ ಕುಸುಮಾಗೆ ತನ್ನ ತಮ್ಮ ಭೋಟುವನ್ನು ಕಂಡರೆ ಒಂದು ರೀತಿಯ ಮಮತೆ. ಆದ್ದರಿಂದ ತಂದೆ, ಮನೆಯಿಂದ ಹೊರ ಹಾಕಿದ ತಮ್ಮನನ್ನು "ಕುಸುಮಳೊಬ್ಬಳೇ ಬಾಗಿಲಲ್ಲಿ ನಿಂತು, ಕೊನೆಯ ಬೀದಿ ದೀಪದ ಅಡಿಗೆ ಅವನು ಕುಂಟುತ್ತಾ ದೂರವಾಗುತ್ತಾ ಮರೆಯಗುವವರೆಗೆ ನೋಡಿದಳು. ಆಗಷ್ಟೆ ತಂತಿಯಿಂದ ಜಗ್ಗಿ ಹಾಕಿಕೊಂಡಿದ್ದ ಅವನ ಇಸ್ತ್ರಿ ಇಲ್ಲದ ತಿಳಿಹಳದಿ ಟೀಷರ್ಟ್‌ನ ಬೆನ್ನಿನ ಮೇಲೆ ತಂತಿಯ ಕುರುಹಿನ ನೆರಿಗೆಯ ಗೆರೆ ಬೀದಿ ದೀಪದಲ್ಲೂ ಸ್ಪಷ್ಟವಾಗಿ ಕಾಣುತ್ತಿತ್ತು".[28] ಆಕೆ ಮೌನವಹಿಸಿ ತನ್ನ ದು:ಖವನ್ನು ನುಂಗುತ್ತಾಳೆ. ಕೆಲವೊಂದು ಕಡೆಗಳಲ್ಲಿ ಹೆಣ್ಣಿಗೆ" ಮಾತಿನ ಸಾಧ್ಯತೆಗಳಿಕದ್ದರೂ ಅದು ಹೊರಗೆ ತೋರ್ಪಡದೇ ಒಳಗಡೆಯೇ ಇರುವಂತಾಗಿಬಿಡುತ್ತದೆ. ಕೊನೆಗೆ ಮಾತಿನ ಚಲನವಲನಗಳಿದ್ದು ಅದಕ್ಕೆ ಯಾವ ಅರ್ಥಸಾಧ್ಯತೆಗಳೂ ಇಲ್ಲವಾಗುತ್ತವೆ. ಟೆಲಿವಿಷನ್ ನೋಡುವಾಗ ಮ್ಯೂಟ್ ಬಟನ್ ಒತ್ತಿದರೆ, ಏನಾಗುತ್ತದೆಂಬುದನ್ನು ಗಮನಿಸಿ. ಅಂದರೆ, ಮಾತಾಡುತ್ತಿದ್ದರೂ ಅದು ನಮಗೆ ಕೇಳುವ ಸ್ಥಿತಿಯಲ್ಲಿ ಇರುವುದಿಲ್ಲ. ಹೆಂಗಸಿನ ಸ್ಥಿತಿ ಹೀಗೆ

ಮ್ಯೂಟ್ ಮಾಡಿ ಅವಸ್ಥೆಯೋ (ಅ) ಆಕೆ ಮೌನವನ್ನು ಆಶ್ರಯಿಸುತ್ತಾಳೋ ಎಂಬುದು ಮುಖ್ಯವಾಗುತ್ತದೆ".[29] ಹಾಗೆಯೇ ಕುಸುಮಳ ಸ್ಥಿತಿಯಾಗುತ್ತದೆ. ಪೂರ್ವಿ ಸ್ವಾರ್ಥಪರಳಾದರೆ, ಕುಸುಮ ಸದಾ ತನ್ನ ತಮ್ಮನ ಹುಡುಕಾಟದಲ್ಲೇ ಇರುವಳು. ಮಕ್ಕಳಿಲ್ಲದ ಈಕೆಗೆ ಕ್ಲಿನಿಕ್‌ಗಳಿಗೆ ಹೋದಾಗ ಅಲ್ಲಿನ ಮಕ್ಕಳ ಫೋಟೋಗಳನ್ನು ಕಂಡಾಗ ತನ್ನ ತಮ್ಮ ಛೋಟುವಿನ ಮುಖಭಾಗವೇ ನೆನಪಾಗುತ್ತಿತ್ತು. ಮಕ್ಕಳಿಲ್ಲದಿದ್ದರೂ ಆಕೆಯಲ್ಲೂ ತಾಯಿಯ ಆರ್ದ್ರ ಪ್ರೀತಿಯನ್ನು ಕಾಣಬಹುದಿತ್ತು. ಆಕೆಗೆ ಕ್ಯಾಷಿಯರ್ ಆಗಿ ಬಡ್ತಿ ಪಡೆದಾಗ ಹಣದ ಕಟ್ಟುಗಳನ್ನು ಎಣಿಸಿ ಚೊಕ್ಕ ಮಾಡಿ ಇಡುವಾಗ ಆಕೆಗೆ ಹಠಾತ್ತನೆ ಛೋಟೂನ ಪ್ರಕರಣದ ಇಪ್ಪತ್ತು ಸಾವಿರ ರೂಪಾಯಿ ನೆನೆಪಿಗೆ ಬಂದು ಅದೆಷ್ಟು ಕ್ಷುಲ್ಲಕ, ಅಮಾಯಕ ಅನಿಸುತ್ತಿತ್ತು. ಮಕ್ಕಳೇ ಅಗದ ಅವಳು ಛೋಟುನ ತೊದಲು ನುಡಿಗಳನ್ನು ನೆನೆಪಿಸಿಕೊಳ್ಳುತ್ತಿದ್ದಳು. ಅಲ್ಲದೆ ಅವನು ಪಿ.ಯು.ಸಿ.ಯಲ್ಲಿ ಫೇಲ್ ಆಗದೆ ಇದ್ದಿದ್ದರೆ ಈ ಇಪ್ಪತ್ತು ಸಾವಿರ ರೂಪಾಯಿ ಪ್ರಕರಣವೂ ಇಷ್ಟೊಂದು ವಿಪರೀತವಾಗಿ ತೋರುತ್ತಿರಲಿಲ್ಲವೇ? ಸರಿಯಾಗಿ ಓದದ ಪೊರನ ಹೊರೆಯನ್ನು ಹೊರಲು ಹಿಂಜರಿದು ಆ ಸಣ್ಣ ಮನೆ ಅವನನ್ನು ಹಾಗೆ ಹಾರ ಹಾಕಿತೆ? ಹೀಗೆಲ್ಲ ಯೋಚಿಸಿದ ಕುಸುಮಾ ತಾನಾಗಿಯೇ ಅವನ ಪತ್ತೆಗೆ ಪ್ರಯತ್ನಿಸಿದ್ದು ಇತ್ತು. ಇಲ್ಲಿ ಛೋಟೂ ಒಬ್ಬ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದವ. ಅವನನ್ನು ಪ್ರತಿಯೊಬ್ಬ ತಂದೆ ತಾಯಿಗಳು ಹಂಬಲಿಸುವಂತೆ ಚೆನ್ನಾಗಿ ಓದಿಸಿ ಎಲ್ಲೋ ಒಂದು ಕಡೆ ಕೆಲಸ ಗಿಟ್ಟಿಸಿಕೊಂಡು ನೆಲೆನಿಂತು ತನ್ನನ್ನು ತಾನು ಸಂಭಾಳಿಸಿಕೊಂಡು ಹೋಗುವಂತಾದರೆ ಸಾಕು ಎಂದು ಹಂಬಲಿಸುವಮತೆ ಅವರೂ ಆಶಿಸಿದ್ದರು. ಆದರೆ ಓದಲು ಸಾಧ್ಯವಾಗದೆ ನಪಾಸಾದ ಈತ ಹಣದ ಪ್ರಕರಣವನ್ನು ಬೇರೆ ಮೈಮೇಲೆ ಎಳೆದುಕೊಂಡಾಗ ತಂದೆ ತಾಯಿಗಳು ಗಾಬರಿಗೊಳ್ಳುತ್ತಾರೆ. ಮಾತ್ರವಲ್ಲ ಅದೇ ಸಂದರ್ಭಕ್ಕೆ ಪೂರ್ವಿಯ ಮದುವೆಯು ನಿಶ್ಚಯ ಮಾಡಿದ್ದು ಮಗನ ಈ ಅವಾಂತರದಿಂದ ಎಲ್ಲಿ ಮಗಳ ಮದುವೆ ನಿಲ್ಲುತ್ತದೋ ಎಂಬ ಭಯ ಉಂಟಾಗುತ್ತದೆ. ಏಕೆಂದರೆ ತಮ್ಮ ಸಂಪಾದನೆಯ ಹಣವನ್ನೆಲ್ಲ ಸೇರಿಸಿ ಮದುವೆಗೆ ಖರ್ಚು ಮಾಡುವಾಗ ಮದುವೆ ನಿಂತರೆ ಹೊಳೆಯಲ್ಲಿ ಹುಳಿ ಕಿವಿಚಿದಂತೆ ವ್ಯರ್ಥವೇ ಎಂಬುದು ಒಂದು ಭಯ , ಮತ್ತೊಂದು ಪ್ರತಿಷ್ಠೆಯ ಭಯ, ಜನ ಎಲ್ಲಿ ತಮ್ಮ ಕುಟುಂಬದ ಬಗ್ಗೆ ಆಡಿಕೊಳ್ಳುವರೋ ಎಂಬುದು ಮತ್ತೊಂದು ಕಡೆ ಭಯವಿರುತ್ತದೆ. ಇದು ಮಧ್ಯಮವರ್ಗದ ಪ್ರತಿಯೊಬ್ಬ ವ್ಯಕ್ತಿಯ ಮನಸ್ಥಿತಿಯೇ ಆಗಿರುತ್ತದೆ. ಹೀಗೆ ಕುಸುಮಾಳಿಗೆ ತನ್ನ ತಮ್ಮನ ಬಗ್ಗೆ ಕರುಳು ಚುರುಕ್ ಎನ್ನುವಂತೆ ಅನಿಸುತ್ತಿದ್ದುದು ಬಹಳ. ಅದಕ್ಕಾಗಿ ಆಕೆ ತನ್ನ ತಮ್ಮ ಸಿಕ್ಕರೆ ಅವನಿಗೆ ಕೊಡಲೆಂದೆ ಹೆಚ್ಚಿಗೆ ಹಣವನ್ನು ಪರ್ಸಿನಲ್ಲಿಟ್ಟುಕೊಂಡು ಓಡಾಡುತ್ತಿದ್ದಳು., ಅವಳಿಗೆ ಇಲ್ಲೇ ಹತ್ತಿರದಲ್ಲೇ ಇದ್ದಾನಂತೆ ಎಂದು

ಪೂರ್ವಿಗೆ ಹೇಳುತ್ತಾಳೆ. ಕಣ್ಮರೆಯಾಗಿದ್ದುಕೊಂಡೇ ವಿವಿಧ ರೂಪಗಳಲ್ಲಿ ಎಲ್ಲರ ಖಾಸಗೀ ಹೋರಾಟದ ಭಾಗವಾಗಿ, ವಿಚಿತ್ರ ಅಮೂರ್ತ ಶಕ್ತಿಯಾಗಿ ಬೆಳೆಯುತ್ತ ಬಂದ ಭೋಟೂ, ಇಲ್ಲೇ ಕೇವಲ ಇಪ್ಪತ್ತು ಮೂವ್ವತ್ತು ನಿಮಿಷದ ನಡಿಗೆಯಲ್ಲಿ ಇದ್ದಾನೆ ಎಂದಾಗ ಮಧ್ಯಾಹ್ನದ ನೀರವದಲ್ಲಿ ಹತಾಶವಾದ ಉದ್ವೇಗವಿತ್ತು. ಕುಸುಮ ಪೂರ್ವಿಗೆ "ಬಾ ಹೋಗಿ ನೋಡಿ ಬರೋಣ ಎಂದಾಗ ಒಂದು ಬಗೆಯ ಮಂಕಿನಲ್ಲಿ ಆಕೆ ಎದ್ದು ನಿಂತಳು".[30] ಕುಸುಮಳಲ್ಲಿ ತಮ್ಮ ಸಿಗಬಹುದೆಂಬ ನಂಬಿಕೆಯ ಜೊತೆಗೆ ಇಲ್ಲದೇ ಹೋದರೆ ಎಂಬ ಹತಾಶ ಭಾವವೂ ಇರುತ್ತದೆ. ಆದರೆ, ಪೂರ್ವಿಯಲ್ಲಿ ಅದಾವುದರ ಲವಲೇಶವೂ ಇಲ್ಲದೆ ಸೋದರಿಕೆಯ ಪ್ರೀತಿಯೂ ಇಲ್ಲದೆ ತನ್ನ ಜೀವನದ ಪಾಡೇ ತನಗೆ ಎಂಬಂತೆ ಇರುತ್ತಾಳೆ. ಅಲ್ಲದೆ ಆಕೆ ಹತ್ತಿರಕ್ಕೆ ಹೋದ ನಂತರ ನೀನೇ ಹೋಗಿ ನೋಡು ನಾನು ಇಲ್ಲಿಂದನೇ ನೋಡುತ್ತೇನೆಂದು ಹಠ ಮಾಡುತಾಳೆ. ಆಗ ಕುಸುಮ ಮೆಲ್ಲಗೆ ದಾಟಿ ಕಾಜಿನಂಗಡಿಯ ಸಮೀಪ ನಿಂತು ಅಳುಕುತ್ತಲೇ ಪಾನ್ ಶಾಪಿನತ್ತ ನೋಡುತ್ತಾಳೆ. ಹಾಗೆ ಥಕ್ಕನೆ ಅವನೇ ಆಗಿ ತೋರಿಬರುವಂತೆ ಖಂಡಿತ ಇರಲಿಲ್ಲ. ಆದರೂ ಆಕೆಯ ಮನಸ್ಸು ಮಾತ್ರ ಇದು ಭೋಟುವೇ ಎಂದು ದೃಢನಿರ್ಧಾರ ಮಾಡಿದಂತೆ ಕಂಡು ಬರುತ್ತದೆ. ಆಕೆಯ ಮನಸ್ಸಿನಲ್ಲಿ ಒಂದು ಕ್ಷಣ ಪ್ರಯತ್ನಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಕ್ಕೀತು ಎಂದು ಎನಿಸಿದರೂ ಅವನ ಕುರಿತಾಗಿ ತನ್ನದೇ ಆಲೋಚನೆಯಲ್ಲಿ ಮುಳುಗುತ್ತಾಳೆ. "ಬತಾದೆ ಬತದೆ ಎಂದು ಬಟಾಟೆ ವಡಗೆ ತೊದಲು ಕೈಚಾಚುತ್ತಿದ್ದ ಈಮುದ್ದು ಪೋರ ಪಾನ್ ಕಟ್ಟುವುದನ್ನು ಹೇಗೆ ಕಲಿತ, ತನ್ನದೇ ದೇವರನ್ನು ಹೇಗೆ ನಿರ್ಧರಿಸಿದ ಅವನ ಚೌಕಾಕಾರದ ಅಂಗಡಿಯ ಪೆಟ್ಟಿಗೆ ಒಂದು ಸ್ವತಂತ್ರ ಉಪಗ್ರಹದಂತೆ ಆಕೆಗೆ ತೋರಿತು. ಅವನು ಮತ್ತು ನಮ್ಮೆಲ್ಲರ ಜಗತ್ತಿನ ನಡುವೆ ವಿಚಿತ್ರವಾದ ಗೆರೆ ಇದೆ. ಅಪ್ರತ್ಯಕ್ಷನಾಗಿಯೇ ಏನೇನೋ ಆಗಿ ನಮ್ಮೆಲ್ಲರನ್ನೂ ಒಂದಾಗಿ ಹಿಡಿದಿರುವ ಮುನ್ನಡೆಸಿರುವ ಭೋಟೂಗು ಮತ್ತು ತನ್ನದೇ ಒಂದು ಪ್ರೇಮ ದ್ವೇಷ, ವ್ಯವಹಾರ, ಭಕ್ತಿ, ಭಯ, ಟೀಶರ್ಟು, ಉದ್ರಿ, ನಗದು, ಪಾಪ ಪುಣ್ಯ ಉಪಗ್ರಹವೊಂದನ್ನು ಕಟ್ಟಿಕೊಂಡು ತಲ್ಲೀನವಾಗಿರುವ ಈ ಜೀವಕ್ಕೂ ಏನೇನೂ ಸಂಬಂಧವಿಲ್ಲ. ಆ ಇಪ್ಪತ್ತು ಸಾವಿರ ರೂಪಾಯಿಯನ್ನು ಅವನು ಹೇಗೆ ಹೊತ್ತುಕೊಂಡಿದ್ದಾನೋ ಗೊತ್ತಿಲ್ಲ. ಇಲ್ಲೇ ಪಕ್ಕದಲ್ಲೇ ಮನೆಯಿಂದ ಕೇವಲ ಎರಡೂವರೆ ಕಿಲೋಮೀಟರ್ ಅಂತರದಲ್ಲೇ ಇರುವ ಈತ ನಮಗೆ ಸಂಬಂಧಪಟ್ಟವನಲ್ಲ. ಈತನನ್ನು ಮತ್ತೆ ನಮ್ಮೆಲ್ಲರ ಹಂಗಿನ ಲೋಕಕ್ಕೆ ತಂದು ಧ್ವಂಸ ಮಾಡುವುದೇ? ಇವನ ಪುಟ್ಟ ಅಂಗಡಿಯ, ಪುಟ್ಟ ಪ್ರೇಮಿನ ಇವನ ಪುಟ್ಟ ದೇವರೇ ಇವನ ಸ್ವರ್ಗ ನರಕಗಳನ್ನು ಕಾಪಾಡು. ಇವನ ಟೀಶರ್ಟುಗಳಿಗೆ ಇಸ್ತ್ರಿ ಮಾಡು".[31] ಎಂದು ಕುಸುಮ ದೂರದಿಂದಲೇ ಕಣ್ತುಂಬ ನೋಡಿ ಕಾಲ್ತೆಗೆಯುತ್ತಾಳೆ. ಏಕೆಂದರೆ ಇವನನ್ನು ಮತ್ತೆ ತಮ್ಮೊಂದಿಗೆ

ಸೇರಿಸಿಕೊಂಡರೆ ಹಳೆಯ ನೆನಪುಗಳು ಈತನಿಗೆ ಹಿಂಸೆ ಎನಿಸಬಹುದು. ಅವನ ಹೊಸ ಲೋಕವೇ ಅವನಿಗೆ ಹಿತ ನೀಡಲಿ ಎಂಬಂತೆ ತಾಯಿ ಹಾರೈಸುವಂತೆ ಹಾರೈಸಿ ಯಾರಿಗೂ ಕೇಳಿಸದಂತೆ ಛೋಟೂ ಎಂಬ ಉದ್ಗಾರದೊಂದಿಗೆ ಆಕೆ ಅಲ್ಲಿಂದ ಹೊರಡುತ್ತಾಳೆ ಇದು ಆಕೆಯ ಮಮತಾಮಯಿ ಸೋದರಿಯ ವಾತ್ಸಲ್ಯವನ್ನು ತೋರಿಸುತ್ತದೆ. ಪ್ರಬುದ್ಧ ತೀರ್ಮಾನ ಬಹಳ ವಿಶೇಷವೆನಿಸುತ್ತದೆ.

➢ ಜಯಂತ್ ಕಾಯ್ಕಿಣಿಯವರ ಪ್ರಮುಖ ಕಥೆಗಳಲ್ಲಿ ಒಂದಾದದ್ದು "ಭಾಮಿನಿ ಸಪ್ತಪದಿ" ಈಕತೆಯಲ್ಲಿ ಭಾಮಿನಿ ಗೋಕರ್ಣದ ಒಂದು ಹೆಣ್ಣುಮಗಳಾಗಿ ಆಕೆ ತನ್ನ ತಾಯಿ ಎಂಟು ವರ್ಷದವಳಾಗಿದ್ದಾಗಲೇ ತೀರಿಕೊಂಡಿದ್ದು, ಆಕೆಗೆ ಅದೆಲ್ಲ ಅಸ್ಪಷ್ಟ ತನ್ನ ತಂದೆಗೆ ಗುಜರಾತಿನ ಅಹಮದಾಬಾದಿನಲ್ಲಿ ದೇವಸ್ಥಾನದ ಕೆಲಸಕ್ಕೆ ಎಂದು ಭಾಮಿನಿಯೊಂದಿಗೆ ಬಂದು ನೆಲೆಸಿದರು. ಇದೆಲ್ಲ ಕಳೆದು ಎಷ್ಟೋ ವರ್ಷಗಳು ಕಳೆದು ಹೋದವು. ಭಾಮಿನಿಗೆ ಈಗೆ ತಂದೆಯೂ ಇಲ್ಲ ಜೊತೆಗೆ ಅಹಮದಾಬಾದಿನ ಸ್ಟೇಷನರಿ ಅಂಗಡಿಯವನನ್ನು ಮದುವೆಯಾಗಿ ಒಂದು ಹೆಣ್ಣುಮಗುವನ್ನು ಹಡೆದಳು. ಮಾತ್ರವಲ್ಲ ಮುನಿಸಿಪಲ್ ಚುನಾವಣೆಗೆ ನಿಂತು ಅಲ್ಲಿ ಯಾವ ಪ್ರಚಾರವೂ ಇಲ್ಲದೆ ಗೆದ್ದು ಬಂದಳು. ಆಗ ಆಕೆಯ ರೂಪವೇ ಶಾಪವಾದಂತೆ, ಚಂದದ ಮೇಲೆ ತೋರಿಸಿ ಗೆದ್ದುಬಂದಳು ಎಂದು ಜನ ಬಡಬಡಾಯಿಸಿದರು. ಅಲ್ಲದೆ ಆಕೆ ಸಮಾಜದ ಬಗ್ಗೆ ಅತಿಯಾದ ಕಳಕಳಿಯನ್ನು ಹೊಂದಿದ್ದಳು. ಜನರೆಲ್ಲ ಪರೇಶನಿಗೆ ಚುಚ್ಚುವಂತೆ ಹೇಳುತ್ತಿದ್ದರೂ ಆತ ಭಾಮಿನಿ ಕಾರ್ಯವೈಖರಿಯನ್ನು ಕಂಡು ಮೂಕವಿಸ್ಮಿತನೇ ಆಗಿ ಹೋಗಿದ್ದ. ಏಕೆಂದರೆ ಒಂದುಕಡೆ ಮನೆ ಸಂಸಾರ ಮಗು, ಸಮಾಜ, ಅಂಗಡಿ, ಎಲ್ಲವನ್ನು ಆಕೆ ನಿಭಾಯಿಸುತ್ತಿದ್ದಳು. ಮೋರ್ವಿ ಅಣೆಕಟ್ಟು ಒಡೆದು ನಿರ್ಗತಿಕರಾದ ಜನರಿಗೆ ಅಭಯವನ್ನು ನೀಡಿ ವಸತಿಯನ್ನು ಕಲ್ಪಿಸಿಕೊಟ್ಟ ಈಕೆಯನ್ನು ಜನ ದೇವರಂತೆ ಕಾಣುತ್ತಿದ್ದರು. ಇಂತಹ ಸಂದರ್ಭದಲ್ಲೂ ಮಗುವನ್ನು ತನ್ನೊಂದಿಗೆ ಕರೆದುಕೊಂಡು ಹೊಗುತ್ತಿದ್ದಳು. ಇಲ್ಲಿ ಆಕೆಯು ಹೆಂಡತಿಯ ಪಾತ್ರದ ಜೊತೆಗೆ ತಾಯಿಯ ಕರ್ತವ್ಯವನ್ನು ಅಷ್ಟೇ ಜಾಗರೂಕತೆಯಿಂದ ನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ. ಏಕೆಂದರೆ ಇಂದು ಉದ್ಯೋಗಸ್ಥ ಮಹಿಳೆಯರು ಕೆಲಸದ ನೆಪ ಮನೆಯ ಒತ್ತಡ ಹಾಗೂ ಹಣಕಾಸಿನ ಜಂಜಾಟಗಳಿಂದ ಪುಟ್ಟ ಪುಟ್ಟ ಮಕ್ಕಳನ್ನು ಡೇಕೇರ್‌ಗೆ ಸೇರಿಸಿಬಿಡುತ್ತಾರೆ. ಇದರಿಂದ ತಾಯಂದಿರ ಸಂಪೂರ್ಣವಾದ ಸುಖವನ್ನು ಅನುಭವಿಸಿದಂತಲ್ಲ. ಜೊತೆಗೆ ಅವರ ಒತ್ತಡಗಳೂ ಅಷ್ಟೇ ಇರುತ್ತವೆ ಎಂಬುದನ್ನು ಮರೆಯಬಾರದು. ಅಲ್ಲದೆ ಡೇರೆಯಲ್ಲಿ ಖಾಯಿಲೆಗಳು ಉದ್ಭವಿಸುತ್ತವೆ. ಆಗ ಆಕೆ ಡೇರಿಯಿಂದ ಒಂದು ಅನಾಥ ಮಗುವನ್ನು ಮನೆಗೆ ಕರೆದುಕೊಂಡು ಬರುತ್ತಾಳೆ. ಇದು

ಕೆಲಸಕ್ಕಿರಬಹುದು ಎಂದು ಪರೇಶ್ ಭಾವಿಸಿದಾಗ ಈಕೆ ಸಿಡಿದೇಳುತ್ತಾಳೆ. ಅಲ್ಲದೆ, ಈಕೆಗೆ ಕರ್ನಾಟಕ ಸಂಘದವರಿಂದ ಕಾರ್ಯಕ್ರಮಕ್ಕೆ ಆಹ್ವಾನ ದೊರೆತಾಗ ಈಕೆಗೆ ತನ್ನ ತಾಯಿಯ ಜೊತೆಗೆ ತಾಯ್ನಾಡಿನ ನೆನಪಾಗುತ್ತದೆ. ಅಲ್ಲದೆ ಪರೇಶ್ ಈಕೆಯ ಹೆಸರನ್ನು ಬಳಸಿ ಮೊರ್ವಿಯ ದುರಂತಕ್ಕೆ ಹಣ ವಸೂಲಿಗಾಗಿ ಟೊಂಕ ಕಟ್ಟಿ ನಿಲ್ಲುತ್ತಾನೆ. ಈ ವಿಚಾರ ತಿಳಿದ ಭಾಮಿನಿ ಇದನ್ನು ವಿರೋಧಿಸಿದಾಗ ಈತನಿಂದ ಪೆಟ್ಟುಗಳನ್ನು ಜನರೆದುರು ತಿನ್ನುತ್ತಾಳೆ. ಅಲ್ಲದೆ, ಮನೆಯಲ್ಲೂ ಒಂದು ರೀತಿಯ ಕ್ಷೋಭೆ ಉಂಟಾಗುತ್ತಿರುತ್ತದೆ. ಪರೇಶ್ ಪಿಂಕಿಗೆ ಒಂದು ರೀತಿ ಮಾಡಿದರೆ, ಡಂಪಿಗೆ ಒಂದು ರೀತಿ ಮಾಡುತ್ತಿರುತ್ತಾನೆ. ಅಲ್ಲದೆ ಡಂಪಿಗೆ ಕಾಲಿನ ಆಪರೇಷನ ಎಂದು ಹೇಳಿ ಹಣವಸೂಲಿ ಮಾಡುತ್ತಾಳೆ. ಅಲ್ಲದೆ ಆಸ್ಪತ್ರೆಯಲ್ಲಿ ಕೆಲವು ದಿನಗಳು ಕಳೆದು ಮನೆಗೆ ಬಂದಾಗ ಪರೇಶ್ ಆಕೆಯನ್ನು ಇಲ್ಲಿ ಇರಿಸಿಕೊಳ್ಳಲು ನನ್ನಿಂದ ಸಾಧ್ಯವಿಲ್ಲ ಒಂದು ವ್ಯವಸ್ಥೆ ಮಾಡು ಎಂದಾಗ ಆಕೆ ಗಟ್ಟಿ ನಿರ್ಧಾರ ಮಾಡಿದವಳಂತೆ ಗೋಕರ್ಣದ ಕಡೆಗೆ ಮುಖ ಮಾಡುತ್ತಳೆ. ಆದರೆ ಅಲ್ಲಿಗೂ ಹೋದಾಗಲು ಕೂಡ ಈಕೆ ನಿರೀಕ್ಷೆ ಮಾಡಿದ್ದು ಈಕೆಗೆ ಸಿಗುವುದಿಲ್ಲ. ಆಕೆಗೆ ಸಮುದ್ರವೊಂದೇ ಸಾಂತ್ವಾನ ಹೇಳುವಂತೆ ಭಾಸವಾಗುತ್ತದೆ. ಹಳೆಯ ನೆನಪುಗಳು ಕೆದರಿರುವಾಗಲೇ ಡಂಪಿ ಕಂಡು ತನ್ನ ತಾಯ್ತನದ ನೆನಪು ಅರಿವಿಗೆ ಬರುತ್ತದೆ.

- ಜಯಂತ್ ಕಾಯ್ಕಿಣಿಯವರ ಕತೆಯಲ್ಲಿ ಬರುವ ಭಾಮಿನಿ ಸಮಾಜಕ್ಕೆ ಒಂದು ಮಾದರಿ ಹೆಣ್ಣಿನ ರೀತಿಯಲ್ಲಿ ಕಂಡು ಬರುತ್ತಾಳೆ. ಏಕೆಂದರೆ ಈಕೆ ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡು ತಂದೆಯೊಂದಿಗೆ ಬೆಳೆದರೂ, ಅಹಮದಾಬಾದಿನಲ್ಲಿ ಸ್ಟೇಷನರಿ ಅಂಗಡಿಯ ಪರೇಶನನ್ನು ಮದುವೆಯಾಗುತ್ತದೆ. ಬಹು ಅಂದಗಾತಿಯಾದ ಇವಳಲ್ಲಿ "ಬೇರೆ ಊರಿಂದ ಬಂದು ತಳವೂರಿದವರಲ್ಲೇ ಇರುವ ಸಾಹಸೀ ಪ್ರವೃತ್ತಿಯೊಂದು ಇವಳಲ್ಲಿ ಪ್ರವಹಿಸುವಂತೆ ಸದಾ ಹುರಿಗೊಳಿಸಿದ ಬಿಲ್ಲಿನಂತೆ".[32] ಆಕೆ ಚಟವಟಿಕೆಯಿಂದ ಇರುತ್ತಿದ್ದಳು. ಅಲ್ಲದೆ ಮುನಿಸಿಪಲ್ ಚುನಾವಣೆಯಲ್ಲಿ ಯಾವ ಪ್ರಚಾರವೂ ಇಲ್ಲದೆ ಎಲ್ಲರನ್ನೂ ಅಚ್ಚರಿಗೊಳಿಸುವಂತೆ ವಿಜಯ ಶಾಲಿಯಾಗುತ್ತಾಳೆ. ಬದುಕುವವರನ್ನು ಕಂಡರೆ ಬಾಯಿ ಬಡಿದುಕೊಳ್ಳುವ ಜನರು ಎಲ್ಲಾ ಕಡೆ ಕಾಣುವಂತೆ ಈಕೆಯು ರೂಪವನ್ನು ಪ್ರದರ್ಶಿಸಿ ವಿಜಯಿಯಾದಳು ಎಂದು ಜನ ಬಡಬಡಿಸುತ್ತಾರೆ. ಈಕೆ ಮನೆಯನ್ನು ಸಂಬಳಿಸಿ, ಮಗುವಿನ ತಾಯಿಯಾಗಿ ಸಮಾಜ ಸೇವಕಿಯಾಗಿ ತನ್ನನ್ನು ತಾನು ನಿಸ್ವಾರ್ಥತೆಯಿಂದ ದುಡಿಮೆಯಲ್ಲಿ ತೊಡಗಿಸಿಕೊಂಡಿರುತ್ತಾಳೆ. ಅಲ್ಲದೆ "ಸೌಂದರ್ಯವನ್ನೇ ಅಸಲನ್ನಾಗಿಟ್ಟುಕೊಂಡು ಸಮಾಜ ಇವಳನ್ನು

ನೋಯಿಸತೊಡಗಿದ್ದು".[33] ಈಕೆಗೆ ಇದೊಂದು ಶಾಪವೇ ಎನಿಸುವಂತೆ ಆಗುತ್ತಿತ್ತು. ಮೊದಲೆಲ್ಲ ಈಕೆಯನ್ನು ಸ್ಟೇಷನರಿ ಪರೇಶನ ಚಂದ ಹೆಂಡತಿ ಎಂದು ಅವಳನ್ನು ನೋಡುತ್ತಿದ್ದು, ಜನ ಈಗ ಮುನಿಸಿಪಲ್ ಸದಸ್ಯೆ, ಸಮಾಜ ಕರ್ತೆಯ ಭಾಮಿನಿಯ ಗಂಡ ಎಂದು ಅವಳನ್ನು ನೋಡುತ್ತಿದ್ದು, ಜನ ಈಗ ಮುನಿಸಿಪಲ್ ಸದಸ್ಯೆ, ಸಮಾಜ ಕಾರ್ಯಕರ್ತೆಯ ಭಾಮಿನಿಯ ಗಂಡ ಎಂದು ಅವನನ್ನು ನೋಡತೊಡಗಿದರು. ಇದರಿಂದ ಇವರ ಪುಟ್ಟ ಸಂಸಾರದಲ್ಲಿ ನಿಧಾನವಾಗಿ ಬಿರುಕು ಕಾಣುವಂತಾಯಿತು. ಸಮಾಜದಲ್ಲೇ ಜನ ಯಾರನ್ನೂ ಬದುಕಲು ಬಿಡುವುದಿಲ್ಲ ಎಂಬುದಕ್ಕೆ ಇದೊಂದು ಸಾಕ್ಷಿಯಾಗಿದೆ. ಅಲ್ಲದೆ ಈಕೆ ಮೋರ್ವಿ ಊರು ಜಲಸಮಾಧಿಗೊಂಡಾಗ ತನ್ನ ಮಗುವೊಂದಿಗೆ ಅವರಿಗೆ ಒಂದು ನೆಲೆಯನ್ನು ದೊರಕಿಸಿಕೊಡುವಲ್ಲಿ ಯಶಸ್ವಿಯಾಗುತ್ತಾಳೆ. ಈಕೆಯು ಮಗುವಿನೊಂದಿಗೆ ಡೇರಿಗೆ ಬಂದಾಗ ಡೇರಿಯಲ್ಲಿ ಮಗುವನ್ನು ನೋಡಿಕೊಳ್ಳುತ್ತಿರುತ್ತಾರೆ. ನಾವಿಲ್ಲಿ ಒಂದು ವ್ಯಾಪಾರವನ್ನು ಗಮನಿಸಬಹುದು. ಎಳೆಯ ಮಕ್ಕಳನ್ನು ಡೇ ಕೇರ್‌ಗಳಿಗೆ ಸೇರಿಸಿ ಕೆಲಸಕ್ಕೆ ಹೋಗುವ ಮಹಿಳೆಯರನ್ನು ಆಧುನಿಕದಲ್ಲಿ ಕಾಣುತ್ತೇವೆ. ಆದರೆ ಸಮಾಜ ಸೇವಕಿಯಾದ ಈಕೆಗೆ ತಾಯಿಯ ಸ್ಥಾನವೂ ಮುಖ್ಯ ಹಾಗೆಯೇ ಸಮಾಜದ ಏಳ್ಗೆಯೂ ಪ್ರಮುಖ ಎನಿಸುತ್ತದೆ. ಅಲ್ಲದೆ ಅಲ್ಲಿ ಸಾಂಕ್ರಾಮಿಕ ರೋಗಗಳು ಸಂಭವಿಸಿ ತನ್ನ ಮಗು ಪಿಂಕಿಯನ್ನು ಮಾತ್ರ ಗಂಡ ಕರೆದುಕೊಂಡು ಬಂದಾಗ ಈಕೆ ಡೇರೆಯ ಇತರ ಮಕ್ಕಳಂತೆ ನಮ್ಮ ಮಗುವೂ ಎಂದೂ ಹೇಳಿದಾಗ ಆಕೆಯ ತಾಯಿಯ ಕಾಳಜಿ ಗೊತ್ತಾಗುತ್ತದೆ.ಅಲ್ಲದೆ ಆಕೆ ಡೇರೆಯಿಂದ ಅನಾಥ ಮಗುವೊಂದನ್ನು ಕರೆದುಕೊಂಡು ಬಂದು ನಮ್ಮ ಮನೆಯಲ್ಲೇ ಇರುತ್ತದೆ. ಎಂದಾಗ, ನರೇಶ, ಪಿಂಕಿಯನ್ನು ನೋಡಿಕೊಳ್ಳಲು ಈಕೆ ಚಿಕ್ಕವಳಲ್ಲವೇ ಎಂದಾಗ ಈಕೆ ಕೋಪಗೊಂಡು ಅವಳು ಪಿಂಕಿಯ ಜೊತೆಗೇ ನಮ್ಮ ಮಗಳಾಗಿ ಬೆಳೆಯುತ್ತಾಳೆ. 'ಖಬರ್‌ದಾರ್' ಅವಳನ್ನು ಸಹಾಯಕಿ ಅಂತ ತಿಳಿದರೆ ಎಂದು ಎಚ್ಚರಿಕೆಯನ್ನು ನೀಡುತ್ತಾಳೆ. ಇಂದಿನ ದಿನಗಳಲ್ಲಿ ತಮ್ಮ ಮಕ್ಕಳನ್ನೇ ಸಾಕಿ ಸಲಹಲು ಹೆಣಗಾಡುತ್ತಿರುವಾಗ ಅನಾಥ ಮಗುವನ್ನು ತಮ್ಮ ಮಗುವಿನಂತೆ ಸಾಕೋಣ ಎನ್ನುವ ಮನಸ್ಸು ದೊಡ್ಡದು. ಅಲ್ಲದೆ ಹೆಣ್ಣು ಮಕ್ಕಳೆಂದರೆ ಮೂಗೆಳೆಯುವ ಇಂದಿನ ದಿನಗಳಲ್ಲಿ ಈಗಾಗಲೇ ತಮ್ಮ ಮನೆಯಲ್ಲಿ ಹೆಣ್ಣು ಮಗುವಿದ್ದರೂ ಮತ್ತೊಂದು ಹೆಣ್ಣು ಮಗುವನ್ನು ತಂದು ಸಾಕುವ ಧೈರ್ಯ ಮಾಡಿದ ಭಾಮಿನಿ ನಿಜವಾದ ತಾಯಿ ಸ್ಥಾನಕ್ಕೆ ಅರ್ಹಳು. ಅಲ್ಲದೆ ಈಕೆಯ ಹೆಸರಿನಲ್ಲಿ ಗಂಡ ಚಂದಾ ವಸೂಲಿ ಮಾಡುತ್ತಿರುವ ವಿಷಯ ಗೊತ್ತಾದಾಗ ಈಕೆ ಆತನನ್ನು ವಿರೋಧಿಸುತ್ತಾಳೆ ಆದರೆ ಗಂಡಸರ ದರ್ಪದ ಮುಂದೆ ಹೆಣ್ಣು ಎಂದಿದ್ದರೂ ಅಡಿಯಾಳೆ ಇದೇ ಪ್ರಸಂಗ ಇಲ್ಲಿ ಮರುಕಳಿಸುತ್ತದೆ. ಆಕೆ ಒಬ್ಬ

ರಾಜಕೀಯ ವ್ಯಕ್ತಿಯಾಗಿದ್ದರೂ ಗಂಡ ರಸ್ತೆಯಲ್ಲಿ ಎಳೆದಾಡಿ ಹೊಡೆಯುವಾಗ ಈಕೆಯ ಸ್ಥಿತಿಯನ್ನು ಕಂಡು ಮಮ್ಮಲ ಮರುಗುವಂತೆ ಆಗುತ್ತದೆ. ಏಕೆಂದರೆ ಸಮಾಜದಲ್ಲಿ ಪ್ರತಿಷ್ಠೆ ಎಂಬ ಹೆಸರನ್ನು ಪಡೆದ ನಂತರ ಅದನ್ನೇ ಹಾಗೆ ಕಾಪಾಡ ಬೇಕಾದದ್ದು ಅನಿವಾರ್ಯವಾಗುತ್ತದೆ. ನಂತರ ಈಕೆ ತನ್ನ ಕಾರ್ಯಚಟುವಟಿಕೆಗಳನ್ನು ನಿಲ್ಲಿಸಿ ಮನೆಯಲ್ಲಿ ಉಳಿಯುತ್ತಾಳೆ. ಆದರೆ ನರೇಶ್‌ನ ಕೆಲವೊಂದು ಕೃತ್ಯಗಳು ಈಕೆಗೆ ಸಹಿಸಲು ಅಸಾಧ್ಯವೆನಿಸುತ್ತದೆ ಡಂಪಿಗೆ ಒಂದು ರೀತಿ ಮಾಡಿದರೆ ಪಿಂಕಿಗೆ ಒಂದು ರೀತಿ ಮಾಡುತ್ತಿರುತ್ತಾನೆ. ಇದು ಈಕೆಗೆ ಸಹಿಸದ ಸಂಗತಿ ಏಕೆಂದರೆ ತಾಯಿಯ ಮಮತೆ ಎಲ್ಲರಿಗೂ ಒಂದೇ ರೀತಿಯಾಗಿರುತ್ತದೆ. ಅಲ್ಲದೆ ಡಂಪಿಗೆ ಒಂದು ಸಲ ಕಾಲಿಗೆ ಗಾಯ ಮಾಡಿಕೊಂಡಾಗ ಆಪರೇಷನ್‌ಗೆ ಈತ ಹಣ ನೀಡದಿದ್ದಾಗ ಈಕೆ ಅರ್ಧಮುಕ್ಕಾಳು ದಿನ ಸುತ್ತಾಡಿ ಹಣ ಹೊಂದಿಸುತ್ತಾಳೆ. ಹಾಗೆಯೇ ಕೇಳುವಾಗ "ನಾನು ಮೊರ್ವಿಯ ನಿರಾಶ್ರಿತ ಶಿಬಿರದಿಂದ ತಂದು ಸಾಕಿದ ಮಗುವಿಗೆ ಆಪರೇಷನ್ ಮಾಡಬೇಕಿದೆ. ಎಂದು ಹೇಳಿದಳೆ ಹೊರತು ಎಲ್ಲೂ ನನ್ನ ಮಗಳಿಗೆ ಆಪರೇಷನ್ ಅಂತ ಯಾಕೆ ಹೇಳಲಿಲ್ಲ. ಎಂಬ ಯೋಚನೆ ಬರುತ್ತದೆ. ಆಗ ತನ್ನ ಮಗಳು ಎಂದಾಗ ಪ್ರತಿಷ್ಠೆಯ ನೆರಳು ಅಲ್ಲಿ ಚಾಚಬಹುದು. ಹಾಗೆಯೇ ತನ್ನಲ್ಲಿ ಹಣವಿಲ್ಲದೆ ಇಲ್ಲಿಗೆ ಬಂದಿರಬಹುದೇ ಎಂಬ ಅನುಮಾನಗಳಿಗೆ ಅದು ಎಡೆ ಮಾಡಿಕೊಡಬಹುದು. ಅಂತೂ ಆಕೆಗೆ ಅನಿಸಿದಂತೆ ನನ್ನಲ್ಲೂ ಇದೆಂಥ ಅಗ್ಗದ ಅಹಂಕಾರ? ಡಿಂಪಿಯ ಮೊರ್ವಿಯ ಮೂಲವನ್ನು ಬಳಸಿಕೊಂಡು ಈ ಮನೆಯ ಅಡಚಣೆಯನ್ನು ಒಂದು ಸಾಮಾಜಿಕ ನೆಲೆಯಲ್ಲಿ ಮುಂದುಮಾಡಿಬಿಟ್ಟೆನಲ್ಲ ತನಗೂ ತನ್ನ ಗಂಡನಿಗೂ ಅಂತಹ ದೂರವೇನಿಲ್ಲ".[34] ಎಂದು ಆಕೆಗೆ ತನ್ನ ತಪ್ಪಿನ ಅರಿವಾಗುತ್ತದೆ. ಆದರೆ ಮಗುವಿನ ಪ್ರಾಣವನ್ನು ಉಳಿಸಲು ಹಾಗೂ ನಾಳೆ ಅಂಗವಿಕಲ ಮಕ್ಕಳನ್ನು ಸಮಾಜಕ್ಕೆ ಕೊಡಬಾರದೆಂಬ ಒಂದು ಜಾಗೃತ ಮನಸ್ಸನ್ನು ಆಕೆ ಹೊಂದಿದಳು ಎಂಬ ಅಂಶವನ್ನು ನಾವಿಲ್ಲಿ ಗಮನಿಸಬೇಕು. ನರೇಶ್ ಡಂಪಿಯನ್ನು ನನ್ನಿಂದ ನೋಡಿಕೋಳ್ಳಲು ಸಾಧ್ಯವಿಲ್ಲ ಎಲ್ಲಾದರೂ ಒಂದು ವ್ಯವಸ್ಥೆ ಮಾಡು ಎಂದಾಗ ಆಕೆ ಗೋಕರ್ಣಕ್ಕೆ ಬರುತ್ತಾಳೆ. ಅಲ್ಲಿಯಾದರೂ ಆ ಮಗು ಮತ್ತು ತನಗೆ ನೆಲೆಸಿಗಬಹುದೆಂಬ ಆಕೆಯ ಹಂಬಲ ಇಲ್ಲಿ ಹುಸಿಗೊಳ್ಳುತ್ತದೆ. ದೊಡಮ್ಮನ ಮಾತುಗಳಿಂದ ನೊಂದು ಆಕೆ ಸಮುದ್ರ ಸುತ್ತಲು ಹೋದಾಗ ಅಲ್ಲಿ ತನ್ನ ತಾಯಿಯ ನೆನಪು ಅವಳನ್ನು ಕಾಡುತ್ತದೆ. ಅಲ್ಲದೆ ತನ್ನನ್ನು ತಬ್ಬಲಿಯಾಗಿಸಿದ ಆ ಕ್ಷಣ ಅವಳನ್ನು ಗಾಬರಿಗೊಳಿಸುತ್ತದೆ. ಆಕೆಗೆ ತನ್ನ ತಾಯಿಯ ಕುರಿತು "ಅವಳೆಷ್ಟು ಏಕಾಕಿಯಾಗಿದ್ದಿರಬಹುದು ಏ ಬಿಂದುವಿನಲ್ಲಿ ಅಪ್ಪ ಆಗ ಮನೆಯಲ್ಲಿ ಚಪ್ಪರ ಕಟ್ಟುತ್ತಿದ. ನಾನು ಚೆನ್ನೆಮಣೆ ಆಡುತ್ತಿದ್ದೆ.ಬಂದು ಜಗಿದುಬಿಟ್ಟಳು ಇಲ್ಲಿ. ಜಗಿಯುವಾಗ ಕಣ್ಣು ತೆರೆದಿದ್ದಳೋ,

ಮುಚ್ಚುತ್ತಿದ್ದಳೋ ಕೊನೆಗೆ ಬಾರಿಗೆ ಅವಳಿಗೆ ಕಂಡ ಸಮುದ್ರ ಹೇಗಿತ್ತು? ಹೀಗೆ ಇತ್ತೇ? ಹೀಗೆ ತನ್ನದೇ ಯೋಚನಾಲಹರಿಯಲ್ಲಿರುವಾಗ ಮೋರ್ವಿಯ ಜಲಸಮಾಧಿ ನೆನಪಿಗೆ ಬರುತ್ತದೆ".[35] ಹಾಗೆಯೇ ತನ್ನಂತೆಯೇ ತನ್ನ ತಾಯಿಗೂ ಅವಳ ರೂಪವೇ ಶತ್ರುವಾಗಿ ಆತ್ಮಹತ್ಯೆ ಮಾಡಿಕೊಂಡಿರ ಬಹುದಾದ ಸಂದರ್ಭ ಅವಳನ್ನು ಕಾಡುತ್ತದೆ. ಮದುವೆಯಾಗಿ ಹೋದವರೆಲ್ಲ ಸಮಾಧಿ ಆಗಬೇಕೇನೋ ಉದಾ:- ತಾನು ಕಂಡ ಕಾಠೇವಾಡರ ಹೆಂಗಸರು ಮಲ ಹೊರುವ ಕಾಯಕದಲ್ಲಿ ಇಂದಿಗೂ ಇರುವರಲ್ಲ. ಇದು ನಿಮಗ್ಯಾಕೆ? ಎಂದಾಗ ನಮ್ಮ ಮಕ್ಕಳ ಮಲವನ್ನು ತೆಗೆಯುವುದಿಲ್ಲವೇ? ಹಾಗೆನೇ ಇದನ್ನೂ ತೆಗೀತೀವಿ ಎಂದಾಗ ಹೆಣ್ಣು ತಾಯಿಯ ರೂಪದಲ್ಲಿ ಎಂತಹ ಕೆಲಸವನ್ನು ಅಸಹ್ಯವಿಲ್ಲದೆ ಮಾಡುತ್ತಾಳೆ ಬದುಕಿಗೊಂದು ನೆಲೆ ಇದ್ದೇ ಇರುತ್ತದೆ ಎನ್ನುವುದನ್ನು ಆಕೆಯಲ್ಲಿ ಕಾಣಬಹುದು. ಅಲ್ಲದೆ ದೂರದಲ್ಲಿ ಡಂಪಿ ಓಡಿಬರುವುದು ಹೊಸ ಚೈತನ್ಯವನ್ನು ತಾಯಿಯಲ್ಲಿ ಮೂಡಿದಂತೆ ಕಂಡು ಬರುತ್ತದೆ. ತಾನು ಆತಾಯ್ತನವನ್ನು ನಿಭಾಯಿಸಲೇ ಬೇಕೆಂಬ ನಿರ್ಧಾರಕ್ಕೆ ಭಾಮಿನಿ ಬರುತ್ತಾಳೆ. ಹೀಗೆ ತನ್ನ ಬದುಕಿನ ಅತಂತ್ರ ಸ್ಥಿತಿಯಲ್ಲೂ ತನ್ನದಲ್ಲದ ಮಗುವಿಗೆ ತಾನು ತಾಯಿಯಾಗುವ ವಿಶಿಷ್ಟ ನಿರ್ಧಾರಕ್ಕೆ ಇವಳು ಬದ್ಧಳಾಗುತ್ತಾಳೆ. ಇದು ಆಕೆಯಲ್ಲಿರುವ ವಿಶಿಷ್ಟ ಗುಣವಾಗಿದೆ.

- ಜಯಂತ್ ಕಾಯ್ಕಿಣಿಯವರ ಪ್ರಮುಖ ಕಥಾ ಸಂಕಲನದಲ್ಲಿ ಒಂದಾದದ್ದು "ಅಮೃತ ಬಳ್ಳಿಯ ಕಷಾಯ" ಈ ಕಥಾ ಸಂಕಲನದ ಪ್ರಮುಖ ಕಥೆ 'ಅಮೃತ ಬಳ್ಳಿಯ ಕಷಾಯ' ಈ ಕತೆಯಲ್ಲಿ ಆಯಿ ತನ್ನ ಒಂದು ವ್ಯಕ್ತಿ ವಿಶಿಷ್ಟತೆಯಿಮದಾಗಿ ತನ್ನನ್ನು ತಆನು ಗುರುತಿಸಿಕೊಳ್ಳುತ್ತಾಳೆ. ಏಕೆಂದರೆ, ಈಕೆಯಲ್ಲಿರುವ ಒಂದು ಸಹಾಯ ಗುಣ ಎಲ್ಲರಲ್ಲಿಯೂ ನಾವು ಕಾಣಲು ಸಾಧ್ಯವಿಲ್ಲ. ಹೆಣ್ಣು ಸಹಜವಾಗಿಯೇ ಸಹಾಯಕ ಮನೋಭಾವವನ್ನು ಹೊಂದಿದ್ದರೂ ಆಯಿಯಷ್ಟು ಸಹಾಯ ಗುಣ ಅಪರೂಪ. ಏಕೆಂದರೆ ಆಯಿ ತನಗೆ ಮಗುವಾಗಿ ಆಸ್ಪತ್ರೆಯಲ್ಲಿ ಮಲಗಿದ್ದಾಗ ತನ್ನ ಮಗನಿಗೆ ಹಾಲುಣಿಸುವುದರ ಜೊತೆಗೆ, ಹಾಲಿಲ್ಲದೆ ಅಳುವ ಎಷ್ಟೋ ಕಂದಮ್ಮಗಳಿಗೆ ಹಾಲುಣಿಸಿ ಮಹಾತಾಯಿಯಾಗಿದ್ದಾರೆ. ಏಕೆಂದರೆ ಇಂದಿನ ದಿನಗಳಲ್ಲಿ ತಮ್ಮ ಹೆತ್ತ ಮಕ್ಕಳಿಗೆ ಸ್ತನ್ಯಪಾನ ಮಾಡಿಸಿದರೆ ತಮ್ಮ ಸೌಂದರ್ಯ ಹಾಳಾಗುತ್ತದೆ ಎಂದು ಯೋಚಿಸುವ ಎಷ್ಟೋ ಮಹಿಳೆಯರನ್ನು ಕಾಣಬಹುದು. ಇಂತಹ ಸಂದರ್ಭದಲ್ಲಿ ತನ್ನ ಮಗನಿಗೂ ಸ್ತನ್ಯಪಾನ ಮಾಡಿಸಿ ಇತರ ಮಕ್ಕಳಿಗೂ ಮಾಡಿಸುವ ಆಕೆಯ ಗುಣವನ್ನು ವರ್ಣಿಸಲು ಅಸಾಧ್ಯ. ಅಲ್ಲದೆ ಮನೆಯಲ್ಲಿ ಮಗು ಹುಷಾರಿಲ್ಲದೆ ಮಲಗಿದ್ದಾಗಲೂ ಮಗುವನ್ನು ಬಿಟ್ಟು ಆಕೆ ಆಸ್ಪತ್ರೆಯಲ್ಲಿ ದಿಕ್ಕಿಲ್ಲದೆ ನರಳುವ ತಬ್ಬಲಿಗಳಿಗಾಗಿ ಮನೆಯಿಂದ ಗಂಜಿಯನ್ನು

ಮಾಡಿಕೊಂಡು ಅವರಿಗೆ ಅಮೃತ ಬಳ್ಳಿಯ ಕಷಾಯವನ್ನು ತೆಗೆದುಕೊಂಡು ಹೋಗುತ್ತಾಳೆ. ಇದನ್ನು ಕಂಡಾಗ ತಮ್ಮ ಮಗುವಿಗೆ ಕೇವಲ ಶೀತವಾದರೆ ದೊಡ್ಡ ಖಾಯಿಲೆಯಾಗಿದೆ ಎಂದು ಪರಿತಪಿಸುವ ಮಹಿಳೆಯರಿಗೆ ಬೇರೆ ಮಕ್ಕಳು ವಿಪರೀತ ಖಾಯಿಲೆಗಳಿಂದ ನರಳುತ್ತಿದ್ದರೂ ಅವರ ಗಮನಕ್ಕೆ ಬಾರದೆ, ತಮ್ಮ ಮಗುವೇ ತಮಗೆ ಮುಖ್ಯವೆನಿಸುತ್ತದೆ. ಆದರೆ ಆಯಿ ಅದನ್ನು ಮೀರಿ ಇಲ್ಲಿ ಚಿತ್ರಿತಗೊಂಡಿದ್ದಾರೆ. ಅಷ್ಟೇ ಅಲ್ಲದೆ ಆಕೆ ತನ್ನ ಗಂಡನನ್ನು ಕಳೆದುಕೊಂಡಾಗಲು ಕೇವಲ ಅಲ್ಪ ಸಮಯ ಒಳಗಿದ್ದು ತನಗೆ ಏನು ಆಗಿಲ್ಲವೆಂಬಂತೆ ಆಕೆ ಆಸ್ಪತ್ರೆಗೆ ಗಂಜಿಯನ್ನು ಕಒಂಡೊಯ್ಯುತ್ತಾಳೆ. ಇದರಿಂದ ಇಂದಿನ ಎಷ್ಟೋ ವಿಧವೆಯರು ತಾವು ಮನೆಯಿಂದಲೇ ಹೊರಗೆ ಹೋಗಬಾರದು, ತಾವು ಅಪಶಕುನಗಳು ಎಂದು ನೊಂದುಕೊಳ್ಳುವಾಗ ದಿಟ್ಟತನದಿಂದ ಹೊರಗೆ ಬರುವ ಈಕೆ ರೀತಿಯ ಸೂರ್ತಿಯ ಸೆಲೆಯಾಗಿ ಕಂಡು ಬರುತ್ತಾರೆ.

- ಅಷ್ಟೇ ಅಲ್ಲದೆ ಮಗನ ಫೋಟೋಗಳಿಗೆ ಕಟ್ಟು ಹಾಕುವ ಅಂಗಡಿಯಲ್ಲಿ ದಿಕ್ಕಿಲ್ಲದವರ ಫೋಟೋಗಳನ್ನು ಏನು ಮಾಡಲಿ ಎಂದು ಮಗ ಕೇಳಿದಾಗ ಅಷ್ಟು ದೊಡ್ಡ ಜಾಗದಲ್ಲಿ ಆ ಫೋಟೋಗಳನ್ನು ಇಡಲು ಜಾಗವಿಲ್ಲವೇ ಎಂದು ಕೇಳಿದಾಗ ಆಕೆಯ ಮನೋವೈಶಾಲ್ಯತೆಯನ್ನು ಕಾಣಬಹುದು. ಏಕೆಂದರೆ ಇಂದಿನ ದಿನಗಳಲ್ಲಿ ತಮ್ಮ ಹಿರಿಯರ ಫೋಟೋಗಳನ್ನು ಹಳೇಕಾಲದವುಗಳೆಂದು ಮನೆಯಿಂದ ತೆಗೆದೆಸೆಯಲು ಕಾಯುತ್ತಿರುತ್ತಾರೆ. ಏಕೆಂದರೆ ಒಂದು ಕಾಲದಲ್ಲಿ ಆ ಮನೆಯನ್ನು ಕಟ್ಟಲು ಮನೆಯನ್ನು ನಿಲ್ಲಿಸಲು ಮನೆಯನ್ನು ಉಳಿಸಲು ಹೆಣಗಾಡಿದವರ ಫೋಟೋಗಳನ್ನೇ ಮನೆಯಿಂದ ಬಿಸಾಡಲು ಹೊರಟಿರುವ ಮಂದಿಗೆ ಆಯಿಯ ಪಾತ್ರ ವಿಶೇಷವಾಗಿದೆ. ಹೀಗಾಗಿ ಈಕೆಯ ಗುಣ ತನ್ನ ಮಗನಿಗೆ ಬಂದಿದ್ದು ಆತನೂ ಕುಡ ಅವಶ್ಯಕತೆ ಇರುವ ವ್ಯಕ್ತಿಯೊಬ್ಬನಿಗೆ ತನ್ನ ತಂದೆಯ ಫೋಟೋವನ್ನೇ ಕಳಚಿಕೊಡುವ ಪ್ರಸಂಗ ಗಮನಾರ್ಹವಾದದ್ದು, ಒಟ್ಟಾರೆಯಾಗಿ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ತಂದೆ ತಾಯಿಯರ ಪಾತ್ರ ಬಹು ಮುಖ್ಯವಾಗಿರುತ್ತದೆ. ಹಿಗಾಗಿ ಆಯಿಯ ಈ ಗುಣ ಎಲ್ಲರಲ್ಲಿಯೂ ಕಾಣಲು ಸಾಧ್ಯವಿಲ್ಲದ ಕಾರಣ ಆಕೆಯ ಗುಣಗಳಿಂದ ವಿಶಿಷ್ಟವಾಗಿ ಆಕೆ ಗೋಚರಿಸುತ್ತಾಳೆ.

- ಜಯಂತ್ ಕಾಯ್ಕಿಣಿಯವರ ಪ್ರಮುಖ ಕತೆಗಳಲ್ಲಿ ಒಂದಾದದ್ದು, 'ಅಪರೂಪ' ಈ ಕತೆಯಲ್ಲಿ ಅಂಗವಿಕಲೆ ಹೆಣ್ಣುಮಗಳನ್ನು ಹೇಗೆ ತಮ್ಮ ಅನುಕೂಲಕ್ಕಾಗಿ ಈ ವಿಕಲತೆಯನ್ನು ಬಳಸಿಕೊಳ್ಳುತ್ತಾರೆ ಎಂಬುದನ್ನು ಈ ಕತೆಯಲ್ಲಿ ಕಶಣಬಹುದು. ಅಲ್ಲದೆ, ಆ ಹೆಣ್ಣುಮಗಲ ಜೊತೆಗಾರ್ತಿಯರೆಲ್ಲ

ಮದುವೆಯಾಗಿ ಸುಖವಾದ ಕನಸನ್ನು ಕಾಣುತ್ತ, ತಮ್ಮ ಗಂಡ ಮಕ್ಕಳೊಂದಿಗೆ ಸಂಸಾರ ನಡೆಸುತ್ತಿರುವಾಗ ಈಕೆಗೆ; ತನ್ನ ಅಂಗವಿಕಲತೆಯ ಕಾರಣದಿಂದಾಗಿ ಯಾವ ವರನ ಕೃಪೆಯೂ ಈಕೆಯ ಮೇಲೆ ಬೀಳಲಿಲ್ಲ. ಅಲ್ಲದೆ ವರಾನ್ವೇಷಣೆ ಮಾಡುತ್ತಿದ್ದರು ಈಕೆಯಂತೆ ಅವರಲ್ಲಿಯೂ ಕೂಡ ಒಂದಲ್ಲಾ ಒಂದು ಊನತೆ ಇದ್ದೇ ಇರುತ್ತಿತ್ತು. ವಷಾ ಶಾಲೆಯಲ್ಲಿ ಕಲಿತ ನಂತರ ಮನೆಯಲ್ಲಿ ತಾಯಿಯ ಸಹಾಯಕ್ಕೆ ನಿಂತಳಲ್ಲದೆ, ತಂದೆಯ ಕೆಲವೊಂದು ಕಾರ್ಯಗಳನ್ನು ಮಾಡಿಕೊಡುತ್ತಿದ್ದಳು. ಇದರಿಂದ ಅಪ್ಪನಿಗೆ ಈಕೆ ತನ್ನ ಗಂಡು ಮಗನೆಂದು ಹೇಳಿಕೊಂಡರೂ ಮನದ ಒಂದು ಮೂಲೆಯಲ್ಲಿ ಕೊರಗು ಇದ್ದೇ ಇರುತ್ತಿತ್ತು. ಇಂತಹ ಹೆಣ್ಣು ಮಗಳು ವರ್ಷಾಳಿಗೆ ಇದ್ದಕ್ಕಿದ್ದಂತೆ ಒಂದು ದಿನ ಫೋಟೋ ತೆಗೆಸಲು ಹೊರಡು ಎಂದು ಮನೆಯವರೆಲ್ಲ ಒತ್ತಾಯ ಮಾಡಿದಾಗ ಆಕೆ ಬಹಳ ವಿರೋದಿಸುತ್ತಾಳೆ. ಆದರೆ, ಮನೆಯಲ್ಲಿ ಅದು ಅತಿ ಎನಿಸಿದಾಗ ಮನೆಯಿಂದ ಕಾಲ್ತೆಗೆದ ವರ್ಷಾ ಹೊರಗೆ ಸುತ್ತಾಡಲು ಬಂದಾಗ ಸಿನಿಮಾ ಒಂದಕ್ಕೆ ಶೂಟಿಂಗ್ ನಡೆಯುವುದನ್ನು ಕಾಣುತ್ತಾಳೆ. ಅಲ್ಲಿ ಸಿನಿಮಾ ನಾಯಕನಾಯಕಿಯರು ತಮ್ಮದೇ ಆದ ಭಂಗಿಯಲ್ಲಿ ಬಣ್ಣದ ಲೋಕದಲ್ಲಿ ವಿಹರಿಸುತ್ತಿರುವುದನ್ನು ಕಂಡು ಈಕೆ ತನ್ನ ಮನದ ಕೋಪ ತಗ್ಗಿದ ನಂತರ ಮನೆಗೆ ಬಂದು ಫೋಟೋ ತೆಗೆಸಿಕೊಂಡು ಬರಲು ತಾನು ಸಿದ್ಧ ಎಂದು ಹೇಳುತ್ತಾಳೆ. ನಂತರ ಊಟಕ್ಕೆ ಕುಳಿತ ಈಕೆಗೆ ತನ್ನ ತಾಯಿ ತಮ್ಮನ ಅನುಕೂಲಕ್ಕೆ ನಿನ್ನ ಒಂದು ಫೋಟೋ ಬೇಕು ತೆಗೆಸಿಕೊಡು ಎಂದಾಗ, ತಾಯಿಯ ವಿರೋಧದ ನಡುವೆಯು ತುಂಡು ಲಂಗ ಬಟ್ಟೆಯನ್ನು ಧರಿಸಿ ಫೋಟೋ ತೆಗೆಸಲು ಹೋದಾಗ ಅಲ್ಲಿ ತುಂಬಾ ರಶ್ಶಿದ್ದರೂ ಈಕೆ ಅವಕಾಶವನ್ನು ಮಾಡಿಕೊಡುತ್ತಾರೆ. ಅಲ್ಲದೆ ಈಕೆ ತನ್ನ ಊನತೆಯನ್ನು ಮುಚ್ಚಲು ಹೋದಂತೆ ಆತ ಅದನ್ನೇ ಚೆನ್ನಾಗಿ ಗೊತ್ತಾಗುವ ರೀತಿಯಲ್ಲಿ ಫೋಟೋವನ್ನು ಕ್ಲಿಕ್ಕಿಸುವ ಮೊದಲು ಎಲ್ಲರೂ ಸ್ಮೈಲ್ ಪ್ಲೀಸ್ ಎಂದರೆ, ಈತ ಮಾತ್ರ 'ಬಿ ಸೀರಿಯಸ್' ಎಂದು ಹೇಳುತ್ತಾನೆ. ಇದರಿಂದ ಆಕೆಗೆ ಏನೂ ನಷ್ಟವಿಲ್ಲದಿದ್ದರೂ ತನ್ನ ಒಂದು ಊನತೆಯನ್ನು ಹೇಗೆ ಬಂಡವಾಳವಾಗಿ ಬಳಸಿಕೊಳ್ಳುತ್ತಾರೆಂದು ಹಾಗೆಯೇ ತಮ್ಮ ಜೀವನವೇ ಪ್ರತಿಯೊಬ್ಬರಿಗೂ ಮುಖ್ಯವೇ ಹೊರತು ಬೇರೆಯವರ ಜೀವನದ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಎಂಬುದನ್ನು ಈ ಕತೆಯಿಂದ ತಿಳಿಯುತ್ತದೆ. ಅಲ್ಲದೆ ವರ್ಷಾಳ ತಾಯಿಯೇ ಮಗಳ ಊನತೆಯನ್ನು ಕಂಡು ಸಿಡಿಮಿಡಿಗೊಳ್ಳುತ್ತಾಳೆ. "ಎಳವೆಯಿಂದಲೂ ಕಾರಣವಿಲ್ಲದೆ ಅಪರಿಚಿತರೆದುರು ನಡೆದಾಡಲು ಹೋಗಬೇಡ" ದಾವಣಿಯನ್ನು ಬಲಗೈ ಪೂರ್ತಿ ಮುಚ್ಚುವ ಹಾಗೆ ಹೊದ್ದುಕೋ ಅಂತ ಎಷ್ಟು ಸಲ ಹೇಳೋದು? ಏನನ್ನಾದರೂ ಬೆರಳ್ಳಿಟ್ಟು ತೋರಿಸುವಾಗೆ ಸೊಟ್ಟ ಕೈಯನ್ನೇ ಯಾಕೆ ಮುಂದೆ ಚಾಚುತ್ತೀ

ಬುದ್ದಿಗೇಡಿ"[36] ಇಂತಹ ಮಾತುಗಳು ಆಕೆಯನ್ನು ಪ್ರಾರಂಭದಿಂದಲೂ ತಾನೊಬ್ಬ ಅಂಗವಿಕಲೆ ಎಂಬಂತೆ ಮಾಡಿಬಿಟ್ಟಿವೆ. ಅಷ್ಟೇ ಅಲ್ಲದೆ ತಮ್ಮ ಮಕ್ಕಳಿಗೆ ಏನಾದರೂ ಊನತೆ ಇದ್ದರೆ ಅಂತಹ ಮಕ್ಕಳಿಗೆ ಸ್ಫೂರ್ತಿ, ಧೈರ್ಯವನ್ನು ನೀಡಿ ಅವರೂ ಕೂಡ ಒಳ್ಳೊಳ್ಳೆಯ ಕ್ಷೇತ್ರಗಳಲ್ಲಿ ಮುಂದುವರೆಯುವಂತೆ ಮಾಡಬೇಕೆ ಹೊರತು ಈ ರೀತಿಯ ನಿರುತ್ಸಾಹವನ್ನು ತೋರಿಸಿ ಮೂಲೆಗುಂಪಾಗುವಂತೆ ಮಾಡಬಾರದು. ಇಂದು ಎಷ್ಟೋ ಅಂಗವಿಕಲರು ಎಂತೆಂತಹ ಸಾಧನೆಗಳನ್ನು ಮಾಡಿದ್ದಾರೆ ಎಂದು ಅವರಿಗೆ ನಾವು ಉತ್ಸಾಹ ತುಂಬಬೇಕು. ಗಿರೀಶ್ ಪ್ಯಾರಾ ಒಲಂಪಿಯದಲ್ಲಿ ಪದಕವನ್ನು ಗೆದ್ದಿರುವ ನಿದರ್ಶನಗಳಲ್ಲಿ ಇಲ್ಲಿ ನೆನೆಯಬಹುದು. ಹೀಗಾಗಿ ಅವರಿಗೆ ಇದೊಂದು ದೊಡ್ಡ ಸಮಸ್ಯೆಯೇ ಅಲ್ಲ ಎನ್ನುವ ರೀತಿಯಲ್ಲಿ ಅವರನ್ನು ಬೆಳೆಸಬೇಕು. ಆದರೆ ್ಲ ವರ್ಷ 'ತನಗೊಂದು ಬಲಬದಿ ಇಲ್ಲವೇ ಇಲ್ಲ ಎಂಬಷ್ಟು ಪಕ್ಷಪಾತದಿಂದ ದೇಹವನ್ನು ನೋಡುಗರ ಕಣ್ಣುಗಳಿಂದ ಅಡಗಿಸಿ, ಇಡುತ್ತಾ ಬಂದವಳು, ಅವಳು ವೈಯಕ್ತಿಕ ವೇದನೆಗಿಂತ ಮಿಗಿಲಾಗಿ ತನ್ನ ಕುಟುಂಬದ ಸಾಮಾಜಿಕ ಸ್ವಾಸ್ಥ್ಯಕ್ಕೆ ಸಂಬಂಧಪಟ್ಟ ಸಂಗತಿ ಎಂಬಂತೆ ತನ್ನ ದೇಹವನ್ನು ನೋಡಿಕೊಳ್ಳುತ್ತಿದ್ದಳು".[37] ತನ್ನಿಂದಾಗಿ ತನ್ನ ಕುಟುಂಬದವಿರಗೆ ಅನುಮಾನವಾಗುತ್ತಿದೆ. ಎಂದು ಅವರ ಮನೆಯ ಪ್ರತಿಷ್ಠೆಯನ್ನು ಕಾಪಾಡುವುದು ಆಕೆಯ ಮುಖ್ಯ ಉದ್ದೇಶವಾಗಿತ್ತು. ಈ ರೀತಿಯ ನೋವನ್ನು ಪ್ರತಿಯೊಬ್ಬ ಊನವಿರುವ ಮನುಷ್ಯನು ಅನುಭವಿಸುತ್ತಲೇ ಇರುತ್ತಾನೆ. ಏಕೆಂದರೆ ಯವುದೇ ಮಾನವನು ಪೂರ್ಣ ಮನುಷ್ಯನಲ್ಲ ಅವನಲ್ಲಿಯೂ ಒಂದಲ್ಲ ಒಂದು ಊನತೆ ಇದ್ದೇ ಇರುತ್ತದೆ. ಕೆಲವರಿಗೆ ಗೊತ್ತಾಗುವ ರೀತಿಯಿದ್ದರೆ ಮತ್ತೆ ಕೆಲವರಿಗೆ ಬೇರೆಯವರಿಗೆ ತಿಳಿಯದ ಹಾಗೆ ಇರುತ್ತದೆ ಎಂಬುದನ್ನು ಮರೆಯಬಾರದು. ಆದರೆ, ಈಕೆಯ ತಂದೆ ಮಾತ್ರ ನನ್ನ ಕೊನೆಗಾಲಕ್ಕೆ ಆಗುವವಳು ವರ್ಷ ಮಾತ್ರ ಎಂದು ಹೇಳುವಾಗ ಆ ಪರಿಸ್ಥಿತಿಯನ್ನು ತಿಳಿಗೊಳಿಸಲೆಂದೇ ನಾನು ಮದುವೆ ಮಾಡಿಕೊಂಡು ಹೋಗುತ್ತೇನೆ ಎಂದು ತಮಾಷೆ ಮಾಡುತ್ತಿದ್ದಳು. ಈಕೆಗೂ ವರಾನ್ವೇಷಣೆಗಳು ನಡೆಯುತ್ತಿದ್ದರೂ ಅವೆಲ್ಲ ತನ್ನಂತೆಯೇ ಒಂದೊಂದು ಪಾರ್ಟ್ ಔಟ್. ಇಲ್ಲಿ ಒಂದು ವಿಚಾರವೆಂದರೆ ಎಲ್ಲಾ ಚೆನ್ನಾಗಿರುವ ಹೆಣ್ಣುಮಕ್ಕಳಿಗೆ ಗಂಡು ಸಿಗುವುದು ಕಷ್ಟವಿರುವಾಗ, ವರ್ಷಾಳ ಸ್ಥಿತಿಯು ಒಂದು ರೀತಿಯಲ್ಲಿ ಕ್ಲಿಷ್ಟವೇ ಆಗಿದೆ. ತನ್ನ ಗೆಳತಿಯರೆಲ್ಲ ಮದುವೆಯಾಗಿರುವ ವರ್ಷ ಪ್ರಾರಂಭದಲ್ಲಿ ಇಂತಹ ಗಂಡುಗಳನ್ನು ನೋಡಿ ಬೇಜಾರು ಮಾಡಿಕೊಳ್ಳುತ್ತಿದ್ದಳಾದರೂ, ಈಗೀಗ ಅದೆಲ್ಲ ಮಾಮೂಲಿ ಎಂಬಂತೆ, "ಛೇ ಬಿಡೆ, ನಾನು ನನಗೆ ಇಷ್ಟವಾಗುವ ಸರ್ವಾಂಗ ಸುಂದರನನ್ನೇ ಮಾಡಿಕೊಳ್ಳುತ್ತೇನೆ. ಅದು ನನ್ನ ಜನ್ಮಸಿದ್ಧ ಹಕ್ಕು".[38] ಎಂದು ನಕ್ಕು ಹೇಳುತ್ತಿದ್ದಳು. ದಿನಾ ಸಾಯೋರಿಗೆ ಅಳುವವರು

ಯಾರು? ಎಂಬಂತೆ ಅವಳಿಗೆ ಅದು ಅಭ್ಯಾಸವಾಗಿ ಆ ನೋವನ್ನು ಮರೆಯಲು ಪ್ರಯತ್ನಿಸುತ್ತಿದ್ದಳು. ಮಾತ್ರವಲ್ಲದೆ ತಮ್ಮಂದಿರು ದೊಡ್ಡವರಾಗುತ್ತಿದ್ದು ಅವರಿಗೂ ಹೊರಗಿನ ಹೆಣ್ಣುಮಕ್ಕಳನ್ನು ಕಂಡಾಗ ತಮ್ಮ ಮನೆಯಲ್ಲಿರುವ ಅಕ್ಕನ ಬಗ್ಗೆ ತಾತ್ಸಾರವೆನಿಸುತ್ತಿತ್ತು. ಅಷ್ಟೇ ಅಲ್ಲದೆ ಅವರಿಗೆ ಅದು ಬಿಸಿ ತುಪ್ಪದಂತೆ ಉಗಿಯಲು ಆಗದೆ ನುಂಗಲೂ ಆಗದೆ ಹೆಣಗಾಡುತ್ತಿದ್ದರು. ಅಂತಹ ಒಂದು ಸ್ಥಿತಿಯಲ್ಲಿ ವರ್ಷಾ ಇದ್ದಳು. ಹೀಗಿರುವಾಗ ಒಂದು ದಿನ ಇದ್ದಕ್ಕಿದ್ದಂತೆ ಫೋಟೋ ತೆಗೆಸುವ ಪ್ರಸಂಗ ಎದುರಾದಾಗ ಈಕೆ ಸುತಾರಾಂ ಒಪ್ಪದೆ ಬುಸುಗುಡುತ್ತಾ ಮನೆಯಿಂದ ಹೊರಗೆ ಹೊರಡುತ್ತಾಳೆ. ಏಕೆಂದರೆ ನಿಜ ರೂಪವೇ ಈ ರೀತಿ ಇರುವಾಗ ಇನ್ನು ಫೋಟೋದಲ್ಲಿ ಬೇರೆ ಬರಲು ಏನು ಇರುತ್ತದೆ. ಇದು ತನ್ನ ಮದುವೆಯ ಕಾರಣಕ್ಕೆ ತೆಗೆಸುತ್ತಿರುವ ಫೋಟೋ ಇರಬಹುದು ಎಂದು ಆಕೆ ತಿಳಿದುಕೊಳ್ಳುತ್ತಾಳೆ. ಹಾಗೆಯೇ ಅಲ್ಲಿಂದ ಹೊರಗೆ ಹೋದಾಗ ಅಲ್ಲಿ ಸಿನಿಮಾದ ಚಿತ್ರೀಕರಣವೊಂದು ನಡೆಯುತ್ತಿದ್ದು, ಆಕೆಯ ಮನಸ್ಸನ್ನು ಬದಲಾಯಿಸುತ್ತದೆ. ಅಂದರೆ ಕ್ಯಾಮರಾ ಕಣ್ಣಿಗೆ ಕತ್ತೆಯೂ ಸುಂದರವಾಗಿ ಕಾಣುತ್ತದೆ ಎಂಬುದನ್ನು ಅರಿತಂತೆ ಮನೆಗೆ ಹಿಂದಿರುಗಿದ ತಕ್ಷಣ ತಾನು ಫೋಟೋ ತೆಗೆಸಿಕೊಳ್ಳಲು ಸಿದ್ದ ಎಂದು ಹೇಳಿ ತನ್ನ ತಮ್ಮನಿಗೆ "ನನಗೆ ಮದುವೆ ಮಾಡಿಸ್ತೀಯೇನೋ ಪೋರಾ, ಕೇಳು ಬೇಕಾದ ಪೋಸಿನಲ್ಲಿ ಕೇಳು, ಫೋಟೋ ತೆಗೆಸಿಕೊಳ್ಳಲು ನಾನು ತಯಾರ್. ನೀ ಹೇಳಿದ ಸ್ಟುಡಿಯೋದಲ್ಲಿ ನೀ ಹೇಳಿದ ಭಂಗಿಯಲ್ಲಿ".[39] ಎಂದು ಬಹಳ ಉತ್ಸುಕತೆಯಿಮದ ಹೇಳುತ್ತಾಳೆ. ಇದು ಪ್ರತಿಯೊಂದು ಹೆಣ್ಣು ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವುದಕ್ಕಿಂತ ಇತರರ ಇಚ್ಛೆಯೇ ಇಲ್ಲಿ ಮುಖ್ಯವಾಗುತ್ತದೆ ಎಂಬುದನ್ನು ತೋರಿಸುತ್ತದೆ. ಆಗ ಊಟಕ್ಕೆ ಕುಳಿತ ವರ್ಷಾಳಿಗೆ ಅವಳ ತಾಯಿ ಮದುವೆ ಗಿದುವೆಗಾಗಿ ಅಲ್ಲ. "ಪಾಪ ನಿನ್ನ ತಮ್ಮನಿಗೆ ಅದೇನೋ ಎಸ್.ಟಿ.ಡಿ. ಬೂತ್ ಅವನ ತಲೆ ಹೊಕ್ಕಿದೆ. ಅಂಗವಿಕಲರಿಗೆ ಅದೇನೋ ತುಂಬಾ ರಿಯಾಯಿತಿ ದರದಲ್ಲಿ ಬಲುಬೇಗ ಬೂತು ಕೊಡುತ್ತಾರಂತೆ.ನಿನ್ನ ಹೆಸರಿನಲ್ಲಿರುವ ಬೂತನ್ನು ತಾನೇ ನಡೆಸುತ್ತೇನೆ ಅಂತಾನೆ. ನೀನೇನೂ ಮಾಡಬೇಕಿಲ್ಲ. ಒಂದು ಹೊಸ ಫೋಟೋ ಕೊಟ್ಟರೆ ಸಾಕಂತೆ".[40] ತುತ್ತಿನ ಜೊತೆ ಜಡೆ ಕೇಳುತ್ತಿರುವ ಶಬ್ದಗಳನ್ನು ವರ್ಷಾ ಅಗೆಯದೆ ಸುಮ್ಮನೆ ನುಂಗಿದಳು. ಆಗ ವರ್ಷಾಳ ಜಂಘಾಬಲವೇ ಉಡುಗಿದಂತೆ ಆದರೂ ಆಕೆ ಏನೂ ಮಾಡಲಾರದೆ, ಸುಮ್ಮನೆ ಸಂಜೆ ಫೋಟೋ ಸ್ಟುಡಿಯೋಗೆ ಸಿದ್ಧಳಾಗುತ್ತಾಳೆ ಅಂದರೆ ಹೆಣ್ಣು ಎಲ್ಲಾ ಕಡೆಯೂ ತನಗೆ ಬೇಕಾದ್ದನ್ನು ಪಡೆಯಲು ಹವಣಿಸದೆ ಇತರರಿಗೆ ತನ್ನಿಂದ ಯಾವ ರೀತಿಯ ಸಹಾಯವನ್ನು ಮಾಡಬಹುದು ಎಂಬುದನ್ನು ಆಲೋಚಿಸುತ್ತಾಳೆ ಎಂಬುದನ್ನು ಗಮನಿಸಬಹುದು. ಹಾಕಲು ನಿಷಿದ್ಧವಾದ ತೋಳಿಲ್ಲದ ತುಂಡು ಬಟ್ಟೆಯನ್ನು ಹಾಕಿ ಹೋಗುತ್ತಾಳೆ. ಅಲ್ಲಿ ಛದ್ಮವೇಷದಲ್ಲಿದ್ದ

ಮಕ್ಕಳನ್ನುಕಂಡಾಗ ಮನಸ್ಸಿಗೆ ಸ್ವಲ್ಪ ಸಮಾಧಾನವೆನಿಸಿದರೂ ಇದು ಪ್ರಪಂಚದ ನಿಯಮವಲ್ಲವೇ. ಎಲ್ಲರೂ ಒಂದಲ್ಲ ಒಂದು ವೇಷವನ್ನು ಧರಿಸಿಯೇ ಬದುಕುತ್ತಿದ್ದಾರೆ ಎಂದು ಸಮಾಧಾನಗೊಳ್ಳುತ್ತಾಳೆ. ಅಲ್ಲದೆ ಇವರು ಬಂದ ಉದ್ದೇಶವನ್ನು ಅರಿತವನಂತೆ ಆತ ಆಕೆಯ ಊನತೆಯನ್ನು ಗೊತ್ತು ಮಾಡುವಂತೆ ಆಕೆಯನ್ನು ನಿಲ್ಲಿಸುತ್ತಾನೆ. "ಫೋಟೋ ನೋಡಿದ್ದೇ ಅವರು ಸರ್ಟಿಫಿಕೆಟ್ ಕೊಟ್ಟು ಬಿಡಬೇಕು. ಇಂಟರ್ ವ್ಯೂ ಪ್ರಮೇಯವೇ ಇಲ್ಲ ಹಾಗಿರಬೇಕು. ಫೋಸು ಹಾಂ ಹೀಗೆ" ಎಂದು ಆಕೆಯ ಊನತೆಯನ್ನು ಚೆನ್ನಾಗಿ ಗೊತ್ತಾಗುವಂತೆ ಆ ಫೋಟೋಗ್ರಾಫರ್ ಫೋಟೋವನ್ನು ಕ್ಲಿಕ್ಕಿಸಿದಾಗ ನನ್ನ ಈ ವಿಕಲತೆಯೇ ಬಂಡವಾಳವಾಯಿತು. ಎಂಬಂತೆ ವರ್ಷಾಗೆ ಅನಿಸುತ್ತದೆ. ಹೀಗೆ ಹೆಣ್ಣಿಗೆ ತನಗೆ ಎಷ್ಟೇ ನೋವು, ಅವಮಾನ, ಆಘಾತಗಳಾದರೂ ಅದನ್ನು ತಾನೂ ಸಹಿಸಿಕೊಂಡು ಇತರರಿಗೆ ತಮ್ಮಿಂದ ಸಂತೋಷವನ್ನು ಉಂಟುಮಾಡುವುದರಲ್ಲಿಎಯೇ ತಮ್ಮ ನೆಮ್ಮದಿಯನ್ನು ಕಾಣುತ್ತಾರೆ. ಎಂಬುದೇ ಕಾಯ್ಕಿಣಿಯವರು ಗುರುತಿಸುವ ವಿಶಿಷ್ಟತೆಯಾಗಿದೆ.

ಒಟ್ಟಾರೆಯಾಗಿ ಹೆಣ್ಣನ್ನು ಅಬಲೆ ಎಂದು ಕರೆಯುತ್ತಿದ್ದರೂ, ಆದರೆ ಈಗ ಆಕೆ ಎಲ್ಲಿಯೂ ಯಾರನ್ನೂ ಆಶ್ರಯಿಸದೇ, ತಾನೇ ಆಶ್ರಯದಾತೆಯಾಗಿ ನಿಲ್ಲುವ ಮಟ್ಟಕ್ಕೆ ಬೆಳೆದಿದ್ದಾಳೆ. ಅಲ್ಲದೆ ಆಕೆ ಒಂದು ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಸ್ವತಂತ್ರಳಾಗಿ ಆ ನಿರ್ಧಾರಕ್ಕೆ ಬದ್ಧಳಾಗಿ ನಡೆದುಕೊಳ್ಳುವ ಧೈರ್ಯವನ್ನು ಮಾಡುತ್ತಾಳೆ. ಹಾಗೆಯೆ ಕುಟುಂಬಕ್ಕೆ ಬದ್ಧಳಾಗಿ, ವೃತ್ತಿರಂಗದಲ್ಲಿ ಜಾಗೃತ ವೃತ್ತಿಪರಳಾಗಿ, ಮಕ್ಕಳಿಗೆ ತಾಯಿಯಾಗಿ ವಿವಿಧ ಸ್ತರಗಳಲ್ಲಿ ತನ್ನನ್ನು ತಾನು ಎಲ್ಲಿಯೂ ಎಚ್ಚರ ತಪ್ಪದಂತೆ ಸಮಾಜದಲ್ಲಿ ಗೌರವದಿಂದ ಬಾಹಿರಳಾಗದೆ ಆಕೆ ತನ್ನೆಲ್ಲ ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು ಹೋಗುತ್ತಾಳೆ. ಮಾತ್ರವಲ್ಲದೆ ಅವಳು ತನ್ನ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ತನ್ನ ಕುಟುಂಬದ ಮೇಲೆ ತನಗಿರುವ ಜವಾಬ್ದಾರಿಗಳನ್ನು ನಿರ್ವಹಿಸಲು ಪಣತೊಟ್ಟವಳಂತೆ ದೃಢನಿರ್ಧಾರ ಮಾಡಿರುತ್ತಾಳೆ. ಅಷ್ಟೆ ಅಲ್ಲದೆ ಸೋದರ ಪ್ರೀತಿ ವಾತ್ಸಲ್ಯಗಳನ್ನು ಮರೆಯದೆ ತನ್ನದೇ ಆದ ಬಾಂಧವ್ಯಗಳನ್ನು ಉಳಿಸಿಕೊಳ್ಳಲು ಅವಳು ಹವಣಿಸುತ್ತಾಳೆ. ಆ ಹೆಣ್ಣು ತನ್ನನ್ನು ತಾನು ಕಾಪಾಡಿಕೊಳ್ಳುವುದರ ಜೊತೆಗೆ ಅವರ ಕುಟುಂಬದ ಪ್ರತಿಷ್ಠೆಯನ್ನು ಉಳಿಸಲು ತಾವು ಅವಮಾನಗಳನ್ನು ಸಹಿಸಲು ಸಿದ್ಧಳಿರುತ್ತಾಳೆ. ಇಂತಹ ಈ ಎಲ್ಲಾ ವಿಶಿಷ್ಟ ನೆಲೆಗಳ ಪರಿಚಯವನ್ನು ನಾನಿಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಕೊನೆಟಿಪ್ಪಣಿಗಳು.

16. ಸ್ತ್ರೀವಾದಿ ಮನೋವಿಜ್ಞಾನ, ಸಂಪಾದ ಡಾ॥ ಇಂದಿರಾ ಜೈಪ್ರಕಾರ್ ಡಾ॥ಶಿವಾನಂದ ಎಸ್. ವಿರಕ್ತಮಠ ನಿರ್ದೇಶಕರು ಮಹಿಳಾ ಅಧ್ಯಯನ ಕೇಂದ್ರ, ಮುದ್ರಣ ಲಕ್ಷ್ಮಿ ಮುದ್ರಣಾಲಯ, 2009, ಪುಟ ಸಂಖ್ಯೆ: 84.
17. ಸ್ತ್ರೀವಾದಿ ಮನೋವಿಜ್ಞಾನ, ಸಂಪಾದ ಡಾ॥ ಇಂದಿರಾ ಜೈಪ್ರಕಾರ್ ಡಾ॥ಶಿವಾನಂದ ಎಸ್. ವಿರಕ್ತಮಠ ನಿರ್ದೇಶಕರು ಮಹಿಳಾ ಅಧ್ಯಯನ ಕೇಂದ್ರ, ಮುದ್ರಣ ಲಕ್ಷ್ಮಿ ಮುದ್ರಣಾಲಯ, 2009, ಪುಟ ಸಂಖ್ಯೆ: 84.
18. ಸ್ತ್ರೀವಾದಿ ಮನೋವಿಜ್ಞಾನ, ಸಂಪಾದ ಡಾ॥ ಇಂದಿರಾ ಜೈಪ್ರಕಾರ್ ಡಾ॥ಶಿವಾನಂದ ಎಸ್. ವಿರಕ್ತಮಠ ನಿರ್ದೇಶಕರು ಮಹಿಳಾ ಅಧ್ಯಯನ ಕೇಂದ್ರ, ಮುದ್ರಣ ಲಕ್ಷ್ಮಿ ಮುದ್ರಣಾಲಯ, 2009, ಪುಟ ಸಂಖ್ಯೆ: 84.
19. ಮಧುಬಾಲ, ಪುಟ ಸಂಖ್ಯೆ: 14
20. ಮಧುಬಾಲ, ಪುಟ ಸಂಖ್ಯೆ: 23
21. ಮಧುಬಾಲ, ಪುಟ ಸಂಖ್ಯೆ: 24
22. ಮಧುಬಾಲ, ಪುಟ ಸಂಖ್ಯೆ: 26
23. ಸ್ತ್ರೀ ಸಂವೇದನೆ, ಪುಟ ಸಂಖ್ಯೆ: 88
24. ತುಫಾನ್ ಮೇಲ್, ಪುಟ ಸಂಖ್ಯೆ: 66
25. ತುಫಾನ್ ಮೇಲ್, ಪುಟ ಸಂಖ್ಯೆ: 66
26. ತುಫಾನ್ ಮೇಲ್, ಪುಟ ಸಂಖ್ಯೆ: 69
27. ಕಣ್ಮರೆಯ ಕಾಡು, ಪ್ರಕಾಶಕರು ಅಂಕಿತ ಪುಸ್ತಕ, ಮುದ್ರಣ ಮಾರ್ಚ್ 4, 2012, ಪು.23
28. ಕಣ್ಮರೆಯ ಕಾಡು, ಪ್ರಕಾಶಕರು ಅಂಕಿತ ಪುಸ್ತಕ, ಮುದ್ರಣ ಮಾರ್ಚ್ 4, 2012, ಪು.23
29. ಹೆಣ್ಣು ಮತ್ತು ಭಾಷೆ ಮೌನವಾಗುವಿಕೆ ಮತ್ತು ಮೂಕವಾಗುವಿಕೆ. ಸಂಪಾದಕರು, ಪ್ರಕಾಶನ ಡಾ॥ ಹೆಚ್. ಎಸ್. ಶ್ರೀಮತಿ ನಿರ್ದೇಶಕರು ಮ./ಅ.ಕೇಂ. ಕ.ವಿ.ಹಂಪಿ, ಪುಟ 33.
30. ಕಣ್ಮರೆಯಾದ ಕಾಟ. ಪುಟ ಸಂಖ್ಯೆ 29
31. ಕಣ್ಮರೆಯಾದ ಕಾಟ. ಪುಟ ಸಂಖ್ಯೆ 31
32. ಭಾಮಿನಿ ಸಪ್ತಪದಿ, ಪುಟ ಸಂಖ್ಯೆ: 41

33. ಭಾಮಿನಿ ಸಪ್ತಪದಿ, ಪುಟ ಸಂಖ್ಯೆ: 42

34. ಭಾಮಿನಿ ಸಪ್ತಪದಿ, ಪುಟ ಸಂಖ್ಯೆ: 47

35. ಭಾಮಿನಿ ಸಪ್ತಪದಿ, ಪುಟ ಸಂಖ್ಯೆ: 49

36. ಅಪರೂಪ, ಪುಟ ಸಂಖ್ಯೆ 41

37. ಅಪರೂಪ, ಪುಟ ಸಂಖ್ಯೆ 43

38. ಅಪರೂಪ, ಪುಟ ಸಂಖ್ಯೆ 43

39. ಅಪರೂಪ, ಪುಟ ಸಂಖ್ಯೆ 44

40. ಅಪರೂಪ, ಪುಟ ಸಂಖ್ಯೆ 45

ಕುಶಲತೆಯಿಂದ ಬದುಕನ್ನು ಕಟ್ಟಿಕೊಂಡ ವ್ಯಕ್ತಿಗಳ ವಿಶಿಷ್ಟತೆ

ಜಯಂತ ಕಾಯ್ಕಿಣಿಯವರು ಕತೆಗಳಲ್ಲಿ ವ್ಯಕ್ತಿಗಳಲ್ಲಿ ವಿಶಿಷ್ಟತೆಯನ್ನು ಮೂಲವಾಗಿ ಇರಿಸಿಕೊಂಡು ಕತೆಯನ್ನು ಹೆಣೆಯುತ್ತಾರೆ. ಏಕೆಂದರೆ ಸಾಮಾನ್ಯರಲ್ಲಿ ಅತೀ ಸಾಮಾನ್ಯರೆನಿಸುವ ವ್ಯಕ್ತಿಗಳು ಹೇಗೆ ಕುಶಲತೆಯಿಂದ ತಮ್ಮ ಬದುಕನ್ನು ನಿರ್ಮಿಸಿಕೊಂಡು ಜೀವನ ನಡೆಸುತ್ತಿದ್ದಾರೆ ಎಂಬುದನ್ನು ಚಿತ್ರಿಸಿ ಮಾಡುತ್ತಾರೆ. ಅಲ್ಲದೆ, ಆ ರೀತಿ ಜೀವನದಲ್ಲೂ ಕೂಡ ತಮ್ಮ ಕೈಲಾದ ಸಹಾಯವನ್ನು ಇತರರಿಗೆ ಮಾಡುತ್ತ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತಿದ್ದಾರೆ, ಎಂಬುದನ್ನು ಕಾಯ್ಕಿಣಿಯವರ 'ಅಮೃತಬಳ್ಳಿಯ ಕಷಾಯ' ಕಥಾ ಸಂಕಲನದಲ್ಲಿರುವ ಪ್ರಮುಖ ಕತೆಗಳಲ್ಲಿ ಒಂದಾದದ್ದು 'ಸಂತೆಯ ದಿನ' ಕತೆಯಲ್ಲಿ ಕಾಣಬಹುದು. 'ಬಣ್ಣದಕಾಲು' ಕಥಾ ಸಂಕಲನದಲ್ಲಿರುವ 'ಬಣ್ಣದ ಕಾಲು' ಕತೆಯಲ್ಲಿ ಬರುವ ಹೂ ಮಾರುವ ವ್ಯಕ್ತಿಗಳು, ಪ್ಲಾಸ್ಟಿಕ್ಕಿನ ತುಂಡುಗಳಿಗೆ ಏನೋ ಸಿಕ್ಕಿಸುವ ಹೆಣ್ಣುಮಕ್ಕಳು, ಟೀ ಮಾರುವ ಪೋಪಟ್, ಕಡ್ಲೆಕಾಯಿ ಮಾರುವ ಹುಡುಗರು ಇವರೆನ್ನೆಲ್ಲ ಕಾಣಬಹುದು. ಇಷ್ಟೇ ಅಲ್ಲದೆ "ಅಂಗವಿಕಲರು, ಭಂಗಾರು ದುಶಾನಿನಲ್ಲಿದ್ದು ಕನಸು ಕಾಣುವ ಮುಟ್ರೀ ಮಿಯಾನಂಥರು, ರಾತ್ರಿ ಮುಂಬೈ ರಸ್ತೆ ಬದಿಯಲ್ಲಿ ದಣಿದವರಿಗೆ ಹೊಟ್ಟೆ ತುಂಬಾ ಊಟ ನೀಡುವ ತಳ್ಳುಗಾಡಿಯವರು, ಚಹಾವಾಲಾಗಳು, ಥಿಯೇಟರ್‌ನಲ್ಲಿ ಕತ್ತಲಲ್ಲಿ ಬ್ಯಾಟರಿಯಿಂದ ಪ್ರಕಾಶ ಬೀರಿ ಸೀಟು ತೋರಿಸುವವರು, ಕೆಂಪು ದೀಪದ ಬೀದಿಯಲ್ಲಿರುವ ಪಂಜರದಂತಹ ಸಲಾಕೆ ಗೂಡುಗಳಲ್ಲಿ ಮೈಮಾರಿ ಬದುಕುವ ಹೆಣ್ಣುಜೀವಗಳು, ರಸ್ತೆ ಬದಿಯ ಜೋಪಡಿಯಲ್ಲಿ ವಾಸಿಸುವ ಜನರು, ನಾಜೂಕಾಗಿ ಅನಾನಸು ಕೆತ್ತಿ ಬೇಡವಾದ ಭಾಗಗಳನ್ನು ಬಡಮಕ್ಕಳಿಗಾಗಿ ಕಾದಿರಿಸುವ ಮುದುಕ, ರಸ್ತೆಯಲ್ಲಿ ಚಿತ್ರಿಸಿದ ಸೀಮೆ ಸುಣ್ಣದ ಸಾಯಿಬಾಬಾನನ್ನು ಉಳಿಸಲು ಮಳೆ ನೀರಿಗೆ ನೆನೆಯುತ್ತ ಹೆಣಗಾಡುವ ಪುಟ್ಟಬಾಲಕಿ, ಬಿಯರ್ ಬಾರ್‌ನಲ್ಲಿ ಕುಣಿಯುವ ಬಾಲೆಯರು, ರಿಕ್ಷಾ-ಟ್ಯಾಕ್ಸಿ–ಟ್ರಕ್ ಡ್ರೈವರುಗಳು ಹೀಗೆ ಪ್ರತಿಯೊಬ್ಬರೂ ಜಯಂತರ ಕತೆಗಳಲ್ಲಿ ಜೀವಂತಿಕೆಯಿಂದ ಮಿಂಚುತ್ತಾರೆ...".[41]

ಇವರೆಲ್ಲರನ್ನೂ ಕಥೆಯು ಕಣ್ಣಿನ ಮಸೂರದಲ್ಲಷ್ಟೇ ನೋಡಬಹುದಾದ ಎಷ್ಟೊಂದು ಮವಿಶೇಷತೆಗಳಿರುವಾಗ ನಾವು 'wide angle, long shot' ಗೇ ಯಾಕೆ ಅಂಟಿಕೊಳ್ಳಬೇಕು ? ತುಸು ಸನಿಹ ಚಲಿಸಿ ಕ್ಲೋಸ್‌ಅಪ್‌ನಲ್ಲಿ ನೋಡಿದರೆ, ಒಂದು ಮುಖದಲ್ಲೂ ಇಡೀ ಗ್ರೂಪಿನ ಮಿಡಿತವನ್ನು ಕಾಣಬಹುದಲ್ಲವೇ" ಎನ್ನುವುದನ್ನು ಬಲವಾಗಿ ನಂಬಿದ ಜಯತ್ ಕಾಯ್ಕಿಣಿಯವರಿಗೆ ಪ್ರತಿಯೊಂದು ಜೀವಿಯೂ ಮುಖ್ಯ, ಅವರ ಜೀವನ ಶೈಲಿಯು ಮುಖ್ಯ, ಆದುದರಿಂದಲೇ ಮುಂಬೈನ ಪುಟ್‌ಪಾತ್‌ಗಳಲ್ಲಿ, ಗಲ್ಲಿ ಕೊಂಪೆಗಳಲ್ಲಿ ಉಸಿರುಡುತ್ತಾ ಬದುಕಿರುವೆವು ಎಂಬ ಭ್ರಮೆಯಲ್ಲಿರುವ ಈ ಸಾಮಾನ್ಯಜನರ ದೈನಂದಿನ

ಬದುಕಿನೊಂದಿಗಿನ ಸೆಣಸಾಟದ ದಟ್ಟವಾದ ವಿವರಗಳಲ್ಲೆ ಜಯಂತ್ ಕಾಯ್ಕಿಣಿಯವರ ಕಥೆಗಳು ಜೀವ ತಾಳುತ್ತವೆ".[42]

ಇಂದಿನ ಜಗತ್ತಿನಲ್ಲಿ ಹಲವಾರು ಪದವಿಗಳನ್ನು ಪಡೆದು ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳ ಜೊತೆಯಲ್ಲೇ ಉದ್ಯೋಗಕ್ಕಾಗಿ ಅಲೆಯುವ ಯುವ ಜನತೆಯನ್ನು ಕಾಣುತ್ತೇವೆ. ಮಾತ್ರವಲ್ಲದೆ ಸಿಕ್ಕಿದ ಯಾವುದೋ ಒಂದು ಕೆಲಸವನ್ನು ಅವರು ಒಪ್ಪಿಕೊಳ್ಳುವ ಮನಸ್ಥಿತಿಯಿಂದ ದೂರ ಸರಿದಿರುತ್ತಾರೆ. ಹೀಗಾಗಿ ಎಷ್ಟೋ ಮಂದಿ ನಿರುದ್ಯೋಗಿಗಳಾಗಿ, ತಂದೆ-ತಾಯಿಗಳಿಗೆ ಹೊರೆಯಾಗಿ ಜೀವನ ನಡೆಸುವಾಗ ಇನ್ನು ಅಂತಹವರಿಂದ ಇತರರಿಗೆ ಸಹಾಯ ಮಾಡುವ ಮಾತಂತೂ ಮೈಲಿ ದೂರದಾಚೆಗೆ ನಿಂತತೆಯೇ ಸರಿ. ಏಕೆಂದರೆ ಜೀವನ ನಿರ್ವಹಣೆ ಎನ್ನುವುದು ಕೇವಲ ಮೂರು ಮಾತುಗಳಲ್ಲಿ ಹೇಳಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲೂ ಅಗತ್ಯಕ್ಕೆ ತಕ್ಕಂತೆ ಯಾವುದಾದರೊಂದು ಕೆಲಸವನ್ನು ಮಾಡುತ್ತ, ಅದರಿಂದ ತನ್ನ ಹಾಗೂ ಕುಟುಂಬದ ನಿರ್ವಹಣೆಯ ಜೊತೆಗೆ ಅವರಲ್ಲೂ ತಮ್ಮ ಕೈಲಾದಷ್ಟು ಮಟ್ಟಿಗೆ ಇತರರಿಗೆ ಸಹಾಯ ಮಾಡುವವರೇ ಈ ಕತೆಯು ಮೂಲ ವಸ್ತುಗಳಿರುವುದನ್ನು ನಾವಿಲ್ಲಿ ಕಾಣಬಹುದು. ಉದಾ:- 'ಸಂತೆಯದಿನ' ಕಥೆಯಲ್ಲಿ ಬರುವ ಪ್ಯಾರೇಲಾಲ ತನ್ನ ಕುಶಲತೆ ಎಂಬಂತೆ ಇಳಿವಯಸ್ಸಿನಲ್ಲಿ ಬೇರೆಯವರಿಗೆ ತಾನು ಬಾರವಾಗದೆ ತನ್ನ ಕೈಲಾದ ಮಟ್ಟಿಗೆ ಜೀವನವನ್ನು ನಡೆಸುವ ಸಲುವಾಗಿ ಒಂದು ಹಣ್ಣಿನಂಗಡಿ ಇಟ್ಟುಕೊಂಡು ಜೀವನ ನಿರ್ವಹಿಸುತ್ತಿರುತ್ತಾನೆ. ಎಲ್ಲರಿಗೂ ರಜವಾದ ರವಿವಾರವೂ ಈತನಿಗೆ ಮಾತ್ರ ರಜೆಯಿಲ್ಲ. ಅಷ್ಟೇ ಅಲ್ಲದೆ ಈತನಿಗೆ ಕಾಯಿಲೆಗಳು ಬಂದಾಗ ಮಾತ್ರ ಆ ಅಂಗಡಿಗೆ ರಜೆ. ಇಂತಹ ನಿಷ್ಠಾವಂತ ವ್ಯಕ್ತಿ ಇವನಾಗಿದ್ದನಲ್ಲದೆ, ಈತ ತನಗೇ ಯಾರು ದಿಕ್ಕಿಲ್ಲದವರು ಇಲ್ಲದಿರುವಾಗ ಇತರರಿಗೆ ಸಹಾಯ ಮಾಡುವ ಗುಣವನ್ನು ಹೊಂದಿದ್ದ. "ಪ್ಯಾರಲಾಲ್ ಉತ್ತರ ಪ್ರದೇಶದವನು. ತೀರ ಸಣ್ಣ ವಯಸ್ಸಿನಿಂದಲೇ ಉಸಿರಿನ ಜಾಡು ಹಿಡಿದು ಹೋರಟವನು. ಕಾಲಸಮುದ್ರದ ಅಗಲತೆರೆಗಳು ಎಷ್ಟೋ ಜನರಂತೆ ಅವನನ್ನು ಎತ್ತಿ ಎತ್ತಿ ಈ ನಗರಿಯ ದಂಡೆಗೆ ತಂದು ಹಾಕಿದ್ದವು. ಯಾವುದೋ ಮುರುಕು ಕಟ್ಟಡದ ಹಲಗೆಯ ಮೆಟ್ಟಿಲ ಏಣಿಯ ಕೆಳಭಾಗದ ತ್ರಿಕೋನದಲ್ಲಿ ವಾಸ. ಕ್ರಾಫರ್ಡ್ ಮಾರ್ಕೆಟ್ಟಿನಿಂದ ಹಣ್ಣುಗಳನ್ನು ತಂದು ಈ ಪೇಟೆಯ ಬದಿಯಲ್ಲಿ ಮಾರುವ ಕೆಲಸ. ನಾಲ್ವತ್ತೈದು ಐವತ್ತರ ನಡುವಿನ ವಯಸ್ಸು. ಅವನಿಗಂತೂ ಅದರ ಕಲ್ಪನೆಯಿಲ್ಲ. ಗೊಡವೆಯೂ ಇಲ್ಲ. ವ್ಯಾಪಾರ ಮುಗಿಸಿದ ನಂತರ ರಾತ್ರಿ ಮಾತ್ರ ನಿಗದಿತ ಸಣ್ಣ ಹೊಟೇಲಲ್ಲಿ ಊಟ. ದಿನವಿಡೀ ಅವನ ಕಾಯಕ್ಕೆ ಮತ್ತು ಕಾಯಕಕ್ಕೆ ಇಂಧನ ಕೊಡುವ ಏಕಮೇವ ವಸ್ತು ಅಂದರೆ ಕಮ್ಮಿ ಸಕ್ಕರೆಯ ಕಡಕ್ ಚಹಾ. ದಿನಕ್ಕೆ ಹತ್ತೆಂಟು ಸಲವಾದರೂ ಅದು ಬೇಕೇ ಬೇಕು".[43] ಇಂತಹ ವ್ಯಕ್ತಿ ಬುದ್ಧಿ ಚಾಕ ಚಕ್ಯತೆಯಲ್ಲಿ, ವ್ಯವಹಾರ ಜ್ಞಾನದಲ್ಲಿ ನಿಷ್ಣಾತನಾಗಿರುತ್ತಾನೆ. ಆದ್ದರಿಂದಲೇ ಕೇಕೊಗೆ ಜೆರಾಕ್ಸ್ ಮೇಶಿನ್‌ಗಳ

ಜೊತೆಗೆ ಕ್ಯಾಸೆಟ್ ಬ್ಯುಸಿನೆಸ್ ಪ್ರಾರಂಭಿಸು ಇದರಿಂದ ಅದು ಚೆನ್ನಾಗಿ ನಡೆಯುತ್ತದೆ ಎಂಬುದಾಗಿ ಉಪಾಯವನ್ನು ಹೇಳಿದಾಗ ಅದು ಫಲಪ್ರದವಾಗುತ್ತದೆ. ಅಂದರೆ ಒಂದು ರೂಪಾಯಿ ಜೆರಾಕ್ಸ್‌ಗೆ ಬಂದವರು ಮೂವತ್ತು ರೂಪಾಯಿ ಕೊಟ್ಟು ಕ್ಯಾಸೆಟ್ ಕೊಳ್ಳುವಂತಹ ಉಪಾಯವನ್ನು ಕೇಕೂಗೆ ಪ್ಯಾರಾಲಾಲ್ ನೀಡಿದನು. ಒಂದು ಸಲ ಮುಂಬೈ ಮುಷ್ಕರವಾಗಿರುತ್ತದೆ. ಆಗ ಅಂಗಡಿಗಳನ್ನು ತೆರೆಯುವುದು ನಿಷೇಧವಾದ ಕಾರಣ ಇಬ್ಬರೂ ಹೊರಗೆ ಸುತ್ತಾಡಲು ಹೋಗುತ್ತಾರೆ. ಆಗ ಅಲ್ಲಿ ಅಪರಾಧಿಗಳನ್ನು ಕೂಡಿ ಹಾಕುವ ಜಾಗವನ್ನು ಇಬ್ಬರೂ ನೋಡುತ್ತಾರೆ. ಹಾಗೆ ಮುಂದುವರೆದು ಬರುವಾಗ ಒಂದು ಚಹಾ ಹುಡುಗ ಅಲ್ಯೂಮಿನಿಯಂ ಕೆಟ್ಲಿಗೆ ನಾಣ್ಯ ಕುಟ್ಟುತ್ತ ಓಡಾಡುತ್ತಿದ್ದ. ಇಬ್ಬರೂ ಚಹಾ ಕುಡಿಯುತ್ತಾರೆ. ನಂತರ ಚಾ ಹುಡುಗನನ್ನು ಕುರಿತು ಪ್ಯಾರೇಲಾಲ್ "ಏನಪ್ಪಾ ಎಲ್ಲಿ ಇರುತ್ತೀ ಕಾಯಿಲೆ ಬಿದ್ದು ಊಟಕ್ಕೆ ತೊಂದರೆ ಆದರೆ ನನ್ನ ಬಳಿ ಬಾ. ಸ್ಟೇಷನ್ ಹತ್ರ ಹಣ್ಣು ಮಾರುತ್ತೇನೆ ಎಂದ".[44] (ಪುಟ ಸಂಖ್ಯೆ-386 ಜಯಂತ್ ಕಾಯ್ಕಿಣಿ ಕತೆಗಳು 2015) ಈ ಮಾತುಗಳು ಕೇವಲ ಬಾಯಿ ಮಾತಿಗೆ ಹೇಳಿದೆ ಆತನು ತನ್ನಂತಹ ಅನಾಥರಿಗೆ ಯಾರು ದಿಕ್ಕಿಲ್ಲ ತನ್ನಂತಹವರಿಗೆ ತನ್ನಂತಹವರೇ ಸಹಾಯ ಮಾಡಬೇಕೆಂಬ ಹಂಬಲವನ್ನು ಹೊಂದಿಯೇ ಆ ಹುಡುಗನನ್ನುಬಾ ರೀತಿ ಕೇಳುತ್ತಾನೆ. ಆಗ ಆತನ ನಿಜವಾದ ಅಂತಃಕರಣ ಗೊತ್ತಾಗುತ್ತದೆ. ಅಷ್ಟೇ ಮಾತ್ರವಲ್ಲದೇ, ಸುತ್ತಾಡಿ ಸುಸ್ತಾಗಿ ಬಂದು ಅಂಗಡಿಯ ಚಾವಡಿಯ ಮೇಲೆ ಮಲಗಿದ್ದ. ಆಗ ಇಡೀ ರಸ್ತೆಗೆ ರಸ್ತೆಯೇ ಭಣಗುಡುತ್ತಿತ್ತು. ಅಷ್ಟರಲ್ಲಿ ವಯಸ್ಸಾದ ಹೆಂಗಸೊಬ್ಬಳು "ಉಳಿಸಿರೋ ನನ್ನ ಮಗಳನ್ನು ಉಳಿಸಿರೋ".[45] (ಪುಟ ಸಂಖ್ಯೆ 387) ಎಂದು ಕೂಗುತ್ತ ಓಡಿ ಬಂದಳು. ಆಗ ಆಕೆಯ ಹದಿಹರೆಯದ ಮಗಳಿಗೆ ಎಂಟು ತಿಂಗಳ ಬಸುರಿಗೆ ಇದ್ದಕ್ಕಿದ್ದ ಹಾಗೆ ನೋವು ಪ್ರಾರಂಭವಾಗಿದ್ದು, ರಸ್ತೆಯಲ್ಲಿ ಯಾವುದಾದರೊಂದು ಆಟೋ ಸಿಗಬಹುದೆಂಬ ನಂಬಿಕೆಯಿಂದ ಬಂದ ತಾಯಿ –ಮಗಳಿಗೆ ನಿರಾಸೆಯಾಗಿದೆ. ಇದರಿಂದ ಆಯಾಸವಾದಂತ್ತೆ ಆಗಿ ಮಗಳು ಅಲ್ಲೆ ಒಂದು ಕಡೆ ಕುಳಿತುಕೊಂಡಳು. ಆಗ ಮುದುಕಿ ಸಹಾಯಕ್ಕಾಗಿ ಅರಸುತ್ತಾ ಬಂದಾಗ ಪ್ಯಾರೇಲಾಲ್ ಮತ್ತು ಕೇಕೂ ಆಯಾಸಗೊಂಡು ಕುಳಿತಿರುವ ಮಗಳಲ್ಲಿಗೆ ಹೋಗುತ್ತಾರೆ. ಆಗ ನೆರೆದಿದ್ದ ಹೆಂಗಸರೊಬ್ಬರು ನೀರನ್ನು ಕುಡಿಸುತ್ತಿದ್ದರು. ಪ್ಯಾರೇಲಾಲ್‌ನ ನೋಡಿದಾಗ, "ಇನ್ನು ತಮ್ಮ ಕೆಲಸ ಇಲ್ಲ ಸಂಬಂಧಿಕರಾರೋ ಬಂದ ಹಾಗಿದೆ".[46] ಎಂದು ಬದಿಗೆ ಸರಿಯುತ್ತಾರೆ. ಅಂದರೆ ಪ್ಯಾರೇಲಾಲ್‌ನ ಮುಖದಲ್ಲಿದ್ದ ಆತಂಕ, ಆತ ತೋರಿಸುತ್ತಿದ್ದ, ಕಾಳಜಿ ಸಂಬಂಧಿಕರಿಗಿಂತಲೂ ಹೆಚ್ಚಾಗಿಯೇ ಇತ್ತು ಎಂಬುದನ್ನು ಅರಿಯಬೇಕು. ಇಷ್ಟು ಮಾತ್ರವಲ್ಲದೆ, "ಪ್ಯಾರೇಲಾಲ ಸಣ್ಣ ಮಗುವನ್ನು ಎತ್ತಿಕೊಳ್ಳುಂತೆ ನಾಜೂಕಿನಿಂದ ಎರಡು ಕೈಗಳಲ್ಲಿ ಅವಳನ್ನು ಎತ್ತಿಕೊಂಡು ಜಾಸ್ತಿ ಅಲುಗಿಸದಂತೆ ಹಗುರಾಗಿ ಮುನಿಸಿಪಲ್ ಆಸ್ಪತ್ರೆಯ ಕಡೆಗೆ ಓಡತೊಡಗಿದ. ದಾರಿಯುದ್ದಕ್ಕೂ ಹೆದರ ಬೇಡ ಪೋರಿ ಎಲ್ಲ ಸುಸುತ್ರವಾಗುತ್ತದೆ. ನಾವೆಲ್ಲ

ಇದ್ದೇವೆ ಎನ್ನುತ್ತಲೇ ಇದ್ದ".[47] ಕೇಕೂನ ಬಳಿ "ಕೇಕೂ ನನ್ನ ಬಳಿ ನೂರಿನ್ನೂರು ಮಾತ್ರ ಇದೆ. ಅಗತ್ಯ ಬಿದ್ದರೆ ನಿನ್ನ ಬಳಿ ಇದೆ ತಾನೆ?"[48] ಎಂದು ಕೇಳುತ್ತಾನೆ. ಇಲ್ಲಿ ಪ್ಯಾರೇಲಾಲ್ ಒಟ್ಟು ಜವಾಬ್ದಾರಿಯುತ ತಂದೆ ನಿರ್ವಹಿಸಬೇಕಾದ ಕೆಲಸವನ್ನು ಆತ ಮಾಡಿದ್ದ ಮಾನವ ದೃಷ್ಟಿಯಿಂದ ಮಾತ್ರ. ಮನುಷ್ಯತ್ವ ಆತನಲ್ಲಿ ಜಾಗೃತಗೊಂಡಿದ್ದರಿಂದಲೇ ತನ್ನ ಮುದಿ ವಯಸ್ಸಿನಲ್ಲೂ ಎರಡು ಜೀವಗಳ ಆ ಹರೆಯದ ಯುವತಿಯನ್ನು ಸುರಕ್ಷಿತವಾಗಿ ಆಸ್ಪತ್ರೆಗೆ ಸೇರಿಸುತ್ತಾನೆ. ಆತ ಧೈರ್ಯಕೊಡುವಂತೆ ಆಕೆಗೆ ನಾವಿದ್ದೇವೆ ನಾವಿದ್ದೇವೆ ಎನ್ನುವ ರೀತಿಯಲ್ಲಿ ಧೈರ್ಯ ತುಂಬುತ್ತಾನೆ. ಏಕೆಂದರೆ ಆ ಹೆಣ್ಣು ಮಗಳಿಗೆ ತನ್ನ ತಾಯಿಯೊಬ್ಬಳೇ ಕಷ್ಟ ಪಡುವಂತಾಯಿತಲ್ಲಾ ತನ್ನಿಂದಾಗಿ ಈ ಕಷ್ಟ ಎಂಬ ನೋವು ಬಾಧಿಸದಿರಲೆಂದು ಪ್ಯಾರೇಲಾಲ್ ಆಕೆಗೆ ಸಾಂತ್ವಾನ ಹೇಳುತ್ತಾನೆ. ಅಂದರೆ ಈ ದಿನಗಳಲ್ಲಿ ಅಪಘಾತಗಳೇ ಆಗಲಿ ಅಥವಾ ಏನಾದರೂ ಹೆಚ್ಚು ಕಡಿಮೆ ಆಗಿದೆ ಅಲ್ಲಿ ಯಾರೂ ಇಲ್ಲ ಎಂದಾಗ, ಅವರ ಮೈಮೇಲಿರುವ ಒಡವೆಗಳ ಕಡೆ, ಅವರ ಕಿಸೆಯಲ್ಲಿರುವ ಹಣದ ಕಡೆ ಗಮನ ಹೋಗುತ್ತದೆಯೇ ಹೊರತು ಅವರ ಪ್ರಾಣ ಉಳಿಸುವ ಕಡೆಗೆ ಗಮನ ಹರಿಸುವುದು ಕಡಿಮೆ. ಇಂತಹ ಒಂದು ಸಂದರ್ಭದಲ್ಲಿ ತಮ್ಮ ಕಿಸೆಯಿಂದ ಹಣ ಪೋಲಾಗುತ್ತದೆ ಎಂದು ಅರಿವಾದಾಗ ಯಾರೂ ಕೂಡ ಆ ಕಡೆಗೆ ಮುಖ ತಿರುಗಿಸುವುದೇ ಇಲ್ಲ. ಆದರೆ ಪ್ಯಾರಲಾಲ್ ತನ್ನ ಬಳಿ ಇರುವ ಹಣದ ಜೊತೆಗೆ ಕೇಕೂನನ್ನು ಕೂಡ ವಿಚಾರಿಸುತ್ತಾರೆ. ಇದು ಆತನಲ್ಲಿರುವ ಹೆಂಗರುಳಿನ ಜೊತೆಗೆ ಆತನೊಬ್ಬ ಮಾನವರೂಪದ ದೈವಿಯಂತೆ ಆ ತಾಯಿ ಮಗಳಿಗೆ ಕಾಣಿಸುತ್ತಿದ್ದ. ಅಷ್ಟೇ ಅಲ್ಲದೆ, ಆ ಹೆಣ್ಣು ಮಗಳಿಗಾಗಿ ಹಣ್ಣುಗಳನ್ನು ತರಲು ಹೋದಾಗ ಆತ ನಿಜವಾಗಿಯೂ ತನ್ನಂತೆ ಪರದೇಶಿಯಾದವನಿಗೆ ಯಾರೂ ಇಲ್ಲ ಎಂದು ಏಕೆ ಅಂದುಕೊಳ್ಳಬೇಕು. ಸಿಕ್ಕುವವರಿಗೆ ಪ್ರೀತಿ ತೋರಿಸಿದರೆ ಅವರೇ ನಮ್ಮವರಾಗುತ್ತಾರಲ್ಲವೆ ಎಂದು ತಿಳಿಯುವುದರ ಜೊತೆಗೆ, ಆತನ ಈ ಉದ್ಯೋಗದ ನಡುವೆಯೂ ತನ್ನ ಜೀವನವನ್ನು ನಡೆಸುತ್ತ ಬೇರೆಯವರಿಗೆ ಕೈಲಾದ ಸಹಾಯವನ್ನು ಮಾಡುವುದು ಆತನ ಒಂದು ವ್ಯಕ್ತಿ ವಿಶಿಷ್ಟತೆಯಾಗಿದೆ.

ಜಯಂತ್ ಕಾಯ್ಕಿಣಿಯವರ ಪ್ರಮುಖ ಕಥಾಸಂಕಲಗಳಲ್ಲಿ ಒಂದಾದದ್ದು 'ಬಣ್ಣದ ಕಾಲು' ಈ ಕಥಾ ಸಂಕಲನದ ಪ್ರಮುಖ ಕತೆ "ಬಣ್ಣದ ಕಾಲು" ಈ ಕತೆಯಲ್ಲಿ ಎಂತಹ ವ್ಯಕ್ತಿಗಳಿಗೂ ಕೂಡ ಬದುಕನ್ನು ಕಟ್ಟಿಕೊಳ್ಳಲು ನೆರವಾದದ್ದು ಈ ಮುಂಬೈ ಪಟ್ಟಣ. ಏಕೆಂದರೇ ನಗರ ಜೀವನದ ಬಗ್ಗೆ ಅನೇಕರಿಗೆ, ಹಲವು ರೀತಿಯ ಋಣಾತ್ಮಕ ಭಾವನೆಗಳು ಇವೆ. ಇಲ್ಲಿ ಅನಾನುಕೂಲವೇ ಅಧಿಕ ಎಂಬ ಭಾವನೆ ಇದೆ ಅದು ಸುಳ್ಳೆಂದು ಹೇಳುತ್ತಿಲ್ಲ. ಇಂತಹ ಒಂದು ಸಂದರ್ಭದಲ್ಲೂ ಹಲವಾರು ಮಂದಿ ಧನಾತ್ಮಕ ಅಂಶಗಳನ್ನು ಆರಿಸಿಕೊಂಡು ಅದರ ಮೂಲಕ ತಮ್ಮ ಬದುಕನ್ನು ರೂಪಿಸಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ ಎಂಬುದು ಕೂಡ ಅಷ್ಟೇ ನಿಜವಾಗಿದೆ. ಇಂತಹ ಮುಂಬೈ ಪಟ್ಟಣಕ್ಕೆ ತುಂಟನಾದ ಚಂದುವನ್ನು ರಿಮ್ಯಾಂಡ್ ಹೋಂಗೆ

ಸೇರಿಸಲು ಕರೆದುಕೊಂಡು ಹೋಗುತ್ತಾರೆ ಎಂದಾಗ, ಕುಂಟ ಮಂಗೇಶ ಚಂದುಗೆ ತನಗೆ ಅಲ್ಲಿಂದ ಬಣ್ಣದ ಕಾಲುಗಳನ್ನು ತರಲು ಹೇಳುತ್ತಾನೆ. ಅಂದರೇ ಬಣ್ಣದ ಕಾಲು ನಿಜವಾಗಿಯೂ ದೊರಕುತ್ತದೋ ಇಲ್ಲವೋ ತಿಳಿಯದು. ಆದರೆ ಎಂತಹವರಿಗೂ ಕೂಡ ಅಲ್ಲೊಂದು ಆಶ್ರಯವಿದೆ ಎಂಬುದನ್ನು ಆತನ ಮಾತಿನಿಂದ ತಿಳಿಯಬಹುದಾಗಿದೆ. ಅಷ್ಟೇ ಅಲ್ಲದೆ "ಗೋಕರ್ಣದ ದೇವಸ್ಥಾನದ ಹೊರಗೆ ಸಾಲಾಗಿ ಕೂತು ಪ್ರವಾಸಿಗರಿಗೆ ಹೂ ಮಾರುವ ಹುಡುಗರ ಬಳಿಗೆ ಈ ಎಲ್ಲಾ ಮಕ್ಕಳ ಜತೆಗೆ ಕೂತು ದಾಸಾಳದೂರ್ವೆಗಳ ಸಣ್ಣ ಕಟ್ಟುಗಳನ್ನು ಮಾರುವ ಕುಂಟ ಮಂಗೇಶನನ್ನು ಸುತ್ತರಿದು ಎಲ್ಲರೂ "ಚಂದು ಮುಂಬೈಗೆ ಹೋಗ್ತಾನೆ".[49] ಎಂದು ಹೇಳುತ್ತಾರೆ. ಅಂದರೆ ಪ್ರತಿಯೊಬ್ಬರೂ ಕೂಡ ಒಂದೊಂದು ಬಗೆಯಾಗಿ ಬದುಕನ್ನು ನಿರ್ವಹಿಸಲು ಜೀವನಕ್ಕೆ ಆಧಾರವಾಗಿ ಉದ್ಯೋಗವನ್ನು ಹುಡುಕಿಕೊಂಡಿರುತ್ತಾರೆ. ಎಷ್ಟೋ ಮಂದಿ ಮಾರ್ಕೆಟ್ಟಿಗೆ ಹೋಗಿ ಅಲ್ಲಿಂದ ಹೂಗಳನ್ನು ತಂದು ಮನೆಯಲ್ಲಿ ಕಟ್ಟಿ ಅಥವಾ ಕೂಲಿಕೊಟ್ಟು ಕಟ್ಟಿಸಿ ಬೀದಿ ಬೀದಿಲಿ ಮಾರಾಟ ಮಾಡುವವರಿರುತ್ತಾರೆ. ಅದೇ ರೀತಿಯಾಗಿ ಮನೆಯಲ್ಲಿ ಬೆಳೆದ ಹೂಗಳನ್ನು ತಾವೇ ಕಟ್ಟಿ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಮಾರಾಟ ಮಾಡಿ ಹಣ ಸಂಪಾದಿಸುವ ಮಂದಿಯನ್ನು ಕಾಣುತ್ತೇವೆ. ಅದೇ ರೀತಿಯಾಗಿ ಚಂದುನ ಎಷ್ಟೋ ಗೆಳೆಯರು ಹಾಗೂ ಕುಂಟ ಮಂಗೇಶನು ಹೂವನ್ನು ಮಾರಿ ಬದುಕನ್ನು ನಿರ್ವಹಿಸುತ್ತಿರುತ್ತಾರೆ. ಇಂದು ಕೈ-ಕಾಲು ಗಟ್ಟಿಯಾಗಿದ್ದು ಮೈಯಲ್ಲಿ ಶಕ್ತಿ ತುಂಬಿದ ಎಷ್ಟೋ ಮಂದಿ ಸೋಮಾರಿಗಳಾಗಿ ಕೆಲಸ ಮಾಡದೆ ಭಿಕ್ಷೆ ಬೇಡಿ ಹಣಗಳಿಸುತ್ತಾರೆ. ಹಾಗೆಯೇ ಗಳಿಸಿದ ಹಣದಿಂದ ಕುಡಿದು ರಸ್ತೆಯ ಬದಿಯಲ್ಲಿ ಮೈಮೇಲೆ ಜ್ಞಾನವಿಲ್ಲದೆ ಮಲಗಿರುತ್ತಾರೆ. ಇಂತಹ ಜನಗಳ ಮಧ್ಯೆಯೇ ಕೈ-ಕಾಲುಗಳಿಲ್ಲದೆ, ದುಡಿಯುವ ಚೈತನ್ಯವಿಲ್ಲದ ಭಿಕ್ಷುಕರನ್ನು ತಿರಸ್ಕಾರದಿಂದ ನೋಡುವ ಭಾವನೆ ಜನಸಮಾನ್ಯರಲ್ಲಿ ಸರ್ವೇಸಾಮಾನ್ಯವಾಗಿದೆ. ಆದರೆ ಎರಡೂ ಕಾಲಿಲ್ಲದ ಕುಂಟ ಮಂಗೇಶನು ಮಾತ್ರ ದಾಸವಾಳಗಳ ಕಟ್ಟುಗಳನ್ನು ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಮಾರಿ ಜೀವನ ನಡೆಸುವ ರೀತಿ ಆತನ ಒಂದು ವ್ಯಕ್ತಿತ್ವಕ್ಕೆ ವಿಶಿಷ್ಟವಾದ ಮೆರಗನ್ನು ನೀಡುತ್ತದೆ. ಇದೇ ಆತನ ವ್ಯಕ್ತಿ ವೈಶಿಷ್ಟವಾಗಿದೆ.

ಹಾಗೆಯೇ ತಂದೆಯೊಂದಿಗೆ ಮುಂಬೈಗೆ ಬಂದ ಚಂದು ಕಾಟಕರನ ಮನೆಗೆ ಬರುತ್ತಾನೆ. ಹಾಗೇ ಬಂದಾಗ ಕಾಟಕರ್ ಕೆಲಸಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಹೋಗುತ್ತಾನೆ. ತಂದೆ ಮಗನಿಬ್ಬರೂ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ನಂತರ ಹೋಟೆಲ್‌ನಿಂದ ನರಸಿಂಹ ತಂದ ವಡೆ ಬಿಸ್ಕತ್ ತಿಂದು ಹಾಗೆಯೇ "ಬಾಳಿನ ಮುಖ್ಯದ್ವಾರದಲ್ಲಿ ನಿಂತುಕೊಂಡು ಹಠಾತ್ತನೆ ಸರಭರಕ್ಕೆ ತೊಡಗಿದ ಪೇಟೆಯನ್ನು ಇಬ್ಬರು ನೋಡಿದರು. ಸಮೀಪದಲ್ಲೇ ಪರೇಲಿನ ರೇಲವೇ ಸ್ಟೇಷನ್ನು ಇತ್ತು ಅಲ್ಲಿ ಪ್ರತೀ ಲೋಕಲ್ ರೈಲು ನಿಂತು ಹೋದಾಗಲೂ ರಾಶಿ ರಾಶಿ ಜನ ಬೀದಿ ಪಾಲಾಗುತ್ತಿದ್ದರು. ಕಣ್ಣಿಗೆ ಕಪ್ಪು ಕನ್ನಡಕ ಹಾಕಿಕೊಂಡು ಕುರುಡರು

ಲಾಟರಿ ಟಿಕೇಟು ಮಾರುತ್ತಿದ್ದರು. ಮತ್ತು ತೆರೆಯದೇ ಇದ್ದ ಅಂಗಡಿಯೊಂದರ ಎದುರು ನೂರಾರು ಸಣ್ಣ ಮಕ್ಕಳು ಪೇಪರುಗಳ ಕಟ್ಟುಗಳನ್ನೆತ್ತಿಕೊಂಡು ಸಂದಣಿಯಲ್ಲಿ ಕರಗುತ್ತಿದ್ದರು. ಸಣ್ಣ ಕಟ್ಟೆಗೆಯ ಬಾಕ್ಸಿನ ಮೇಲೆ ಕೂತ ಒಬ್ಬ ವ್ಯಕ್ತಿ ಈ ಮಕ್ಕಳಿಗೆ ಪೇಪರು ಎಣಿಸಿಕೊಡುತ್ತಿದ್ದ. ಪುಟ್ಟ ಮಕ್ಕಳು ಆ ವ್ಯಕ್ತಿಯ ಜತೆ ದೊಡ್ಡವರಂತೆ ಧಂದೆಯ ಮಾತಾಡಿ ಕಟ್ಟು ಇಸಕೊಂಡು ಹೋಗುತ್ತಿದ್ದರು. ಯಾರ ಕಾಲಲ್ಲೂ ಚಪ್ಪಲಿ ಇರಲಿಲ್ಲ. ಕೆಲವೆ ಕ್ಷಣಗಳಲ್ಲಿ ಆ ವಹಿವಾಟು ಮುಗಿದು ಆ ವ್ಯಕ್ತಿ ಮಕ್ಕಳು ಎಲ್ಲ ಮಾಯವಾಗಿ ಆ ಬಾಕ್ಸ್ ಮೂಲೆ ಸೇರಿತು. ಮತ್ತು ಸದ್ದಿಲ್ಲದೆ ತರಕಾರಿ ಮಾರುವವನೊಬ್ಬ ಅಲ್ಲಿ ತನ್ನ ಸಾಮ್ರಾಜ್ಯ ಬಿಚ್ಚಿ ಕೂತುಬಿಟ್ಟ. ಕಿಟ್ಲಿಗೆ ನಾಣ್ಯ ಕುಟ್ಟುತ್ತ ಪೋರನೊಬ್ಬ 'ಚಾಯ್' ಎನ್ನುತ್ತ ಬಂದ. ಗೋಪುರದಂತೆ ಒಂದು ಕೈಯಲ್ಲಿಟ್ಟುಕೊಂಡಿದ್ದ ಗ್ಲಾಸುಗಳಿಂದ ಒಂದೊಂದೇ ತೆಗೆದು ಚಾ ಸುರಿದು ಕೊಡುತ್ತಾ ದಟ್ಟಣೆಯ ಫುಟ್‌ಪಾತಿನಲ್ಲಿ ಅಲ್ಲಲ್ಲಿ ಕಣ್ಮರೆಯಾಗುತ್ತ ನಡೆದ".[50] ಹೀಗೆ ಪ್ರತಿಯೊಬ್ಬರೂ ಕೂಡ ಅಂದರೆ ಅಬಾಲಾವೃದ್ಧರಿಂದ ಹಿಡಿದು ತಮ್ಮದೇ ಆದ ಜೀವನ ನಿರ್ವಹಣೆಯ ಕೆಲಸವನ್ನು ಹಿಡಿದುಕೊಂಡಿರುವುದು ಚಂದುವಿಗೆ ಸೋಜಿಗವೆನಿಸುತ್ತದೆ. ಏಕೆಂದರೆ ಪ್ರತಿಯೊಬ್ಬ ಹುಡುಗನು "ಉದರ ನಿಮಿತ್ತಂ ಬಹುಕೃತವೇಷಂ" ಎಂಬಂತ್ತೆ ತಮ್ಮ ತಮ್ಮದೇ ಆದ ಕೆಲಸವನ್ನು ಮಾಡುತ್ತಿದ್ದರು ಇಷ್ಟು ಮಾತ್ರವಲ್ಲದೆ, ತಮ್ಮ ಖೋಲಿಯನ್ನು ಬಿಟ್ಟು ಮುಂದೆ ನಡೆಯುವಾಗ ಅಕ್ಕ-ಪಕ್ಕದ "ಖೋಲಿಗಳಲ್ಲಿ ಸಣ್ಣಪುಟ್ಟ ಕಾರ್ಯಗಾರ ಇದ್ದಂತೆ ಕಾಣುತ್ತಿತ್ತು. ಗಂಭೀರ ಮುದ್ರೆಯ ಹೆಣ್ಣು ಮಕ್ಕಳು ಪ್ಲಾಸ್ಟಿಕ್ಕಿನ ತುಂಡುಗಳಿಗೆ ಏನೋ ಸಿಲುಕಿಸುತ್ತಿದ್ದರು. ಸಾಣೆ ಯಂತ್ರದಂತೆ ಒಂದಿಷ್ಟು ಪುಟ್ಟ ಯಂತ್ರಗಳು ತಿರುಗುತ್ತಿದ್ದವು. ಹೆಣ್ಣು ಮಕ್ಕಳು ವಿಗ್ರಹಗಳಂತೆ ಕಾಣುತ್ತಿದ್ದರು. ಅವರ ಕಣ್ಣುಗಳು ಎವೆಯಿಕ್ಕುತ್ತಲೇ ಇರಲಿಲ್ಲ".[51] ಇಲ್ಲಿ ಮಕ್ಕಳನ್ನು ಮಾತ್ರವಲ್ಲದೆ ಮನೆಯ ಅಕ್ಕ ಪಕ್ಕದಲ್ಲೇ ಹೆಣ್ಣು ಮಕ್ಕಳು ಗೃಹಕೈಗಾರಿಕೆಗಳಂತಹ ಕೆಲಸಗಳನ್ನು ನಿರ್ವಹಿಸುತ್ತಿದ್ದರು ಎಂಬುದನ್ನು ತಿಳಿಯಬಹುದು. ಜೊತೆಗೆ ಇದೊಂದು ಸೂಕ್ಷ್ಮ ರೀತಿಯ ಕೆಲಸವೆಂಬುದನ್ನು ಅವರ ಕಣ್ಣುಗಳು ಎವೆಯಿಕ್ಕದೆ ಅದನ್ನೇ ನೋಡುತ್ತಿದ್ದವು ಎನ್ನುವುದನ್ನು ವಿವರಿಸುವಾಗ ತಿಳಿಯಬಹುದಾಗಿದೆ. ಹೆಂಗಸರೂ ಕೂಡ ತಮ್ಮದೇ ಆದ ಜವಾಬ್ದಾರಿಗಳು ಇರುವಾಗ ಅಂದರೆ ಮಕ್ಕಳ ಓದಿಗೆ,ಗೃಹ ನಿರ್ವಹಣೆಗೆ ಹೀಗೆ ಹಲವಾರು ಸಮಸ್ಯೆಗಳನ್ನು ನಿವಾರಿಸಲು ಉದ್ಯೋಗದ ಅವಶ್ಯಕತೆ ಇದ್ದು, ಇಂತಹ ಕೆಲಸ ಮಾಡುವುದರ ಮೂಲಕ ಬದುಕನ್ನು ಕಟ್ಟಿ ಕೊಂಡಿರುತ್ತಾರೆ. ಇದು ಇಂತಹ ವ್ಯಕ್ತಿಗಳ ಒಂದು ವೈಶಿಷ್ಟ್ಯವೇ ಆಗಿದೆ. ಹಾಗೆಯೇ ಮಗನನ್ನು ರಿಮ್ಯಾಂಡ್ ಹೋಂಗೆ ಸೇರಿಸಲು ಆ ಸ್ಥಳವನ್ನು ನೋಡಿಕೊಂಡು ಬಂದ ನರಸಿಂಹನ ಮನಸ್ಸಿಗೆ ಬೇಜಾರೆನಿಸಿತು. ಏಕೆಂದರೆ ಕಟಕರ್ ನರಸಿಂಹನೊಂದಿಗೆ, ಕ್ರೂರವಾಗಿ ವರ್ತಿಸಿದ್ದರಿಂದ ಬೇಜಾರೆನಿಸಿತ್ತು. ಮನೆಗೆ ಮರಳಿ ಮಗನನ್ನು ಸುತ್ತಾಡಲು ಹೊರಗೆ ಕರೆದುಕೊಂಡು ಹೊರಟನು. ಆಗ ಚಂದುಗೆ "ಬೂಟ್ ಪಾಲಿಸ್ ಮಾಡುವವರು, ಕಾರಿನ ಗಾಜು ಹಳದಿ ವಸ್ತ್ರದಿಂದ ಉಜ್ಜುವವರು, ಇಲಿ

ಪಾಷಾಣ ಮಾರುವವರು, ಪೋಸ್ಟರ್ ಹಚ್ಚುವವನ ಏಣಿ ಹಿಡಿದವರು ಕೊತ್ತಂಬರಿಯ ಕಟ್ಟು ಮುಂದೆ ಹಿಡಿದವರು, ಬೇಲ್‌ಪುರಿ, ಆಮ್ಲೆಟ್ ಗಾಡಿಗಳಿಗೆ ಕೂಗಿ ಕರೆಯುವವರು".[52] ಎಲ್ಲಾ ಮಕ್ಕಳು ಕೂಡ ಒಂದೊಂದು ರೀತಿಯ ಕೆಲಸವನ್ನು ನಿರ್ವಹಿಸುವವರೇ ಇವರೆಲ್ಲರೂ ಹೊಟ್ಟೆ ಪಾಡಿಗಾಗಿ ತಮ್ಮದೇ ಆದ ರೀತಿಯನ್ನು ಕಂಡು ಕೊಂಡಿರುವವರು ಇಂತಹವರನ್ನು ಕಂಡಾಗ ಚಂದುಗೆ ಇವರೆಲ್ಲ ಧೀರರಂತೆ ಕಂಡರು. ಒಂದು ರೀತಿಯಲ್ಲಿ ಇವರೆಲ್ಲ ಧೀರರೇ ಏಕೆಂದರೆ ಹೋರಾಟದ ಮೂರು ದಿನ ಈ ಬದುಕಿನಲ್ಲಿ ನೆಮ್ಮದಿಯ ನೆಲೆಗಾಗಿ ಹುಡುಕಾಟವನ್ನು ನಡೆಸಿ ಅದನ್ನು ಅಲ್ಪಕಾಲಕ್ಕೆ ಸ್ಥಿರವಾಗಿಸಿ ಕೊಂಡಿರುವ ಧೀರರೇ ಈ ಪೋರರು. ಇಷ್ಟೇಮಾತ್ರವಲ್ಲದೆ, ಪೋಪಟ್ ಈತ ಟೀ ಮಾರುವ ಪೋರ ಈತ ಪ್ಲಾಸ್ಟಿಕ್ ಕೆಲಸ ಮಾಡುವ ಹೆಂಗಳೆಯರಿಗೆ ಟೀ ಕೊಟ್ಟ ನಂತರ ಅಲ್ಲೆ ಇದ್ದ ಚಂದುಗೆ ಒಂದು ಲೋಟ ಟೀ ಕೊಡುತ್ತಾನೆ. ನಂತರ ಆ ಹೆಂಗಳೆಯರೆಲ್ಲ ತಮ್ಮ ಹಣವನ್ನು ಮಾತ್ರ ನೀಡಿ ಚಂದುನ ಹಣವನ್ನು ಕೊಡುವುದಿಲ್ಲ. ಅಂದರೆ ಮರೆತಿರ ಬಹುದು ಎಂದು ಕೊಂಡಾಗಲೂ ಪೋಪಟ್ ಅದನ್ನು ಮಾಪ್ತ್ ಮಾಡಿದ್ದೇನೆ ಎನ್ನುತ್ತ ಸ್ನೇಹದ ನಗೆಯನ್ನು ಬೀರುತ್ತಾನೆ. ಅಂದರೆ ಆತ ಟೀ ವ್ಯಾಪಾರಿಯಾಗಿದ್ದು, ಒಂದು ಲೋಟದ ಟೀ ಸಂಪಾದನೆಯೇ ಅವರ ಆದಾಯವೂ ಆಗಿರುವಾಗ ಆತ ಸ್ನೇಹಕ್ಕಾಗಿ ಹೊಸದಾಗಿ ಪರಿಚಿತನಾದ ಚಂದೂಗಾಗಿ ಆ ಟೀಯ ಹಣವನ್ನು ಮನ್ನ ಮಾಡುವ ಅವನ ಸ್ನೇಹ ಪರ ವ್ಯಕ್ತಿತ್ವವೇ ವಿಶಿಷ್ಟವಾದುದ್ದಾಗಿದೆ.

ಕೆಲವೊಂದು ಸಲ ಹೊಟ್ಟೆಪಾಡಿಗಾಗಿ ಕಾನೂನು ಬಾಹಿರವಾದ ಕೆಲಸಗಳನ್ನು ಕೂಡ ಮಾಡುವುದು ಅನಿವಾರ್ಯವಾಗುತ್ತದೆ. ಅದೇ ರೀತಿಯಾಗಿ ಕಾಟಕರ್ ಮನೆಯ ಪಕ್ಕದಲ್ಲಿ ವಿಚಿತ್ರವಾದ ಗುರ್‌ಗುರಾಟ್ ಪ್ರಾಣಿಗಳ ಚೀರಾಟ ಕೇಳಿ ಬರುತ್ತದೆ. ಆಗ ಕಾಟಕರ್ ಬೆಕ್ಕು ಬೆಕ್ಕು ಎಂದಾಗ ಚಂದೂಗೆ ಆಶ್ಚರ್ಯವೆನಿಸುತ್ತದೆ. ಏಕೆಂದರೆ ಬೆಳಗ್ಗಿನಿಂದ ಅಳಿಲಿನ ಬಾಲವನ್ನೂ ನೋಡಿರದ ಚಂದು ಈ ಮಧ್ಯರಾತ್ರಿಯಲ್ಲಿ ಬೆಕ್ಕುಗಳು ಎಲ್ಲಿಂದ ಬಂದವಪ್ಪ! ಎಂದು ಆಶ್ಚರ್ಯವಾಯಿತು. "ಆಗ ಕಾಟಕರ್ ಈ ಪಕ್ಕದ ಹೆಂಗಸಿನ ಗಂಡ ಬೆಕ್ಕುಗಳನ್ನು ಹಿಡಿಯುವ ಕಸುಬು ಮಾಡುತ್ತಾನೆಂದೂ ಮತ್ತು ಇಂತಹ ಬೆಕ್ಕುಗಳನ್ನು ಹಿಡಿದು ಔಷಧಿ ಕಂಪನಿಗಳ ಸಂಶೋಧನೆಗೆ ಕೊಡುತ್ತಾನೆಂದು ಹೇಳಿದ. ಮಧ್ಯಾಹ್ನ ನೋಡಿದ ದೊಡ್ಡ ಆಕಾರದ ಬೋನುಗಳು ಚಂದುವಿಗೆ ಕಣ್ಮುಂದೆ ಬಂದವು. ಇಂಥ ಬೆಕ್ಕುಗಳಿಗೆ ಹೊಸ ಔಷಧಿ ಚುಚ್ಚಿ ನಂತರ ಅವುಗಳನ್ನು ಸೀಳಿ ಪರಿಣಾಮಗಳನ್ನು ಅಭ್ಯಾಸ ಮಾಡುತ್ತಾರಂತೆ, ಹೆಂಗಸಿನ ಗಂಡ ಶಹರದಲ್ಲಿ ಹೋಗಿ ಚೀಲ ಹಿಡಿದು ಹೊಂಚು ಹಾಕಿ ತಿರುಗುತ್ತಾನಂತೆ ಬೆಕ್ಕು ಸಿಕ್ಕರೆ ಮುಗಿಬೀಳುತ್ತಾನಂತೆ. ನಂತರ, ಅವನ್ನು ಬೋನಿನಲ್ಲಿಟ್ಟು ಬೆಳಗ್ಗೆ ಬರುವ ಕಂಪನಿಯ ಟೆಂಪೋದಲ್ಲಿ ಹಾಕುತ್ತಾನಂತೆ. ಪಾಳಿನವರು ತಕರಾರು ಮಾಡಲು ಹೋದಾಗ ಪರಚುವ ಭೀಭತ್ಸ ಬೆಕ್ಕುಗಳನ್ನು ಮೈಮೇಲೆ ಬಿಟ್ಟು ಬಿಟ್ಟಿದ್ದನಂತೆ. ಚಲೋ ದುಡ್ಡು ಮಾಡುತ್ತಾನೆ".[53] ಹೀಗೆ ಜೀವನೋಪಾಯಕ್ಕಾಗಿ

ಪ್ರಾಣಿ ಸಂಕುಲವನ್ನು ನಾಶ ಮಾಡಿ ಅಪಾರವಾದ ಹಣ ಸಂಗ್ರಹಕ್ಕೆ ತೊಡಗುತ್ತಾರೆ. ಇಂತಹ ವ್ಯಕ್ತಿಗಳೂ ಬದುಕಿನ ಆಧಾರಕ್ಕಾಗಿ ಕೆಟ್ಟ ಕೃತ್ಯಗಳಲ್ಲಿ ತೊಡಗಿರುತ್ತಾರೆ. ಉದಾ:- ಎರಡು ತಲೆ ಹಾವುಗಳನ್ನು ಹಿಡಿಯುವ ಜನಗಳನ್ನು ನಾವು ಕಾಣುತ್ತೇವೆ. ಅದೇ ರೀತಿಯಾಗಿ ದಂತಕ್ಕಾಗಿ ಆನೆಯನ್ನು ಕೊಲೆ ಮಾಡುವ ಕೊಲೆಗಡುಕರನ್ನು ಕಾಣುತ್ತೇವೆ. ಹಾಗೆಯೇ ಆ ವ್ಯಕ್ತಿ ಬೆಳಗ್ಗೆಯೆಲ್ಲಾ ಎಲ್ಲಿ ಬೆಕ್ಕುಗಳು ಸಿಗುತ್ತವೆ ಎಂದು ಹೊಂಚು ಹಾಕಿ ಅವುಗಳನ್ನು ಯಾರಿಗೂ ಕಾಣದ ರೀತಿಯಲ್ಲಿ ತಂದು ಸಾಗಿಸುವುದು ಈತನ ಕೆಲಸ. ಹೀಗೆ ಜೀವನಕ್ಕಾಗಿ ತನ್ನ ಜೀವನವನ್ನೇ ಕಾನೂನಿನ ಬಾಹಿರ ಕೆಲಸಕ್ಕೆ ಒಪ್ಪಿಸಿರುವುದು ಆ ವ್ಯಕ್ತಿಯ ವೈಶಿಷ್ಟವಾಗಿದೆ.

ಜಯಂತ್ ಕಾಯ್ಕಿಣಿಯವರ ಪ್ರಮುಖವಾದ ಕಥಾ ಸಂಕಲನಗಳಲ್ಲಿ ಒಂದಾದ 'ಚಾರ್‌ಮಿನಾರ್'. ಈ ಕಥಾಸಂಕಲನದ ಪ್ರಮುಖ ಕತೆ 'ನೀರು'. ಈ ಕತೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಎಷ್ಟೇ ಹಣ ಐಶ್ವರ್ಯವಿದ್ದರೂ ತನ್ನ ಕಷ್ಟದ ಕಾಲಕ್ಕೆ ಯಾವುದೇ ಐಶ್ವರ್ಯ ಜೊತೆಯಾಗಿ ಬರುವುದಿಲ್ಲ. ತನ್ನ ಸುತ್ತಮುತ್ತ ಸಾವಿರಾರೂ ಮಂದಿ ನೆಂಟರಿಷ್ಟರಿದ್ದರೂ ತನ್ನ ನೋವಿನ ಸಂದರ್ಭದಲ್ಲಿ ಆಗುವವನೇ ‚ ನಿಜವಾದ ನೆಂಟನೆನಿಸಿಕೊಳ್ಳುತ್ತಾನೆ. ಅದೇ ರೀತಿಯಾಗಿ ಸಂತೋಷನ್ ಸಹಾಯಕ್ಕೆ ನಿಂತ ಚಂದ್ರಹಾಸನನ್ನು ನೆನೆದಾಗ, ಚಂದ್ರಹಾಸನ ಸಹಾಯಕ್ಕೆ ಟ್ಯಾಕ್ಸಿ ಡ್ರೈವರ್ ನೆರವಾಗುತ್ತಾನೆ. ಹೀಗೆ ಒಬ್ಬರಿಗೆ ಒಬ್ಬರು ನೆರವಾಗುವುದೇ ವ್ಯಕ್ತಿಯಲ್ಲಿರುವ ವಿಶಿಷ್ಟ ಗುಣವೆನಿಸಿಕೊಳ್ಳುತ್ತದೆ. ಅಂದರೆ ಬೆಂಗಳೂರಿನಿಂದ ಹೊರಟ ಸಂತೋಷನ್‌ಗೆ ಚಂದ್ರಹಾಸ ಜೊತೆಯಲ್ಲಿ ಯಾರು ಇಲ್ಲದ ಕಾರಣ ನೆರವಿಗೆ ನಿಲ್ಲುತ್ತಾನೆ. ಚಂದ್ರಹಾಸನಿಗೆ ಬೇಕಾದಷ್ಟು ಕೆಲಸಗಳಿರುತ್ತವೆ. ಅಂದು ಬ್ಯಾಂಕ್ ಲೋನ್ ಕಟ್ಟಲು ಕೊನೆಯ ದಿನ. ಅಲ್ಲದೆ, ಹೆಂಡತಿಯನ್ನು ಆಫೀಸಿನಿಂದ ಕರೆದು ಕೊಂಡು ಬರಬೇಕಿತ್ತು. ಹೀಗೆ ಹಲವಾರು ಕೆಲಸಗಳಿದ್ದರೂ ಹವಾಮಾನದ ವೈಪರಿತ್ಯದಿಂದಾಗಿ ತನ್ನ ಅಳಿಯ ಬರಲು ತಡವಾಗಬಹುದೆಂಬ ಆತಂಕದಲ್ಲಿದ್ದ ಸಂತೋಷನ್‌ಗೆ ಚಂದ್ರಹಾಸ ನೆರವಾಗುತ್ತಾನೆ. ಸಂತೋಷನ್ "ಬಿಸಿನೆಸ್‌ನಲ್ಲಿದ್ದಾಗ ಯಾರನ್ನು ನಂಬುತಾ ಇರಲಿಲ್ಲ ನಾನು, ದುಡ್ಡಷ್ಟನೇ ನಂಬುತಾ ಇದ್ದೆ. ಆದರೆ ಕಾಯಿಲೆ ಆದ ಮೇಲೆ ಎಲ್ಲರನ್ನು ಕಂಡಾಪಟ್ಟೆ ನಂಬಲಿಕ್ಕೆ ಶುರು ಮಾಡಿದ್ದೇನೆ."[54] ಅಂದರೆ ಮೀಸೆ ಬಂದವನಿಗೆ ದೇಶ ಕಾಣಲ್ಲ ಎಂಬಂತೆ ವ್ಯವಹಾರ ಕೇವಲ ದುಡ್ಡಿನ ಜಗತ್ತಷ್ಟನ್ನೇ ನಮ್ಮ ಮುಂದೆ ತೋರಿಸುತ್ತದೆ. ಹಾಗಾಗಿ ನಾವು ಯಾರನ್ನು ನಂಬಲು ಸಿದ್ಧರಿರುವುದಿಲ್ಲ. ದ್ರೋಹ ಬಗೆಯುತ್ತಾರೆಂಬ ಭಯ ಆದರೆ ನೊಂದು ಹತಾಶವಾಗಿರುವಾಗ ಜೀವಕ್ಕೆ ಸಾಂತ್ವಾನದ ಮಾತು ಬಹಳ ಹಿತವೆನಿಸುತ್ತದೆ. ಹಾಗಾಗಿ ಖಾಯಿಲೆಗೆ ಗುರಿಯಾದ ದೇಹ, ಬಿದ್ದೋಗಲು ಅಲುಗಾಡುತ್ತಿರುವ ಮರದಂತೆ ಹಾಗಾಗಿ ಅವರಿಗೆ ಯಾರಾದರೂ ಆಶಾಭಾವನೆಯ ಮಾತುಗಳನ್ನು ಹೇಳುವವರೋ ಅವರೆಲ್ಲರ ಮಾತುಗಳು ದೇವರ ನುಡಿಗಳೇ ಎನಿಸುವಷ್ಟು ಹಿತವಾಗಿರುತ್ತವೆ.

ಅದೇ ರೀತಿಯಾಗಿ ಸಂತೋಷನ್‌ನ ಸ್ಥಿತಿಯೂ ಆಗಿರುತ್ತದೆ. ನಂತರ ಟ್ಯಾಕ್ಸಿ ಹಿಡಿದು ಆಸ್ಪತ್ರೆಗೆ ಹೊರಟ ಅವರಿಗೆ ಕುಂಜವಿಹಾರಿ ಪರಿಚಯವಾಗುತ್ತದೆ. ದುಡಿಯುವ ವ್ಯಕ್ತಿಗಳಿಗೆ ಅಂದರೆ, ಹಣ ಸಂಪಾದನೆ ಮಾಡುವವರಿಗೆ "ಮುಂಬಯಿಯಲ್ಲಿ ಹಣ ನೀರಿನಂತೆ ಹರೀತದೆ ಸಾಬ್ ಕೆಲವರಿಗೆ ಅದು ಕಾಣುತ್ತೆ. ಕೆಲವರಿಗೆ ಕಾಣಲ್ಲ, ಕಂಡವರು ಅದನ್ನು ಮೊಗೆದು ಮೊಗೆದು ತಮ್ಮದಾಗಿಸಿಕೊಳ್ಳುತ್ತಾರೆ. ಮತ್ತು ಟ್ಯಾಕ್ಸಿಯಲ್ಲಿ ಕಾಣದವರು ಟ್ಯಾಕ್ಸಿ ನಡೆಸುತ್ತಾರೆ".[55] ಎಂದು ಹೇಳುತ್ತಾನೆ.ಅಂದರೆ ಅದು ಯಾವ ರೀತಿಯಿಂದಲಾದರೂ ಸಂಪಾದನೆ ಮಾಡುತ್ತೇವೆ ಎನ್ನುವ ವ್ಯಕ್ತಿಗಳು ಅದನ್ನು ಪಡೆದು ಜೋಪಾನ ಮಾಡುವ ದಾರಿಯು ಇರುತ್ತದೆ ಎಂದು ಹೇಳುತ್ತಾನೆ. ಅಷ್ಟೇ ಅಲ್ಲದೆ, ಜೋರು ಮಳೆ ಬರುವ ಲಕ್ಷಣಗಳು ಹೆಚ್ಚಾಗಿವೆ ಎಂದು ಸೂಕ್ಷ್ಮವಾಗಿ ಹೇಳುತ್ತಾನೆ. ಚಂದ್ರಹಾಸನ್ ಹಾಗೂ ಸಂತೋಷನ್ ವೈದ್ಯರ ಬಳಿಯಲ್ಲಿ ಇರುವಾಗ ಅವರಿಗೆ ಸೂಕ್ಷ್ಮವಾಗಿ ಭಯಂಕರವಾದ ಮಳೆ ಬರಲಿದೆ ತಕ್ಷಣವೇ ಹೊರಟರೆ ಒಳ್ಳೆಯದು ಎಂದು ಸೂಚನೆಯನ್ನು ನೀಡಿ ಅಲ್ಲಿಂದ ಹೊರಡುತ್ತಾನೆ. ಹಾಗೆ ಹೊರಟಾಗಲೂ ಧಾರಾಕಾರ ಮಳೆಯಿಂದಾಗಿ ಎಲ್ಲಾ ಕಡೆಯೂ ವಾಹನಗಳ ದಟ್ಟಣೆಯಿಂದ ಮಧ್ಯೆಯಲ್ಲಿಯೇ ಇವರ ಟ್ಯಾಕ್ಸಿಯು ನಿಲ್ಲುತ್ತದೆ. ಆಗ ರಸ್ತೆಯ ಬದಿಯ "ಅಂಗಡಿಯವರು ಶಾಲೆ ಮುಗಿಸಿ ಮನೆಗೆ ಕತ್ತಲೆಯಲ್ಲಿ ಹೋಗುತ್ತಿದ್ದ ಮಕ್ಕಳನ್ನು ಕರೆದು ಅವರಿಗೆ ಬಿಸ್ಕೇಟು, ಬಾಳೇಹಣ್ಣು, ಬ್ರೆಡ್ ಇತ್ಯಾದಿ ಕೊಡಲಾರಂಭಿಸಿದರು. ಅಕ್ಕ ಪಕ್ಕದ ಮನೆಯವರು ಅವರನ್ನು "ಬನ್ನಿ ಇದ್ದು ಅನಂತರ ನೀರಿಳಿದ ಮೇಲೆ ಹೋಗಿ" ಎಂದು ಕರೆಯುತ್ತಿದ್ದರು. ಬಸ್ಸಿನಲ್ಲಿದ್ದ ಹೆಂಗಸರು ಮಕ್ಕಳನ್ನು ಬಸ್ಸುಗಳು ಎಲ್ಲೆಲ್ಲಿ ನಿಂತಿವೆಯೋ ಆ ಬೀದಿಗಳ ಅಕ್ಕ ಪಕ್ಕದ ಚಾಳು ಅಪಾರ್ಟ್‌ಮೆಂಟಿನ ಜನರು ತಂಗಲು ಕರೆಯತೊಡಗಿದರು".[56] "ಇಲ್ಲಿ ಪ್ರತಿಯೊಬ್ಬರೂ ಕೂಡ ಕಷ್ಟದಲ್ಲಿರುವ ಮಂದಿಗೆ ಸಹಾಯ ಮಾಡುವ ಗುಣವನ್ನು ಹೊಂದಿದ್ದಾರೆ. ಏಕೆಂದರೆ ಇಂದಿನ ಬೆಂಗಳೂರಿನಂತಹ ಮಹಾನಗರಗಳಲ್ಲಿ ಜೋರಾಗಿ ಮಳೆ ಬರುತ್ತಿದೆ. ಕೊಡೆ ತಂದಿಲ್ಲವೆಂದಾಗ ರಸ್ತೆಯಲ್ಲಿ ಹೋಗುವಾಗ ಯಾವುದಾದರು ಸೂರು ಇರುವ ಕಡೆ ಹೋಗಿ ನಿಂತರೆ, ಮನೆಯ ಬಾಗಿಲನ್ನು ಪಟಾರನೆ ಹಾಕಿಕೊಳ್ಳುವುದರಲ್ಲದೆ, ಇಲ್ಲಿ ನಿಲ್ಲಬೇಡಿ ಮೊದಲು ಹೊರಡಿ ಎಂಬಂತೆ ಸೂಚನೆಯನ್ನು ಕೊಡುತ್ತಾರೆ. ಆದರೆ ಮುಂಬೈನ ಆ ಮಹಾಜನತೆ ಹೊಂದಿರುವ ಮಾನವತೆ. ಗುಣ ಅವರ ವಿಶಿಷ್ಟತೆಯನ್ನು ತಿಳಿಯ ಪಡಿಸುತ್ತದೆ. ಹಾಗಾಗಿ ಇವರು ಇತರರಿಗಿಂತ ಭಿನ್ನವಾಗಿ ಕಾಣುತ್ತಾರೆ. ಆದ್ದರಿಂದಲೇ ವಿಶೇಷ ವ್ಯಕ್ತಿಗಳು ಎಂಬಂತೆ ಪರಿಗಣಿಸಬಹುದಾಗಿದೆ. ಇಂತಹ ವ್ಯಕ್ತಿ ವಿಶಿಷ್ಟತೆಯ ಪಾತ್ರಗಳನ್ನು ಮುಖ್ಯವಾಗಿ ನಾವು ಕಾಯ್ಕಿಣಿಯವರ ಕತೆಗಳಲ್ಲಿ ಕಾಣಬಹುದಾಗಿದೆ. ಹಾಗೆಯೇ ಮೇಲ್ಸೇತುವೆಯಿಂದ ಕದಲುವ ಲಕ್ಷಣಗಳು ವಾಹನಗಳಲ್ಲಿ ಕಾಣದೇ ಹೋದಾಗ "ಹೋಟೆಲುಗಳವರು ಶಟರ್ ತೆರೆದೇ ಇಟ್ಟು ಹಾದಿ ಹೋಕರನ್ನು ಒಳಗೆ ಮಲಗಲು ಬಿಟ್ಟರು. ಸರ್ದಾರ್‌ಜಿಗಳ ಲಂಗರ್‌ಗಳಂತೂ ಎಡೆಯಿದ್ದಲ್ಲಿ ಡೇರೆ

ಹೂಡಿ ಹಾದಿಯಲ್ಲೇ ಸಿಕ್ಕಿ ಬಿದ್ದರು ನಾಗರಿಕರಿಗೆ ರೊಟ್ಟಿ ಬೇಳೆ ಬೇಯಿಸಿಕೊಟ್ಟವು".[57] ಅಂದರೆ ಇಂದಿನ ದಿನಗಳಲ್ಲಿ ಮನೆಗೆ ಬೆಳಗ್ಗೆ ಬಂದ ನೆಂಟರಿಷ್ಟರನ್ನು ಯಾವಾಗ ಹೊರಡುವಿರಿ ಎಂದು ಕೇಳಲು ನಿಂತಿರುವ ನಗರೀಕರಣದ ಜನರು, ಇನ್ನು ದಾರಿ ಹೋಕರಿಗೆ ರೊಟ್ಟಿ ಬೇಳೆ ಬೇಯಿಸಿಕೊಡುವುದು ದೂರದ ಮಾತೆ ಅದೇ ಇದ್ದರೆ ಎರಡು ದಿನದ ಮಟ್ಟಿಗೆ ನಮಗೆ ಆಗುತ್ತದೆ ಎಂದು ಯೋಚಿಸುವ ಬಹಳ ಮಂದಿ ಸಿಗುವ ದಿನಗಳಲ್ಲಿ ಇಂತಹ ಜನ ಬಹಳ ವಿಶಿಷ್ಟ ವ್ಯಕ್ತಿಗಳೇ ಹೌದು.

ಅಷ್ಟು ಮಾತ್ರವಲ್ಲದೆ ಕುಂಜ್‌ಭಯ್ಯಾ ನಡುರಾತ್ರಿ ವೇಳೆಯಾದರೂ ಹೊಟ್ಟೆಗೆ ಏನು ಕೊಡಿಸಲಾಗಲಿಲ್ಲವಲ್ಲ ಎಂದು ತನ್ನ ಬಸಂತಿಯನ್ನು ಅಲ್ಲೇ ಬಿಟ್ಟು ಚಂದ್ರಹಾಸ ಹಾಗೂ ಸಂತೋಷನ್ ಜೊತೆಯಾಗಿ ತನ್ನ ಗೆಳೆಯನ ಗೆಳೆಯ ಪ್ಯಾರೇಮೋಹನ್ ಮನೆಗೆ ಕರೆದುಕೊಂಡು ಬರುತ್ತಾನೆ. ಆಗ "ಆ ಮನೆಯ ಮಕ್ಕಳು ನೀರನ್ನು ತೋಡಿ ತೋಡಿ ಬಕೆಟ್‌ಗೆ ಹಾಕುತ್ತಿದ್ದರು. ಮಂಚ, ಕುರ್ಚಿ, ಕಪಾಟುಗಳೆಲ್ಲ ನೀರಲ್ಲಿದ್ದವು. ಆ ನೀರಿನಲ್ಲಿ ನಿಂತುಕೊಂಡೇ ಹೆಂಗಸೊಬ್ಬಳು ರೊಟ್ಟಿ ಬಡಿಯುತ್ತಿದ್ದಳು". ಆಗ ಅಲ್ಲಿಗೆ "ಕಾಂಚುಬೆಹನ್ ನಾನು ಕುಂಜವಿಹಾರಿ. ನಿನ್ನ ಗಂಡ ಪ್ಯಾರೇಮೋಹನ್‌ನ ಗೆಳೆಯನಾದ ಹಸ್‌ಮುಖ್ ಆಲಿಯ ಗೆಳೆಯ ನಾನು. ಈತನಕ ಬಂದಿಲ್ಲ ಇಲ್ಲಿ ಇವತ್ತು ಈ ಮಳೆಯಲ್ಲಿ ಸಾರಾ ಮುಂಬಾಯಿ ಫಟ್ ಆಯ್ತಲ್ಲ ಅಲ್ಲೇ ಮಾಹಿಮ್ ಕ್ರೀಕ್‌ನಲ್ಲಿ ಸಿಕ್ಕಿಹಾಕಿಕೊಂಡೆವು".[58] ಎಂದು ತನ್ನ ಪರಿಚಯವನ್ನು ಹೇಳಿಕೊಳ್ಳುತ್ತಾನೆ. ಇಲ್ಲೂ ಕೂಡ ಒಂದು ವಿಚಾರವನ್ನು ನೆನಪಿಸಿಕೊಳ್ಳ ಬಹುದು ಅಂದರೆ ಕೇವಲ ಗೆಳೆಯ ಎಂದರೆ ತಿರಸ್ಕಾರದ ಭಾವನೆಯಲ್ಲಿ ನೋಡುವ ಜನ ಗೆಳೆಯನ ಗೆಳೆಯ ಎಂದಾಗ ಅದೂ ಎಂದೂ ಕಂಡಿರದೆ ನೇರವಾಗಿ ಮನೆಗೆ ಬಂದಾಗ ಅವರನ್ನು ಯಾರಾದರೂ ಸೇರಿಸಿಕೊಳ್ಳುವುದುಂಟೇ. ಆದರೆ ಆ ಹೆಂಗಸು "ಸರಿ ಸರಿ ಕುಳಿತುಕೊಳ್ಳಿ ರೊಟ್ಟಿ ತಿನ್ನಿ" ಎಂದವಳೇ ಎರಡೆರಡು ರೊಟ್ಟಿ ತಟ್ಟೆಯಲ್ಲಿ ಹಾಕಿ ಕೊಟ್ಟಳು. ಕೂರಲೂ ಆಗದೆ ನೀರಲ್ಲೇ ನಿಂತು ಮೂವರೂ ಅದನ್ನು ವಿಚಿತ್ರವಾದ ಮೌನದಲ್ಲಿ ವಿಚಿತ್ರವಾದ ಬೆಳಕಿನಲ್ಲಿ ತಿಂದರು. ಮಕ್ಕಳು ನೀರು ತುಂಬಿದ ಲೋಟ ಮಂದೆ ಹಿಡಿದರು ಚಂದ್ರಹಾಸನಿಗೆ ಕುಡಿಯಲಾಗಲಿಲ್ಲ. ಸಂತೋಷನ್ ಮಾತ್ರ ಆ ಲೋಟವನ್ನು ಹಿಡಿದು ಆ ನೀರನ್ನು ಕುಡಿದರು".[59] ಅಂದರೆ ಆ ಹೆಣ್ಣು ಮಗಳು ಹಿಂದು ಮುಂದು ಯೋಚಿಸದೆ ಬಂದ ವ್ಯಕ್ತಿಗಳಿಗೆ ಯಾವ ಪ್ರಶ್ನೆಗಳನ್ನು ಕೇಳದೆ "ಅತಿಥಿ ದೇವೋಭವ" ಎಂಬಂತೆ ಸತ್ಕರಿಸಿದಳು. ಇದು ಆ ಹೆಣ್ಣು ಮಗಳ ವ್ಯಕ್ತಿವಿಶಿಷ್ಟತೆಯಾಗಿದೆ. ಏಕೆಂದರೆ ತಮ್ಮ ಜೀವನವೇ ಕಷ್ಟದಲ್ಲಿರುವಾಗ ಬೇರೆಯವರನ್ನು ಎಲ್ಲಿಂದ ನೋಡಲಿ ಎಂದು ಯೋಚಿಸದ ತಾಯಿ ನಡುರಾತ್ರಿಯಲ್ಲಿ ಮನೆಗೆ ಬಂದವರಿಗೆ ತನ್ನ ಮಕ್ಕಳನ್ನು ಕುರಿತು ಆಲೋಚಿಸದೆ ರೊಟ್ಟಿ ತೆಗೆದುಕೊಟ್ಟಳಲ್ಲ ಅದು ವಿಶೇಷವಾಗಿರುವಂತಹದ್ದು. ಇಷ್ಟು ಮಾತ್ರವಲ್ಲದೇ ಚಂದ್ರಹಾಸ ಅವರಿಗೇನಾದರೂ ಕೊಡಲೇ ಎಂದಾಗ

'ಛೆ.......ಛೆ ನನ್ನ ಗೆಳೆಯ ನನ್ನ ಬಿಟ್ಟಾನ ಎಂದ ಕುಂಜಾ, ಮರಳಿ ಬರುವಾಗ ಮಗುವಿನ ಕಿಸೆಗೆ ಮಟ್ಟದೊಂದು ನೋಟನ್ನು ತುರುಕಿ ಬರುತ್ತಾನೆ. ಇದು ಆತನಲ್ಲಿರುವ ವಿಶೇಷವಾದ ಗುಣವಾಗಿದೆ ತಾನು ಕರೆದುಕೊಂಡು ಹೋಗಿರುವ ಗೆಳೆಯನ ಮನೆಯ ಊಟಕ್ಕೆ ಇವರಿಂದ ಹಣ ಕೊಡಿಸುವುದು ತರವಲ್ಲ ಎಂಬ ಭಾವಲ್ಲೊಂದು ಕಡೆಯಾದರೆ ಬಿಟ್ಟಿ ತಿನ್ನುವುದು ತರವಲ್ಲ ಎಂಬ ಭಾವನೆ ಮತ್ತೊಂದು ಕಡೆ ಆತನಿಗೆ ಅನಿಸುತ್ತದೆ. ಹಾಗಾಗಿ ಆತನು ಅದನ್ನು ತಾನೇ ಸಂಭಾಳಿಸಿಕೊಂಡು ಕರೆದುಕೊಂಡು ಬರುತ್ತಾನೆ.

ಅಲ್ಲದೆ ಹಾಗೆ ಬರುವಾಗ ಚಂದ್ರಹಾಸ ದೂರದಲ್ಲಿ ಒಂದು ಬನಿಮಾ ಅಂಗಡಿಗೆ ಹೋಗುತ್ತಾನೆ. ಅಲ್ಲಿ ಬಿಸ್ಲೇರಿ ಬಾಟಲಿಗಳ ಕ್ರೇಟು ಕಂಡ ತಕ್ಷಣ ನೀರ ತೆಗೆದುಕೊಳ್ಳುತ್ತಾನೆ. ಹಾಗೆಯೇ ನಾವು ಇಬ್ಬರು ಇದ್ದೇವೆ. ಒಬ್ಬರು ಬೆಂಗಳೂರಿಗೆ ಹೋಗಬೇಕು. ಎಷ್ಟು ದಿನ ಸಿಕ್ಕಿ ಬಿದ್ದರಬೇಕೋ ಇಲ್ಲಿ ಅಂತ ಗೊತ್ತಿಲ್ಲ ಈ ಬಾಟಲಿಯ ಇಡೀ ಕ್ರೇಟೇ ಕೊಟ್ಟು ಬಿಡಿ ಬೇಕಿದ್ದರೆ ಡಬಲ್ ಹಣ ತಗೊಳ್ಳಿ" ಎಂದ ಬನಿಯಾ ವಿಚಿತ್ರವಾದ ವಿಶಣ್ಣವಾದ ನಗು ಕೊಟ್ಟು "ಏನಪ್ಪಾ ನೀನೊಬ್ನೇನೇ ಏನಪಾ ಸಿಕ್ಕಿ ಹಾಕಿಕೊಂಡೋನು? ನೋಡ್ತಾ ಇಲ್ವಾ? ಹೆಂಗಸರು, ಮಕ್ಕಳು, ಮುದುಕರು ಎಲ್ರೂ ಸಿಕ್ಕಿಹಾಕಿಕೊಂಡಿದಾರೆ. ಎಲ್ರಿಗೂ ಬೇಕಲ್ಲಪ್ಪಾ. ಇರೋದೆ ಇಷ್ಟು. ನೀನು ಯುವಕ ಹಟ್ಟಾಖಟ್ಟಾ ಇದ್ದೀಯಾ ಒಂದು ಸಾಕು ನಿನಗೆ. ಗೆಳೆಯನಿಗೆ ಒಂದು ತಗೋ ಇದು ದುಡ್ಡುಗಳಿಸೋ ಸಮಯಾನೇನಾಪ್ಪ? ತಗೋ ಎರಡು ಬಾಟಲಿ, ಮುಖ ಬೆಲೆ 20 ರೂಪಾಯಿ ಕೊಡು".[60] ಎಂದನು ತಿಳಿದ ವ್ಯಕ್ತಿಗಳು ಹಣದಿಂದಲೇ ಎಲ್ಲವನ್ನು ಕೊಳ್ಳಬಹುದು ಎಂಬ ಆಲೋಚನೆಯಲ್ಲಿ ಮುಳುಗಿರುತ್ತಾರೆ ಎಂಬುದಕ್ಕೆ ಚಂದ್ರಹಾಸ ದುಪ್ಪಟು ಬೆಲೆ ಕೊಡಲು ತಯಾರಿದ್ದರೂ ಕೂಡ ಆ ಬನಿಯಾ ಮನುಷ್ಯತ್ವವನ್ನು ಸಾರಿದ. ಆ ಪುಟ್ಟ ಮಕ್ಕಳು ನೀರು ನೀಡಲು ಹೋದಾಗ ನಿರಾಕರಿಸಿದ ಚಂದ್ರಹಾಸ. ಆದರೆ ಸೀಲ್ ಆಗಿರುವ ನೀರೇ ಪ್ಯೂರ್ ಎಂದು ತಿಳಿದ ಮೂಢ ಈತ. ಏಕೆಂದರೆ ಇಂದು ಎಷ್ಟೋ ಮಂದಿ ಯಾವುದೇ ಶುದ್ಧೀಕರಣವಿಲ್ಲದೆ ನಳದಿಂದ ನೇರವಾಗಿ ಬಾಟಲಿಗೆ ನೀರು ತುಂಬಿ ಅದನ್ನು ಸೀಲ್ ಮಾಡಿ ಅಂಗಡಿಯಲ್ಲಿ ಇಟ್ಟು ಮಾರಾಟ ಮಾಡಿದರೆ ಹಣಕೊಟ್ಟು ಕೊಂಡು ಕುಡಿಯುವ ಮಂದಿ ಹಲವರಿದ್ದಾರೆ. ಅದೇ ಗುಂಪಿಗೆ ಸೇರಿದವನೂ ಕೂಡ ಚಂದ್ರಹಾಸ ಆದರೆ ಇಲ್ಲಿ ಬನಿಯಾನು ಚಂದ್ರಹಾಸನಿಗೆ ಮನವರಿಕೆಯಾಗುವಂತೆ ತಿಳಿ ಹೇಳುತ್ತಾನೆ. ಇಂದು ಹಣ ಸಂಪಾದನೆಯ ಉದ್ದೇಶದಿಂದ ಸರಕುಗಳನ್ನು ಸಂಗ್ರಹಿಸಿ, ಅವುಗಳಿಗೆ ಬೇಡಿಕೆ ಅಧಿಕವಾಗುವಂತೆ ಮಾಡಿ ನಂತರ ದುಪ್ಪಟ್ಟು ಬೆಲೆಗೆ ಮಾರುವ ಜನರನ್ನು ಕಾಣುತ್ತೇವೆ. ಹಿಂದೆ ಸಂತೋಷ್ ಇದೇ ಕೆಲಸ ಮಾಡಿ ಹಣ ಸಂಪಾದಿಸಿದ್ದ. ಶ್ರೀಮಂತನಾಗಿದ್ದ ಆದರೆ ಚಂದ್ರಹಾಸನ ಹೃದಯ ಶ್ರೀಮಂತಿಕೆ ಇಲ್ಲಿ ವಿಶೇಷ. ಇಂತಹ ವ್ಯಕ್ತಿತ್ವಕ್ಕೆ ವಿರೋಧಿಯಾಗಿ, ತನ್ನದೇ ವಿಶಿಷ್ಟವಾದ ವ್ಯಕ್ತಿತ್ವದಿಂದ ಗುರುತಿಸಿಕೊಂಡವರು ಈ ಬನಿಯಾ

ಹೀಗಾಗಿ ಚಂದ್ರಹಾಸನಿಗೂ ಹಣಕ್ಕಾಗಿ ಮಾರುವ ಸಮಯ ಇದಲ್ಲ ಎಂದು ಬುದ್ಧಿವಾದದ ಮಾತಿನೊಂದಿಗೆ ಅವನನ್ನು ತಿದ್ದುತ್ತಾನೆ. ಇದು ಆ ವ್ಯಕ್ತಿಯ ವಿಶಿಷ್ಟತೆಯಾಗಿದೆ.

ಜಯಂತ್ ಕಾಯ್ಕಿಣಿಯವರು ಪ್ರಮುಖ ಕತೆ 'ಚಾರ್ ಮಿನಾರ್' ಈ ಚಾರ್‌ಕುನಾರ್ ಕತೆಯಲ್ಲಿ ಸಿಗುವ ನಾಯಕ ನೈರುತ್ಯ ಇಂದಿನ ದಿನಗಳಲ್ಲಿ ಪ್ರತಿಯೊಬ್ಬರೂ ಹೆಚ್ಚಿನ ಸಂಬಳದ ಅಪೇಕ್ಷೆಯೊಂದಿಗೆ ತಮ್ಮ ಬದುಕನ್ನು ಹಸನಾಗಿಸಿಕೊಳ್ಳಲು ಪ್ರಯತ್ನಿಸುವ ಪ್ರಪಂಚ. ಹೆತ್ತ ತಂದೆ-ತಾಯಿಗೂ ತಮ್ಮ ಮಕ್ಕಳು ಚೆನ್ನಾಗಿ ಓದಿ, ಒಳ್ಳೆಯ ಉದ್ಯೋಗದಲ್ಲಿ ನಿಂತು, ಕೈ ತುಂಬ ಪಗಾರ ತೆಗೆದುಕೊಳ್ಳಲಿ ಎಂದು ಬಯಸುವವರೇ. ಆದರೆ ನೈರುತ್ಯ ಇದಕ್ಕೆ ತದ್ವಿರೋಧಿ. ಆತನ ವ್ಯಕ್ತಿತ್ವವೇ ಒಂದು ವಿಶಿಷ್ಟವಾದದ್ದು "ನೈರುತ್ಯ ಗಾಂವಕಾರ ಗೋಕರ್ಣ ಸೀಮೆಯ ರುದ್ರಪಾಯದವನು. ಗೋಕರ್ಣ, ಕುಮಟಾಗಳಲ್ಲಿ ಚೆನ್ನಾಗಿ ಓದಿ ಎಂಬತ್ತರ ದಶಕದಲ್ಲಿ ಆಣಂದಾನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೇಜ್‌ಮೆಂಟ್‌ನಿಂದ ಪದವಿ ಪಡೆದವನು. ತನ್ನ ಶಿಕ್ಷಣದಿಂದ ತನ್ನ ಸಮಾಜಕ್ಕೆ ಏನಾದರೂ ಉಪಯೋಗವಾಲೇಬೇಕು. ಅಂದರೇನೇ "ತನ್ನನ್ನು ಕಷ್ಟಪಟ್ಟು ಓದಿಸಿದ ಕೃಷಿಕ ತಂದೆ ತಾಯಿಗಳ ಶ್ರಮಕೆ, ವಿವಿಧ ನೆಲೆಗಳಿಂದ ಪಡೆದ ವಿವಿಧ ವಿದ್ಯಾರ್ಥಿ ವೇತನಕ್ಕೆ ತಾನು ಕಿಂಚಿತ್ತಾದರೂ ಅರ್ಹನಾದೇನು ಎಂದು ಹಂಬಲಿಸಿದವನು. ಅವನ ಸಹಪಾಠಿಗಳಲ್ಲಿ ಹೆಚ್ಚಿನವರು ಉಚ್ಚ ವ್ಯಾಸಂಗ, ಉಚ್ಚಹುದ್ದೆ ಅಂತ ವಿದೇಶಗಳಿಗೆ ಹೋದರೆ, ಕೆಲವರು ದೇಶದಲ್ಲೇ ಪ್ರತಿಷ್ಠಿತ ಕಂಪನಿಗಳನ್ನು, ಸೇರಿಕೊಂಡರು. ನೈರುತ್ಯ ಮಾತ್ರ ಸಮುದಾಯಕ್ಕೆ ಉಪಯುಕ್ತವಾದ ಕೆಲಸ ಅಥವಾ ಯೋಜನೆಗಳನ್ನು ಹುಡುಕಿಕೊಂಡು ಪೂನ, ಬೆಂಗಳೂರು, ವಿಜಾಪುರ, ಬೀದರ್, ಅಹಮದ್ ನಗರ ಅಲೆದನು. ಮಂಗಳೂರು ಸುತ್ತ-ಮುತ್ತಣ ಬೀಡಿ ಕಾರ್ಮಿಕರ ಬಗ್ಗೆ ಅಥವಾ ಈಚಲ ಕರಂಜಿಯ ಕೈಮಗ್ಗದ ಸೀರೆ ಕಾರ್ಮಿಕರ ಬಗ್ಗೆ ತುಂಬಾ ಕಳಕಳಿಯಿಂದ ಅಧ್ಯಯನಕ್ಕೆ ತೊಡಗಿದನು".[61] ಅಂದರೆ ಆತನಲ್ಲಿ ಪ್ರತಿಭೆಯಿದ್ದರೂ ಕೇವಲ ಹಣಸಂಪಾದನೆಯನ್ನೆ ಗುರಿಯಾಗಿ ಹೊಂದದೆ ಸಮಾಜಕ್ಕೆ ತನ್ನಿಂದ ಕಿಂಚಿತ್ತಾದರೂ ಸೇವೆ ಸಲ್ಲಿಸಲು ನಾ ಸಿದ್ಧ ಎಂಬ ಮನೋಭಾವವನ್ನು ಆತ ಹೊಂದಿದ್ದ. ಅಂದರೆ ಕೃಷಿಕರ ನೀಡಿದ ವಿದ್ಯಾರ್ಥಿ ವೇತನದ ಹಣ ಆತನಲ್ಲಿ ಬಹಳವಾದ ಪರಿಣಾಮವನ್ನು ಬೀರಿತ್ತು. ಈಗ ವಿದ್ಯಾರ್ಥಿವೇತನ ಎಷ್ಟು ಬಂದಿದೆ ಅದರಿಂದ ಏನು ಕೊಳ್ಳಬಹುದು ಎಂದು ಯೋಚಿಸುವ ಜನರೇ ಸಿಗುತ್ತಾರೇ ಹೊರತು ಅದರ ಮೂಲ ಎಲ್ಲಿಂದ ಬಂದಿದೆ. ಅದಕ್ಕೆ ತನ್ನಿಂದ ಏನಾದರೂ ಸೇವೆ ಸಲ್ಲಿಸ ಬಹುದೇ ಎಂದು ಯೋಚಿಸುವ ಮಂದಿ ಬೆರಳೆಣಿಕೆಯಷ್ಟು ಸಿಗುವುದು ಕಷ್ಟವೇ. ಆದರೆ ಇಂತಹ ಗುಣಲಕ್ಷಣಗಳನ್ನು ನೈರುತ್ಯ ಹೊಂದಿದ್ದ. ಹಾಗೆಯೇ ಜೀವನೋಪಾಯಕ್ಕಾಗಿ ಯಾರ ಕೈಕೆಳಗೂ ಅಡಿಯಾಳಾಗಿ ಪಗಾರಿಗೆ ಸಮಾಜಸೇವೆ ಮಾಡುವುದಿಲ್ಲ ಎನ್ನುವ ಆತನ ಶಪಥ ಸಣ್ಣಗೆ ಮುರಿದು, ಬೆಂಗಳೂರಿಗೆ ಹೋಗಿ ಅಲ್ಲಿನ ಬೀದಿ ಮಕ್ಕಳ ಪುನರ್ವಸತಿ

ಸಂಸ್ಥೆಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡ".[62] ಇಂಥ ಸಂಸ್ಥೆಗಳು ಮೇಲು ನೋಟಕ್ಕೆ ಚೆನ್ನಾಗಿ ಸೇವೆ ಸಲ್ಲಿಸುತ್ತಿವೆ ಎನಿಸಿದರೂ ಆಳವಾಗಿ ಅವು ತಮ್ಮ ತಮ್ಮಗಳ ಅಂದರೆ ಸಂಸ್ಥೆಯಲ್ಲಿರುವ ವ್ಯಕ್ತಿಗಳ ಬೆಳವಣಿಗೆಯ ಕಾರ್ಯಗಳು ಎಂದು ಈತನಿಗೆ ಅನಿಸುತ್ತಾ ಹೋಗುತ್ತದೆ. ಜೊತೆಗೆ ತನ್ನ ಗೆಳೆಯ ಹೇಮಚಂದ್ರನಿಂದ ಅದು ನಿಜವೇ ಎಂದು ಗೊತ್ತಾದಾಗ ಆ ಸಂಸ್ಥೆಯಿಂದ ಹೊರಗೆ ಬಂದು ಬಿಡುತ್ತಾನೆ ಒಂದು ಚಿನ್ನದ ತುಂಡು ಮಣ್ಣಿನಲ್ಲಿ ಬೆರೆತಿರುವಾಗ ಒಂದು ತುಕ್ಕು ಹಿಡಿದ ಕಬ್ಬಿಣದಂತೆ ಕಾಣುತ್ತಿರುತ್ತದೆ. ಆದರೆ ಅದನ್ನು ಚೆನ್ನಾಗಿ ಪರೀಕ್ಷೆಗೆ ಒಳಪಡಿಸಿದಾಗ ಮಾತ್ರ ಅದು ಸುವರ್ಣದ ತುಂಡು ಎಂದು ಅರಿವಿಗೆ ಬರುವುದು. ಅದೇ ರೀತಿಯಲ್ಲಿ ಅಲೆದಾಡಿದ ನೈರುತ್ಯನಿಗೆ ಕೊನೆಗೂ "ರೈಲು ಮಕ್ಕಳ ಲೋಕವನ್ನು ತಿಳಿಯುವ, ತಿಳಿದು ಅದನ್ನು ತುಸುವಾದರೂ ಹಸನುಗೊಳಿಸಲು ಯತ್ನಿಸುವ ಹೊಸ ಕೈಂಕರ್ಯ ಕೈಗೊಂಡು ಹಿಂದೂಪುರ, ತೋರಣಗಲ್ಲು, ಧರ್ಮಾವರಂ ಬಳ್ಳಾರಿ ಇತ್ಯಾದಿ ಊರುಗಳಲ್ಲಿ ಮನೆಬಿಟ್ಟು ಓಡಿಹೋದ ಮಕ್ಕಳ ಮಾಹಿತಿಗಳನ್ನು ಆಯಾ ಊರಿನ ಸ್ಟೇಷನ್‌ಗಳಿಂದ ಕಲೆಹಾಕುವುದು, ಮನೆಮಂದಿಯನ್ನು ಸಂಪರ್ಕಿಸುವುದು ಮತ್ತು ಇನ್ನೊಂದೆಡೆಯಿಂದ ರೈಲುಗಳಲ್ಲಿ, ಪ್ಲಾಟ್-ಪಾರ್ಮುಗಳಲ್ಲಿ ಸಿಕ್ಕಿದ ಹುಡುಗರು ಮನಗೆದ್ದು ಅವರನ್ನು ಮನೆ ತಲುಪಿಸುವುದು, ಹೀಗೆ ನೈರುತ್ಯನ ಕೆಲಸ ಶುರುವಾಯಿತು".[63] ಒಟ್ಟಾರೆಯಾಗಿ ಸಮಾಜದಿಂದ ಅನೂಕೂಲವನ್ನು ಪಡೆದ ನಾನು ಸಮಾಜಕ್ಕೆ ತನ್ನಿಂದ ಏನಾದರೊಂದು ಸಹಾಯ ಮಾಡಲೇಬೇಕೆಂದು ಹವಣಿಸುತ್ತಿದ್ದ ಅವನ ಮನಸ್ಸು ಈ ರೀತಿಯಲ್ಲಿ ತನ್ನ ಕೆಲಸವನ್ನು ಪ್ರಾರಂಭಿಸಿದ. ಇದರಿಂದ ತನಗೇನೂ ಯಾರಿಂದಲೂ ಆದಾಯ ಬರುವುದಿಲ್ಲ. ಆದರೆ ಮನಶಾಂತಿ ಸಿಗುತ್ತದೆ. ತಂದೆ-ಮಕ್ಕಳನ್ನು ಒಂದು ಮಾಡಿದ ನೆಮ್ಮದಿ ಈತನಿಗೆ ದೊರಕುತ್ತದೆ. ಈ ಒಂದು ಕಾರಣಕ್ಕಾಗಿಯೇ ವೃತ್ತಿಯನ್ನು ಆರಿಸಿಕೊಂಡ ನೈರುತ್ಯನಿಗೆ ಆತನ ಹೆಂಡತಿ ಪುನರ್ವಸು ಕೈ ಜೋಡಿಸುತ್ತಾಳೆ. ಒಟ್ಟಾರೆಯಾಗಿ ಹಣಸಂಪಾದನೆಯನ್ನೇ ಗುರಿಯನ್ನು ಹೊಂದಿ, ಆಸ್ತಿಯನ್ನು ಮನೆಯನ್ನು ಸಂಪಾದಿಸಬೇಕೆಂದು ಹಂಬಲದಿಂದ ಕೂಡಿರುವ ಜನಗಳ ಮಧ್ಯೆ ನೈರುತ್ಯ ಭಿನ್ನವಾಗಿ ಕಾಣುತ್ತಾನೆ. ಇದೇ ಆತನ ಒಂದು ವ್ಯಕ್ತಿವೈಶಿಷ್ಟವಾಗಿದೆ.

ಇಂತಹ ವಿಶಿಷ್ಟತೆಯಿಂದ ಕೂಡಿರುವ ಹಲವಾರು ಪಾತ್ರಗಳನ್ನು ಜಯಂತ್ ಕಾಯ್ಕಿನಿಯವರ ಕತೆಗಳಲ್ಲಿ ಕಾಣ ಬಹುದಾಗಿದೆ. ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಒಬ್ಬೊಬ್ಬ ಸಾಮಾನ್ಯ ವ್ಯಕ್ತಿಯು ಕುಶಲತೆಯಿಂದ ತನ್ನ ಬದುಕನ್ನು ಹೇಗೆ ನಿರ್ವಹಿಸಿಕೊಂಡು ಹೋಗುತ್ತಾನೆ ಎಂಬುದರ ಜೊತೆಗೆ ಅಂತಹವರೂ ಕೂಡ ಇತರರಿಗೆ ಸಹಾಯ ಮಾಡುವ ಮನೋವೃತ್ತಿಯನ್ನು ಹೊಂದಿರುತ್ತಾರೆಂದು ಕತೆಗಳಲ್ಲಿ ಅನಾವರಣಗೊಳಿಸಿದ್ದಾರೆ. ಇಷ್ಟು ಮಾತ್ರವಲ್ಲದೆ, ಟೀ ಮಾರುವ ಪೋಪಟ್ ಇರಬಹುದು ದಗಡೂ ಪರಬನ ಅಶ್ವಮೇಧದಲ್ಲಿ ಭಾನುಮತಿಯ ಅಪ್ಪ ಕುದುರೆಗಳ ಟಾಂಗಾಗಳನ್ನು ಹೊಂದಿ ಅದರ ಮೂಲಕ ಜೀವನ

ನಡೆಸುತ್ತಿದ್ದಾನೆ. ಹಾಗೆಯೇ ಸಿನಿಮಾ ಥೇಟರಿನಲ್ಲಿ ಬ್ಯಾಟರಿ ಬಿಡುವ ಕೆಲಸ ಹೀಗೆ ನಾನಾ ವಿವಿಧ ಕೆಲಸಗಳನ್ನು ಮಾಡಿಕೊಂಡು ಅದರಲ್ಲಿಯೇ ಜೀವನ ನಡೆಸುವ ವ್ಯಕ್ತಿಗಳ ವಿಶಿಷ್ಟತೆಯನ್ನು ಜಯಂತ್ ಕಾಯ್ಕಿಣಿಯವರು ತಮ್ಮ ಕತೆಗಳಲ್ಲಿ ಅನಾವರಣಗೊಳಿಸಿರುವುದನ್ನು ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಕೊನೆಟಿಪ್ಪಣಿಗಳು.

41. ಕಥಾನಾವರಣ–ಮಮತಾರಾವ್–ಪು.96
42. ಕಥಾನಾವರಣ–ಮಮತಾರಾವ್–ಪು.97
43. ಸಂತೆಯ ದಿನ, ಪು.380
44. ಸಂತೆಯ ದಿನ, ಜಯಂತ್ ಕಾಯ್ಕಿಣಿ ಕತೆಗಳು 2015, ಪುಟ ಸಂಖ್ಯೆ-386
45. ಸಂತೆಯ ದಿನ, ಜಯಂತ್ ಕಾಯ್ಕಿಣಿ ಕತೆಗಳು 2015, ಪುಟ ಸಂಖ್ಯೆ-387
46. ಸಂತೆಯ ದಿನ, ಜಯಂತ್ ಕಾಯ್ಕಿಣಿ ಕತೆಗಳು 2015, ಪುಟ ಸಂಖ್ಯೆ-388
47. ಸಂತೆಯ ದಿನ, ಜಯಂತ್ ಕಾಯ್ಕಿಣಿ ಕತೆಗಳು 2015, ಪುಟ ಸಂಖ್ಯೆ-389
48. ಬಣ್ಣದ ಕಾಲು. 2014, ಪುಟ ಸಂಖ್ಯೆ 13
49. ಬಣ್ಣದ ಕಾಲು. 2014, ಪುಟ ಸಂಖ್ಯೆ 16
50. ಬಣ್ಣದ ಕಾಲು. 2014, ಪುಟ ಸಂಖ್ಯೆ 16
51. ಬಣ್ಣದ ಕಾಲು. 2014, ಪುಟ ಸಂಖ್ಯೆ 17
52. ಬಣ್ಣದ ಕಾಲು. 2014, ಪುಟ ಸಂಖ್ಯೆ 21
53. ಬಣ್ಣದ ಕಾಲು. 2014, ಪುಟ ಸಂಖ್ಯೆ 8
54. ನೀರು, ಪುಟ ಸಂಖ್ಯೆ 44
55. ನೀರು, ಪುಟ ಸಂಖ್ಯೆ 59
56. ನೀರು, ಪುಟ ಸಂಖ್ಯೆ 51
57. ನೀರು, ಪುಟ ಸಂಖ್ಯೆ 53
58. ನೀರು, ಪುಟ ಸಂಖ್ಯೆ 51

59. ನೀರು, ಪುಟ ಸಂಖ್ಯೆ 53

60. ನೀರು, ಪುಟ ಸಂಖ್ಯೆ 54

61. ಚಾರ್‌ಮಿನಾರ್, ಪುಟ ಸಂಖ್ಯೆ 114

62. ಚಾರ್‌ಮಿನಾರ್, ಪುಟ ಸಂಖ್ಯೆ 115

63. ಚಾರ್‌ಮಿನಾರ್, ಪುಟ ಸಂಖ್ಯೆ 123

ಸ್ನೇಹಿತರು

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಕಂಡು ಬರುವ ಮತ್ತೊಂದು ವಿಶೇಷತೆ ಎಂದರೆ ಭಾವನಾತ್ಮಕತೆಯಿಂದ ಕೂಡಿದ ಸ್ನೇಹ. ಸ್ನೇಹಕ್ಕಾಗಿ ಏನನ್ನು ಬೇಕಾದರೂ ಅವರು ತ್ಯಾಗಮಾಡಲು ಸಿದ್ದರಿರುತ್ತಾರೆ. ಅಂತಹ ಕೆಲವೊಂದು ಪಾತ್ರಗಳನ್ನು ಕಾಯ್ಕಿಣಿಯವರ ಕೆಲವೊಂದು ಕತೆಗಳಲ್ಲಿ ಕಾಣಬಹುದಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ 'ಚಾರ್‌ಮಿನಾರ್' ಕತೆಯಲ್ಲಿ ಬರುವ ಹೇಮಚಂದ್ರ, ನೈರುತ್ಯನ ಪಾತ್ರವನ್ನು ಕಾಣಬಹುದು ಅದೇ ರೀತಿಯಾಗಿ ಅಭಿಸಾರ ಅಭಂಗರ ಪಾತ್ರವನ್ನು ಕಾಣಬಹುದು, ಇವರುಗಳು ಮಾತ್ರವಲ್ಲದೆ ಇನ್ನು ಕೆಲವು ಪಾತ್ರಗಳನ್ನು ಕಾಣಬಹುದಾದರೂ ಇವರು ಸ್ನೇಹಕ್ಕೆ ಬದಲಾಗಿ ಬೇರೆ, ಯಾವುದಕ್ಕೂ ಹೆಚ್ಚಿನ ಪ್ರಾಮುಖ್ಯವನ್ನು ಕೊಡುವುದಿಲ್ಲ ಎಂಬುದನ್ನು ಕಾಣುತ್ತೇವೆ. ಏಕೆಂದರೆ 'ಹಣವಿದ್ದರೆ ಮಾತ್ರವೇ ನಂಟ' ಎಂಬ ಮಾತಿರುವಾಗ, ತಮ್ಮ ಕಷ್ಟದ ಸುಖದ ಜೊತೆಗೆ ನೋವು ನಲಿವುಗಳಲ್ಲಿ ಭಾಗಿಯಾಗಲು ಸಿದ್ದರಿರುವವರು ಈ ಸ್ನೇಹತರೇ ಸ್ನೇಹ ಎಂಬುದು ಕೇವಲ ಎರಡು ಮಾತುಗಳಲ್ಲಿ ವರ್ಣಿಸುವುದು ಅಸಾಧ್ಯ. ಏಕೆಂದರೆ ಸತ್ತಾಗ ಸೂತಕ ತೆಗೆಯಲು ಬಂಧು-ಬಳಗ ಬೇಕೆ ಹೊರತು ನೆಮ್ಮದಿಯಾಗಿ ಬದುಕಲು ಬಂಧು-ಬಳಗ ಬಿಡುವುದಿಲ್ಲ. 'ಬದುಕಿದಾಗ ಬಡಿದುಕೊಳ್ಳುವ ಕೆಟ್ಟಾಗ ನಗುವ ಜನರೇ ನೆಂಟರಿಷ್ಟರು' ಆದರೆ ಸ್ನೇಹಿತರು ಬದುಕಿದಾಗ ಬೆನ್ನು ತಟ್ಟುವ ಕೆಟ್ಟಾಗ ಹೆಗಲುಕೊಟ್ಟು ಸಹಾಯ ಮಾಡುವವರೇ ಸ್ನೇಹಿತರು. ಇಂತಹ ಸ್ನೇಹದ ಬಗ್ಗೆ ವರ್ಣಿಸಲು ಹೊರಟರೆ ಪದಗಳೆ ವಿರಳ ಎನಿಸುತ್ತದೆ. ಏಕೆಂದರೆ ಬಂಧು-ಬಳಗವಿಲ್ಲದವರನ್ನು ನೀವು ಗುರುತಿಸಬಹುದು ಆದರೆ ಸ್ನೇಹಿತರೇ ಇಲ್ಲದವರನ್ನು ಗುರುತಿಸಲು ಸಾಧ್ಯವಿಲ್ಲ. ಹಾಗಾಗಿ ಸ್ನೇಹ ಎಂಬುದು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಆಳವಾಗಿ ಬೇರು ಬಿಟ್ಟ ಒಂದು ಸಂಜೀವಿನಿ ಎಂದೇ ಹೇಳಬಹುದು.

ಜಯಂತ್ ಕಾಯ್ಕಿಣಿಯವರ ಪ್ರಮುಖ ಕತೆಗಳಲ್ಲಿ ಒಂದಾದದ್ದು "ಚಾರ್‌ಮಿನಾರ್" ಈ ಕತೆಯಲ್ಲಿ ನೈರುತ್ಯ ಹಾಗೂ ಹೇಮಚಂದ್ರನ ಪಾತ್ರ ನಿಜವಾದ ಗೆಳೆಯರ ಮಿತ್ರತ್ವಕ್ಕೆ ಸಾಕ್ಷಿ ಎಂಬಂತೆ ಇದೆ. ಇಲ್ಲಿ ನೈರುತ್ಯ ಹಾಗೂ ಹೇಮಚಂದ್ರರು ಒಂದೇ ಕಡೆ ವಿದ್ಯಾಭ್ಯಾಸ ಮಾಡಿದರೂ ಹೇಮಚಂದ್ರ ಉಚ್ಚಶಿಕ್ಷಣವನ್ನು ಪಡೆದು ಉನ್ನತ ಉದ್ಯೋಗವರಸಿ ಹೊರ ರಾಷ್ಟ್ರಕ್ಕೆ ಹೋಗಿ ನೆಲೆ ನಿಲ್ಲುತ್ತಾನೆ. ಆದರೆ ಸಮಾಜ ಸೇವೆಯೇ ತನ್ನ ಗುರಿಯಾಗಿ ಹೊಂದಿದ ನೈರುತ್ಯ ಹೇಗಾದರೂ ಸಮಾಜಕ್ಕೆ ತನ್ನಿಂದ ಕಿರು ಕಾಣಿಕೆ ಸಲ್ಲುವಂತೆ ಮಾಡಬೇಕೆಂಬ ಉದ್ದೇಶವನ್ನು ಹೊಂದಿಯೇ ಬೆಂಗಳೂರಿನ ಪುನರ್ವಸತಿ ಕೇಂದ್ರಕ್ಕೆ ಸೇರುತ್ತಾನೆ. ಈ ವಿಷಯವನ್ನು

ಹೇಮಚಂದ್ರನಿಗೆ ತಿಳಿಸಿದಾಗ "ನೈರುತ್ಯ ಒಂದು ಕಡೆ ನೆಲೆಗೊಳ್ಳುತ್ತಿದ್ದಾನೆ ಎಂಬ ಖುಷಿಯಿಂದ ನಿಮ್ಮ ಸಂಸ್ಥೆಗೆ ಖಂಡಿತ ನನ್ನಿಂದ ಸಹಾಯ ಮಾಡುತ್ತೇನೆ. ನೀನಿದ್ದೀಯ ಅಂದ ಮೇಲೆ ಮುಗಿದೆ ಹೋಯಿತು. ನೀನು ನಿನ್ನ ಮುಖ್ಯಸ್ಥರ ಜತೆ ಬಾ ಗಳಿಸಿದ ಹಣವನ್ನು ಎಲ್ಲಿಡಬೇಕು ಏನು ಮಾಡಬೇಕು ಎಂದು ತೋಚದೆ ಕೆಲ ಕುಬೇರರು ಇಲ್ಲಿದ್ದಾರೆ. ಅವರ ಪರಿಚಯ ಮಾಡಿಸುತ್ತೇನೆ ಅವರಿಂದ ನಿಮಗೆ ಫಂಡಿಂಗ್ ಸಿಗಬಹುದು".[64] ಎಂದು ನೈರುತ್ಯನಿಗೆ ಪತ್ರದಲ್ಲಿ ಸವಿವರಗಳನ್ನು ಬರೆದ. ಅಂದರೆ ಗೆಳೆಯ ನೆಲೆನಿಂತನಲ್ಲ ಎಂದು ಸಂತೋಷ ಒಂದು ಕಡೆಗಿದ್ದರೆ ಮತ್ತೊಂದು ಕಡೆ ತಾನು ಸಹಾಯ ಮಾಡುವುದರಿಂದ ಅವನಿಗೆ ಆ ಸಂಸ್ಥೆಯಲ್ಲಿ ಒಳ್ಳೆಯ ಮಾನ್ಯತೆಯೂ ಸಿಗಬಹುದು ಜೊತೆಗೆ ಎಷ್ಟೋ ಅನಾಥ ಮಕ್ಕಳಿಗೆ ಅದು ಸಹಾಯಕವೂ ಆಗಬಹುದೆಂದು ಆಲೋಚಿಸುತ್ತಾನೆ. ಒಟ್ಟಾರೆಯಾಗಿ ಗೆಳೆಯನ ಒಂದು ಬೆಳವಣಿಗೆಗೆ ತನ್ನಿಂದ ಯಾವಾಗಲಾದರೂ ಸರಿಯೇ ಸಹಾಯ ಮಾಡಲು ಸಿದ್ದ ಎಂಬ ಮನಸ್ಥಿತಿ ಉಳ್ಳವನು ಈ ಹೇಮಚಂದ್ರ ತನ್ನ ಮದುವೆಯ ಆರತಕ್ಷತೆಯಸಮಯದಲ್ಲಿ ನಿಸ್ಸಂಕೋಚದಿಂದ ಈತನ ನೋಟ್‌ಬುಕ್‌ಗಳ ಕೃಪೆಯಿಂದ ನಾನು ಉತ್ತೀರ್ಣನಾಗಿದ್ದು ಎಂದು ಹೇಳಿಕೊಳ್ಳುತ್ತಾನೆ. ಎಷ್ಟೋ ಜನರು ಗೆಳೆಯನಿಂದ ಸಹಾಯವನ್ನು ಪಡೆದು ಅವರ ಒಂದು ಕೃಪೆಯಿಂದ ಬದುಕುತ್ತಿದ್ದರೂ ಅದರ ನೆನಪಿನ ಲವಲೇಷವೂ ಅವರಿಗೆ ಇರದೆ, ಎಲ್ಲಾ ನನ್ನಿಂದಲೇ ಎಂಬ ಅಹಂ ನಿಂದ ಮೆರೆಯುವ ಜನರನ್ನು ಕಾಣುತ್ತೇವೆ. ಆದರೆ ಹೇಮಚಂದ್ರ ಆ ರೀತಿಯ ಗುಂಪಿಗೆ ಸೇರದವನಾಗಿದ್ದಾನೆ ಇಷ್ಟು ಮಾತ್ರವಲದೆ "ನೈರುತ್ಯನ ಕೈಂಕರ್ಯಕ್ಕೆ ಅಲ್ಪಸ್ವಲ್ಪ ಸಹಾಯ ಒದಗುವಂತೆ ಮಾಡಿದ್ದ ಹೇಮಚಂದ್ರನಂತೂ ನೈರುತ್ಯನ ಮದವೆಯಿಂದ ಎಷ್ಟೊಂದು ಖುಷಿ ಆಗಿದ್ದೇನೆಂದರೆ ಅವನು ಈಸ್ಟ್ ಗೋದಾವರಿಯ ಜತೆ ಸ್ಕಾರ್‌ಪಿಯೋದಲ್ಲಿ ರಾಯಚೂರಿಗೆ ಬಂದು ನೈರುತ್ಯನ ಬಿಡಾರದಲ್ಲಿಯೇ ಒಂದು ದಿನ ಉಳಿದು, ಜ್ಯೂಸ್ ಸೆಟ್, ಡಬಲ್-ಬೆಡ್‌ಸಿಟ್ ,ನವಿಲಿನ ಚಿತ್ತಾರದ ಹೂದಾನಿ ಇಂಥದೆಲ್ಲ ಉಡುಗೊರೆಗಳನ್ನು ಕೊಟ್ಟು ಹೋದ".[65] ಹೇಮಚಂದ್ರ ಹೊರದೇಶದಲ್ಲಿ ಶ್ರೀಮಂತವಾಗಿದ್ದು ತನ್ನ ಗೆಳೆಯನ ಮದುವೆಗೆ ಅಲ್ಲಿಂದ ಬಂದನಲ್ಲದೆ ತನ್ನ ಹೆಂಡತಿಯನ್ನು ಜೊತೆಯಾಗಿ ಕರೆದುಕೊಂಡು ಬಂದಿದ್ದು ಮಾತ್ರವಲ್ಲದೆ ನೈರುತ್ಯನ ಮನೆಗೆ ಅವಶ್ಯಕವೆನಿಸಿದಂತಹ ಸಾಮಗ್ರಿ ಸಲಕರಣೆಗಳನ್ನು ನೈರುತ್ಯನಿಗೆ ಉಡುಗೊರೆಯಾಗಿ ನೀಡಿ ಹೋದ. ಆಧುನಿಕ ವಿದ್ಯಮಾನಗಳು ಬದಲಾದಂತೆ ತಮ್ಮ ರೂಢಿ ನಿಯಮ ಸಂಪ್ರದಾಯಗಳು ಬದಲಾಗುತ್ತಾ ಹೋಗುತ್ತವೆ. ಇಮೇಲ್ ಮೂಲಕ ಆಮಂತ್ರಣವನ್ನು ರವಾನಿಸುತ್ತಾರೆ. ಅದೇ ರೀತಿಯಾಗಿ ಅವರಿಗೆ ಅಭಿನಂದನೆ ಹಾಗೂ ಶುಭಾಶಯಗಳನ್ನು ಅವರೂ ಕೂಡ ಮೆಸೇಜ್ ಮೂಲಕವೇ ಮಾಡುತ್ತಾರೆ. ಆದರೆ ಹೇಮಚಂದ್ರ ಫಾರಿನ್ ಹೆಂಡತಿಯನ್ನು ತನ್ನ ಗೆಳೆಯನ ಮದುವೆಗೆ ಕರೆದುಕೊಂಡು ಬಂದನಲ್ಲದೆ ಅವರ ಮನೆಯಲ್ಲೆ ಉಳಿದುಕೊಳ್ಳುವ ಮನಸ್ಸು ಮಾಡಿದ್ದು ಆತನ ಘನತೆಯನ್ನು

ಹೆಚ್ಚಿಸುತ್ತದೆ. ನಗರಗಳಿಂದ ಹಳ್ಳಿಗಳಿಗೆ ಬರುವ ಮಂದಿ ಟಾಯ್ಲೆಟ್ ಇಲ್ಲ, ಶವರ್ ಇಲ್ಲ ಹೀಗೆ ನಾನಾ ಕಾರಣಗಳನ್ನು ನೀಡಿ ಹಳ್ಳಿಯ ಕಡೆಗೆ ಮುಖ ಮಾಡುವುದನ್ನೇ ನೀಡಿರುವಾಗ ಹೇಮಚಂದ್ರ ಹೊರದೇಶದಿಂದ ಬಂದು ಗೆಳೆಯನ ಸಂತೋಷದಲ್ಲಿ ಭಾಗಿಯಾಗುತ್ತಾನೆ. ಅಷ್ಟೇ ಅಲ್ಲದೆ ನೈರುತ್ಯ ಹೇಮಚಂದ್ರನ ಮನೆಗೆ ಹೋದಾಗ ಆತನನ್ನು ತನ್ನ ಆಫೀಸಿಗೆ ಬರ ಹೇಳುತ್ತಾನೆ. ಆಗ "ತನ್ನ ಆಫೀಸಿನಲ್ಲಿ ಎಲ್ಲರಿಗೂ ನೈರುತ್ಯನನ್ನು ಪರಿಚಯಿಸಿ ಅವನಿಗೆಂದು ತಂದಿಟ್ಟಿದ್ದ ವಸ್ತುಗಳನೆಲ್ಲಾ ತೋರಿಸಿ ನಿನಗೆ ಇದನ್ನೆಲ್ಲಾ ಒಯ್ಯುವುದು ಕಷ್ಟವಾಗಬಹುದು ಎಷ್ಟು ಸಾಧ್ಯವೋ ಅಷ್ಟು ಒಯ್ಯಿ, ಉಳಿದದ್ದು ಟ್ರಾನ್ಸ್‌ಪೋರ್ಟ್‌ನಲ್ಲಿ ಕಳಿಸಿಕೊಡುತ್ತೇನೆ".[66] ಎಂದ ಆ ಕ್ಷಣದಲ್ಲಿ ನೈರುತ್ಯನಿಗೆ ಹಾಸ್ಟೆಲ್ ಕಡೇ ದಿನ ಆ ತನಕ ತಾವಿಬ್ಬರೂ ಒಟ್ಟಿಗೆ ಕೊಂಡು ಒಟ್ಟಿಗೆ ಬಳಸುತ್ತಿದ್ದ ಕೆಲವು ವಸ್ತುಗಳನ್ನು ಚೀಟಿ ಎತ್ತಿ ಹಂಚಿಕೊಂಡಿದ್ದು ನೆನಪಾಯಿತು. "ನೀಲಿ ಬಣ್ಣದ ಬಕೆಟ್ಟು, ಹ್ಯಾಂಗರ್ ಹೇಮಚಂದ್ರನ ಪಾಲಿಗೆ ಬಂದರೆ ಪುಟಾಣಿ ಹಸಿರು ಬಣ್ಣದ ನೇಲ್‌ಕಟರ್ ಮತ್ತು ಗೋಲ ಶೇವಿಂಗ್ ಕನ್ನಡಿ ನೈರುತ್ಯನ ಪಾಲಿಗೆ ಬಂದಿತ್ತು".[67] ಇಲ್ಲಿ ಹೇಮಚಂದ್ರ ತನ್ನ ಆತ್ಮೀಯ ಗೆಳೆಯ ನೈರುತ್ಯನಿಗೆ ಆತನ ಕೆಲಸಕ್ಕೆ ಅನುಕೂಲವಾಗಲೆಂದು ಕೆಲವೊಂದು ಸಹಾಯವನ್ನು ಮಾಡುತ್ತಿದ್ದರೂ ನೈರುತ್ಯನಿಗೆ ತಮ್ಮ ಗೆಳೆತನದ ಸವಿ ನೆನಪು ಪುನರಾವರ್ತಿಸುತ್ತದೆ. ಅಲ್ಲಿ ಹೇಮಚಂದ್ರನಿಗೆ ಇಷ್ಟವಾಗಿದ್ದ ನೇಲ್ ಕಟರ್ ನೈರುತ್ಯನಿಗೆ ದೊರೆತಾಗಲೂ ಆತ ನೀನೆ ಇಟ್ಟುಕೋ ಎಂದು ಸಮಾಧಾನವನ್ನು ಹೊಂದುತ್ತಾನೆ. ಅಂದರೆ ಯಾರೂ ಕೂಡ ತಮಗೆ ದೊರೆತದ್ದರಿಂದಲೇ ಸಮಾದಾನ ಮಾಡಿಕೊಂಡಿರುವ ಮನಸ್ಸುಗಳನ್ನು ನಾವು ಕಾಣಲು ಸಾಧ್ಯವಿಲ್ಲ ಅದೇ ರೀತಿಯಾಗೇ ಹೇಳಿರುವುದು "ಇರುವುದೆಲ್ಲವ ಬಿಟ್ಟು ಇರದುದರ ಕಡೆಗೆ ತುಡಿವುದೇ ಜೀವನ" ಎಂದು ಹಾಗೆಯೇ ಹೇಮಚಂದ್ರ ಹಾಗೂ ನೈರುತ್ಯರು ಎಂತಹ ಗೆಳೆಯರೆಂದರೇ ಅವರಿಬ್ಬರ ನಡುವೆ ಯಾವುದೇ ರೀತಿಯ ಭೇದವನ್ನು ಕಾಣದೆ ಇಬ್ಬರೂ ಒಂದೇ ಸ್ನೇಹ ಜೀವಿಗಳು ಎಂಬುದನ್ನು ಹೇಮಚಂದ್ರನ ಮಾತುಗಳಲ್ಲಿ ಕಾಣಬಹುದಾಗಿದೆ. "ಸುಹಾರ್‌ರಾತ್ ಎಲ್ಲಿ ಮಾಡಿದಿರೋ ಮಾರಾಯಾ ಗೂಡ್ಸ್ ಬೋಗಿಯಲ್ಲೋ ಲೆದರ್ ಕ್ರಾಸಿಂಗಲ್ಲೋ? ಆಂತ ನಗುತ್ತಾ ಏನೇ ,ಅನ್ನು ಮಾರಾಯ ಮನೇಲಿ ಅಪ್ಪ ಇದ್ದಾಗ ಯಾಕೋ ರಾತ್ರೆ ನಮ್ಮ ರೂಮಿನ ಬೋಲ್ಟ್ ಹಾಕಿಕೊಳ್ಳುವಾಗ ಏನೋ ಫಾಜೀಲು ಅಳುಕು ಆಗುತ್ತದೆ. ಕೆಲವು ದೇವಸ್ಥಾನಗಳಲ್ಲಿ ದೇವರಿಗೆ ನೈವೆದ್ಯ ಕೊಡುವಾಗ ಅರ್ಚಕರು ಒಳಗಿಂದ ಗರ್ಭಗುಡಿಯ ಬಾಗಿಲು ಹಾಕಿಕೊಳ್ತಾರಲ್ಲ ಹಾಗೆ ತುಂಬಾ ಸಿಲ್ಲಿ ಕ್ಷಣ ಅದು ಮಜಾ ಅಂದರೆ ಅದಕ್ಕೂ ಸಿಲ್ಲಿ ಕ್ಷಣ ಇನ್ನಿಂಗ್ಸ್‌ನ ನಂತರ ಉಸಿರು ಬಿಗಿಹಿಡಿದು ಸದ್ದಿಲ್ಲದೆ ಮತ್ತೇ ಆ ಬೋಲ್ಟನ್ನು ತೆಗೆದು ಇಡುವುದು ಎಷ್ಟೇ ಪ್ರಯತ್ನ ಪಟ್ಟರೂ ಒಂದು ಅಡ್ನಾಡಿ ಸದ್ದು ಆಗೇ ಬಿಡುತ್ತದೆ ನೋಡು...... ಅಂದ ನಂತರ ಮತ್ತೇ ಖರೇ ಹೇಳಲೋ...... ಪ್ರಪಂಚದಲ್ಲೇ ಅತೀ ಸಿಲ್ಲಿ ಮತ್ತು ಇಡಿಯಾಟಿಕ್ ಕ್ಷಣ ಅಂದ್ರೆ ಕತ್ತಲಲ್ಲೇ ನಮ್ಮ ನಮ್ಮ

ಚಡ್ಡಿಗಳನ್ನು ಹುಡುಕಿ ಮಲಗಿದಲ್ಲೇ ಸೈಕಲ್ ಹೊಡೆಯುವಂತೆ ಅದರಲ್ಲಿ ಕಾಲು ತೂರಿಸಿ ಹಾಕಿಕೊಳ್ಳುವುದು ಎಂದು ಗಹಗಹಿಸಿ ನಕ್ಕ".[68] ಅಂದರೆ ಈ ಇಬ್ಬರ ಗೆಳೆಯರ ನಡುವೆ ವೈಯಕ್ತಿಕ ವಿಚಾರಗಳ ಮಟ್ಟಿಗೂ ಎಲ್ಲಾ ರೀತಿಯ ಕೊಳುಕೊಡುಗಳು ನಡೆಯುತ್ತಿದ್ದವು ಎಂಬುದನ್ನು ಅವರ ತಂದೆ ಬಿಟ್ಟು ಹೋದ ಒಂದು ಕ್ಷಣದ ದುಃಖವನ್ನು ಸಹ ನೈರುತ್ಯನಲ್ಲಿ ಹೇಳಿಕೊಂಡು ಅಳುವುದು ಒಂದು ರೀತಿಯಲ್ಲಿ ಮನ ಕಲಕಿದಂತೆ ಆಗುತ್ತದೆ ಒಟ್ಟಾರೆಯಾಗಿ ಈತ ಎಲವನ್ನು ಎಲ್ಲರಲ್ಲೂ ಹೆಚ್ಚಿಕೊಳ್ಳಲು ಸಾಧ್ಯವಿಲ್ಲ ಎಂದಾಗ ಒಬ್ಬ ಗೆಳೆಯನನ್ನು ಇಟ್ಟುಕೊಂಡಿರುತ್ತಾನೆ. ಅವನೇ ಅವನ ನೆಚ್ಚಿನ ಆತ್ಮೀಯ ಗೆಳೆಯ ಅವನ ಬಳಿ , ಎಲ್ಲವನ್ನು ಮುಚ್ಚು ಮರೆಯಿಲ್ಲದೆ ಹೇಳಿಕೊಳ್ಳುತ್ತಾನೆ.ಹಾಗಾಗಿ ನೈರುತ್ಯ ಮತ್ತು ಹೇಮಚಂದ್ರರ ಗೆಳತನ ಈ ರೀತಿಯ ಗೆಳೆತನವೇ ಆಗಿದೆ ಎಂಬುದನ್ನು ಕತೆಯನ್ನು ಓದಿದಾಗ ಅರಿವಿಗೆ ಬರುವುದರ ಜೊತೆಗೆ ಸ್ನೇಹದ ವೈಶಾಲ್ಯತೆ ಅರಿವಿಗೆ ಬರುತ್ತದೆ.

ಜಯಂತ್ ಕಾಯ್ಕಿಣಿಯವರ ಪ್ರಮುಖ ಕತೆಗಳಲ್ಲಿ ಒಂದಾದದ್ದು 'ಅಭಂಗ ಅಭಿಸಾರ' ಇವರಿಬ್ಬರೂ 'ಚೆಡ್ಡಿ ದೋಸ್ತ್' ಗೆಳೆತನ ಅಂದೆ "ಅಭಿಸಾರ ಮತ್ತು ಅಭಂಗ ಇಬ್ಬರೂ ಸಿಂಧ್‌ದುರ್ಗದ ಶಾಲೆಯಲ್ಲಿ ಎರಡು ವರ್ಷ ಒಟ್ಟಿಗೆ ಇದ್ದರು. ಆಗ ಪಣಜಿಯ ಆಕಾಶವಾಣಿಯ ಎಳೆಯರ ಕಾರ್ಯಕ್ರಮವೊಂದರಲ್ಲಿ ಚರ್ಚೆಯಲ್ಲಿ ಭಾಗವಹಿಸಲು ಸಾಖರಪಾಂಡೆ ಮಾಸ್ತರರ ಜತೆ ಅವರು ಬಂದಿದ್ದರು".[69] ಆಗ ಅವರಿಬ್ಬರಿಗೂ ಪಣಜಿಯ ಮೇಲೆ ಒಂದು ರೀತಿಯ ಮೋಹ ಬೆಳೆಯುತ್ತದೆ. ಅಭಂಗ ಸತ್ತರೆ ಇಲ್ಲೇ ಸಾಯಬೇಕು ಎಂದು ಪಣಜಿಯನ್ನು ಕುರಿತಂತೆ ಮಾತನಾಡುತ್ತಿರುತ್ತಾನೆ. ಏಕೆಂದರೆ ಮಕ್ಕಳು ತಮ್ಮ ಗೆಳೆಯ ಗೆಳತಿಯ ಜೊತೆಯಲ್ಲಿ ಒಂದು ಸ್ಥಳವನ್ನು ನೋಡಿದಾಗ ಅದರ ಬಗ್ಗೆ ಅತಿಯಾದ ಮೋಹ ಬೆಳೆಯುತ್ತದೆ. ಅಷ್ಟೆ ಅಲ್ಲದೆ ಆ ಜಾಗದಲ್ಲಿ ತಾವು ಓಡಾಡಿದ ತಾವು ತಿಂದ, ನೋಡಿದ ಪ್ರತಿಯೊಂದು ಕ್ಷಣಗಳೂ ಮಕ್ಕಳಲ್ಲಿ ಅಚ್ಚೊತ್ತಿದ್ದಂತೆ ಮನಸ್ಸಿನಲ್ಲಿ ಕುಳಿತಿರುತ್ತವೆ., ಅದೇ ರೀತಿಯಾಗಿ "ಪಣಜಿ ಅಂದಿನಿಂದ ಅಭಂಗ ಮತ್ತು ಅಭಿಸಾರರ ನಡುವಿನ ವಿಶೇಷ ದೋಸ್ತಿಯ ಗುಟ್ಟಾದ ಕೇಂದ್ರವಾಯಿತು. ಬಿಡುವಿನ ಸಮಯದಲ್ಲಿ ಶಾಲೆಯ ನಂತರ ಬರೆ ಪಣಜಿಯ ನೆನಪುಗಳನ್ನು ಮೆಲುಕು ಹಾಕಿ ಹಾಕಿ ಇಬ್ಬರೂ ಕಳೆದು ಹೋಗುತ್ತಿದ್ದರು. ಅದಕ್ಕೆ ತಮ್ಮದೇ ಪುಕ್ಕಗಳನ್ನು ಸೇರಿಸಿ ಹಾಕುತ್ತಿದ್ದರು. ಬಾರ್ಜಿನಲ್ಲಿ ಇಬ್ಬರೂ ಪ್ರಯಾಣ ಮಾಡಿದವರಂತೆ ಅನುಭವಿಸಿಕೊಂಡು ಇತರರಿಗೂ ಹೇಳತೊಡಗಿದರು ನಂತರ ಅದು ನಿಜವಾದ ಅನುಭವದಂತೆ ಒಂದು ಹೊಸ ನೆನಪಾಗಿ ಅದರಲ್ಲಿ ಬೆಳೆಯತೊಡಗಿತು".[70] ಏಕೆಂದರೆ ಒಂದು ಸ್ಥಳಕ್ಕೆ ಹೋದಾಗ ಒಬ್ಬನಿಗೆ ಮತ್ತೊಬ್ಬನೇ ಸಹಾಯಕ್ಕೆ ನಿಲ್ಲುವಂತಹವನು ಜೊತೆಗೆ ಬೇರೆಯವರ ಪರಿಚಯವಿಲ್ಲದ ಕಾರಣ ಅವರಿಬ್ಬರೂ ಬಹಳ ಆತ್ಮೀರಯರಾಗುತ್ತಾರೆ. ಆದೆ ಒಂದು ಪರಿಸ್ಥಿತಿ ಇಲ್ಲಿ ಅಭಂಗ ಅಧಿಕಾರರ ನಡುವೆಯೂ ಏರ್ಪಾಡಾಗುತ್ತದೆ.

ಜೊತೆಗೆ ಅಲ್ಲಿಂದ ಬಂದ ನಂತರದಲ್ಲೂ ಅಲ್ಲಿನ ವಿಚಾರಗಳನ್ನು ಗುನುಗುವ ಅವರು ಅದು ಅವರ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮವನ್ನು ಬೀರಿದೆ ಎಂಬುದನ್ನು ತಿಳಿಯ ಬೇಕಾಗುತ್ತದೆ. ಹಾಗಾಗಿ ಇತರರಿಗೂ ಅದರ ಬಗ್ಗೆ ಮಾಹಿತಿಯನ್ನು ನೀಡಿದರು ಅಷ್ಟರಲ್ಲಿ "ಎಕ್ಸೈಜ್ ಕೆಲಸದಲ್ಲಿದ್ದ ಅಭಿಸಾರನ ಅಪ್ಪನಿಗೆ ಬೇರೆಡೆಗೆ ವರ್ಗಾವಾಯಿತು ಆದರೆ ಆ ವೇಳೆಗಾಗಲೆ ಅಭಿಸಾರ ಹಾಗೂ ಅಭಂಗ ಸ್ನೇಹ ಗಾಢವಾಗಿ ಬೆಳೆದಿತ್ತು ಇನ್ನು ಮಂದೆ ಹೋಗುತ್ತೇವೆ ಇಲ್ಲವೋ ಎಂಬ ಒತ್ತಾಸೆಯಿಂದಲೇ ಅಭಂಗ ಪಣಜಿಗೆ ಹೋಗಿ ಬರೋಣಾ ಎಂದಾಗ ಅಭಿಸಾರ ಇನ್ನೂ ಸ್ವಲ್ಪ ದೊಡ್ಡವರಾದ ಮೇಲೆ ಹೋಗುವ".[71] ಎಂದು ತಿಳಿದವನಂತೆ ಉಪದೇಶ ನೀಡಿದ ಅಂದರೆ ಕೆಲ ಮಕ್ಕಳ ಮನಸ್ಸು ದಾರಿ ತಪ್ಪುವ ಹಂತದಲ್ಲಿದ್ದಾಗ ಅದನ್ನು ತಿದ್ದುವ ಒಂದು ಕಾರ್ಯವನ್ನು ಅದೇ ವಯಸ್ಸಿನ ಅವರ ಗೆಳೆಯರೇ ಮಾಡುತ್ತಾರೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ ಹಾಗೆಯೇ ಅಭಿಸಾರ ಬೆಳೆದು ಪುಣೆಯಲ್ಲಿ ಪೂರ್ಣಾವಧಿ ಯುವಕನಾಗಿ ಉದ್ಯೋಗಸ್ಥನಾದ ಆದರೆ ಅಭಂಗನೊಂದಿಗೆ ಕೆಲವು ವರ್ಷಗಳ ಕಾಲ ಮಾತ್ರ ಪತ್ರ ವ್ಯವಹರವಿದ್ದು ನಂತರ ಆತನ ಒಂದು ಸಂಪರ್ಕವೇ ಇಲ್ಲವಾಗುತ್ತದೆ. ಆದರೆ ಅಭಿಸಾರನ ಮದುವೆಯ ದಿನ ಇದ್ದಕ್ಕಿದ್ದ ಹಾಗೆ ಅಭಂಗ ಪ್ರತ್ಯಕ್ಷನಾಗುತ್ತಾನೆ. ಆದರೆ ಅಭಿಸಾರನಿಗೆ ಇದೊಂದು ಯಕ್ಷ ಪ್ರಶ್ನೆಯಂತೆ ಕಾಣುತ್ತದೆ. ಜೊತೆಗೆ ಇಬ್ಬರೂ ಪಣಜಿಯಲ್ಲಿ ನೆನಪಿಸಿಕೊಳ್ಳುತ್ತಾರೆ. ಅದೇ ವೇಳೆಗೆ ಅಭಿಸಾರನಿಗೆ "ವೈನಿಗೆ ಗುರ್ತು ಮಾಡಿಕೊಂಡು ಎಂದು ಹೇಳುತ್ತಾನೆ. ಅಲ್ಲದೆ ಪಣಜಿಗೆ ಹನಿಮೂನಿಗೆ ಬಾ ಆದರೆ ಕಾರೇರ್‌ಗಳು ಇಲ್ಲ. ಈಗ ಹನಿಮೂನಿಗೆ ಬಂದವರಿಗೆ ಕಾರೇರ್ ಯಾಕೆ ಬೇಕು ಹೇಳು? ಬೋಲ್ಟ್ ಚಿಲಕ ಕಿಟಕಿ ಬಾಗಿಲು ಸರೀ ಇರುವಂಥ ಕೋಣೆ ಸಿಕ್ಕರೆ ಸಾಕು ವೈನಿ ತುಸು ಜಾಸ್ತಿನೇ ಸಂಭಾವಿತ ಕುಳ ಇದು ಸಂಭಾಳಿಸಬೇಕು ನೀನೇನೆ"[72] ಎಂದು, ತಂದಿದ್ದ ಉಡುಗೊರೆಯನ್ನು ನೀಡಿ ಊಟಕ್ಕೆ ಧಾವಿಸಲು ಹೊರಟಾಗ ತಡೆದು ಫೋಟೋ ಕ್ಲಿಕ್ಕಿಸಿಕೊಳ್ಳುತ್ತಾನೆ. ಅಭಿಸಾರ ಅಂದರೆ ಗೆಳೆಯ ಎಲ್ಲೇ ಇದ್ದರೂ ಆತನ ಮನಸ್ಸು ಆ ಗೆಳೆಯ ಸುತ್ತ ಸುತ್ತುತ್ತಲೇ ಇರುತ್ತದೆ. ಅದಕ್ಕಾಗಿಯೇ ಕೆಲವೊಂದು ಸಂದರ್ಭಗಳಲ್ಲಿ ಅವರಿಗೆ ತಿಳಿಯದಂತೆಯೇ ಕಷ್ಟ ಸುಖಗಳಲ್ಲಿ ಸ್ನೇಹಿತರು ಹಾಜರಾಗಿರುತ್ತಾರೆ. ಹಾಗೆಯೇ ಅಭಿಸಾರನ ಮದುವೆಯನ್ನು ಅಭಂಗ ಪ್ರತ್ಯಕ್ಷನಾಗುತ್ತಾನೆ. ಅಭಿಸಾರನಿಗೆ ಆತನ ಹೆಂಡತಿ ಮೇಘನಾ "ಎಷ್ಟು ನಿಕಟ ದೋಸ್ತ್ ಅಂತೀಯಾ ಅವನ ಅಡ್ರೆಸ್ ಕೂಡ ಇರಲಿಲ್ಲ ನಿನ್ನ ಹತ್ರ ಈಗಲೂ ತಗೊಳ್ಳಲಿಲ್ಲವಲ್ಲ ನೀನು"[73] ಎಂದಾಗ ಆತನಿಗೆ ತನ್ನ ಗೆಳೆಯನನ್ನು ನೋಡಿದ ಖುಷಿಯಲ್ಲಿ ಇಲವೂ ಮರೆತಂತೆ ಆಗಿದೆ ಹಾಗೆಯೇ ಅವನು ಕೊಟ್ಟ ಉಡುಗೊರೆಯಲ್ಲಿ ಏನಾದರೂ ವಿಳಾಸ ಇರಬಹುದೇನೋ ನೋಡುವ ಎಂದಾಗಲೂ ಅದರಲ್ಲೂ ನಿರಾಸೆ ತುಂಬಿರುತ್ತದೆ ಏಕೆಂದರೆ ಸ್ನೇಹಕ್ಕೆ ನಿಯಮಿತವಾದ ಪರಿಮಿತಿ ಎಂಬುದು ಇಲ್ಲ ಆದರೆ ಅದನ್ನು ಹಾಗೆಯೇ ಉಳಿಸಿಕೊಳ್ಳುವುದು ಕೂಡ ಅಷ್ಟೇ ಕಷ್ಟದ ಸಂಗತಿ "ಒಂದು ಸಲ

ತನ್ನ ತಾಯಿಯನ್ನು ಕಳೆದುಕೊಂಡ ಆ ರಾತ್ರಿಯಲ್ಲಿ ಅಭಿಸಾರ ತನ್ನ ಸಂಬಂಧಿಕರಿಗೆ ಫೋನ್ ಮಾಡಲು ಟೆಲಿಫೋನ್ ಡೈರಿ ತೆಗೆದಾಗ ಈ ಅಪವೇಳೆಯಲ್ಲಿ ಅವರಿಗೆ ತೊಂದರೆ ಕೊಡುವಷ್ಟು ಹತ್ತಿರದವರೇ ಇವರೂ".[74] ಎಂಬ ಅನುಮಾನ ಬಂದು ಹಾಗೆ ಕಣ್ಣು ಮುಚ್ಚಿ ಕುಳಿತಾಗ ಅವನಿಗೆ ಅಭಂಗನ ನೆನಪಾಗುತ್ತದೆ. ಅಂದರೆ ಕಷ್ಟದ ಸಂದರ್ಭದಲ್ಲೂ ತನಗೆ ಹತ್ತಿರದವನು ಎನಿಸಿದರೆ ಅದು ತನ್ನ ಗೆಳೆಯನನ್ನು ಒಟ್ಟಾರೆ ಮತ್ಯಾರು ಅಲ್ಲ ಎಂಬ ಭಾವ ಅವನಿಗೆ ಉಂಟಾಗುತ್ತಾದೆ. ಏಕೆಂದರೆ ಸಂಬಂಧವೇನಿದ್ರೂ ಕಿತ್ತು ತಿನ್ನುವ ನಾಯಿಗಳಂತೆ ಸ್ನೇಹ ಎನ್ನಿದ್ದರೂ ಹಂಚಿ ತಿನ್ನುವ ಕಾಗೆಯಂತೆ ಅದಕ್ಕಾಗಿಯೇ ಅಲ್ಲಿ ಅಭಂಗನ ನೆನಪು ಕಾಡಿತೇ ಹೊರತು ಬೇರಾರದು ಅಲ್ಲ ಹಾಗೆಯೇ ಆತನ ನೆನಪಿಸಿಕೊಂಡಾಗಲೆಲ್ಲ ಅಭಿಸಾರನಿಗೆ "ನಮ್ಮಿಬ್ಬರ ಒಡನಾಟದ ವಿವರಗಳ ನೆಪದ ಆಚೆಯದು ಗೆಳೆತನ ಎಂದರೆ ಏನು? ದೋಸ್ತಿ ಅಂದರೆ ಏನು? ಎಂಬ ಸರಳ ಪ್ರಶ್ನೆಗೆ ಉತ್ತರ ಸಿಗದೆ ಚಡಪಡಿಸುವುದನ್ನು ಅಭಿಸಾರ ಈಗ ನಿಲ್ಲಿಸಿದ್ದಾನೆ. ಏಕೆಂದರೆ ದೋಸ್ತಿ ಅಥವಾ ಸಂಬಂಧ ಎಂದರೆ ಬರೇ ಒಂದು ವ್ಯಕ್ತಿ ಅಥವಾ ಪರಸ್ಪರ ಕೊಡುಕೊಳ್ಳುವ ವಹಿವಾಟು ಅಲ್ಲ ಮತ್ತು ಅದು ಕೇವಲ ಅವರಿಬ್ಬರಿಗೆ ಸಂಬಂಧ ಪಟ್ಟದ್ದು ಅಲ್ಲ ಒಬ್ಬ ವ್ಯಕ್ತಿ ನೆಪವಾಗಿ ಆ ಮೂಲಕ ತನ್ನನ್ನು ಬೆಳೆಸಬಲ್ಲ ಆವರಣವೊಂದು ಉದ್ದೀಪನಗೊಳ್ಳೋದು".[75] ಎಂದಾಗ ಆತನ ಮಾತಿನಲ್ಲಿರುವ ಸ್ನೇಹದ ತೀವ್ರತೆಯನ್ನು ತಿಳಿಯಬಹುದಾಗಿದೆ. ಮಾತ್ರವಲ್ಲದೆ ಒಬ್ಬ ವ್ಯಕ್ತಿಯ ಬೆಳವಣಿಗೆಗೆ ತಂದೆ ತಾಯಿ ಗುರುಗಳ ಪಾತ್ರದ ಜೊತೆಗೆ ಗೆಳೆಯರ ಪಾತ್ರವೂ ಮುಖ್ಯವಾಗಿರುತ್ತದೆ. ಅದನ್ನು ಒಬ್ಬರಿಂದಲೇ ಗುರುತಿಸುವವರೂ ಇದ್ದಾರೆ. ಹಾಗೆಯೇ ಕೆಲವು ಮಂದಿಯಿಂದಲೂ ಕಲಿತವರಿದ್ದಾರೆ ಅದರೆ ಇಲ್ಲಿ ಅಭಿಸಾರನಿಗೆ ಅಭಂಗನೆ ಒಂದು ರೀತಿಯ ಪ್ರಾಣದೋಸ್ತ್ ಎನಿಸುತ್ತಾನೆ. ಹಾಗೆಯೇ ಇದ್ದಕ್ಕಿದ್ದಂತೆ ಪೋನ್ ಮಾಡಿದ "ಅಭಂಗ ಅಭಿಸಾರನಿಗೆ ನಿನ್ನ ಹತ್ರ ಸ್ವಲ್ಪ ಮಾತಾಡಬೇಕು ಸ್ವಲ್ಪ ಪುರ್ತಿ ಮಾತು ಕೇಳು ಎಂದು ಹೇಳಿ ತಾನು ಬೇರೆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಅವರು 50,000 ರೂಗಳನ್ನು ಬ್ಯಾಂಕಿಗೆ ಕಟ್ಟು ಎಂದು ಕೊಟ್ಟಿದ್ದಾಗ ಬಸ್ಸಿನಲ್ಲೇ ಮರೆತು ಬಿಟ್ಟೆ ಆಗ ಅಭಿಸಾರ ಓ ಮೈ ಗಾಡ್ ಎಂದಾಗ ಸಂಪೂರ್ಣವಾಗಿ ಕೇಳು ನಾನೇನು ನಿನ್ನ ಬಳಿ ಹಣ ಕೇಳುತ್ತಿಲ್ಲ ಆದರೆ ನಾನು ಈ ವಿಷಯವನ್ನು ಆಫೀಸಿನಲ್ಲಿ ಹೇಳಿದರೆ ಯಾರೂ ನಂಬುತಾನೇ ಇಲ್ಲ ನೀನು ನಂಬುತ್ತೀಯಾ ಇಲ್ವೋ, ಎಸ್ ಆರ್ ನೋ ಬೇಗಹೇಳು ಎಂದಾಗ ಎಸ್ ನಂಬುತ್ತೇನೆ ಎಂದು ಹೇಳಿದಾಗ, ಅಭಂಗನಿಗೆ ಒಂದು ರೀತಿಯ ಶಕ್ತಿಯ ಸಂಚಲನವಾದಂತಾಗುತ್ತದೆ. ಅದಕ್ಕಾಗಿಯೇ ನೇರವಾಗಿಯೇ ಹೇಳುತ್ತೇನೆ ನೀನೇನಾದರೂ ನೋ ಎಂದು ಹೇಳಿದ್ದರೆ, ಹೀಗೆಯೇ ಮಾಂಡೋವಿಯೊಳಗೆ ಜಗಿದು ಬಿಡುತ್ತಿದ್ದೆ".[76] ಎಂದು ಹೇಳುತ್ತಾನೆ. ಅಂದರೆ ಸ್ನೇಹಿತರ ಮಾತುಗಳು ಎಷ್ಟರ ಮಟ್ಟಿಗೆ ಪರಿಣಾಮ ಬೀರುತ್ತವೆ ಎಂದರೆ ಅವರು ಬಂದೂ ಮಾತೂ ನಮ್ಮಲ್ಲಿ ಹೊಸ ಸಂಚಲನವನ್ನು ಮೂಡಿಸುತ್ತವೆ. ಸಾಧ್ಯವಾಗದು ಎಂದು

ಕೈ ಚೆಲ್ಲಿ ಕುಳಿತ ಕೆಲಸಗಳನ್ನು ಸಾಧ್ಯವಾಗುವಂತೆ ಮಾಡುವುದು ಸ್ನೇಹಿತರ ಸ್ಫೂರ್ತಿದಾಯಕ ನುಡಿಗಳೆ ಹೀಗಾಗಿ ಅಭಂಗನಿಗೆ ಅಭಿಸಾರ ಸ್ನೇಹಕ್ಕೆ ಜೀವಕ್ಕೆ ಒಂದು ರೀತಿಯ ಬೆಂಗಾವಲಿನಂತೆ ನಿಂತರೆ ಅಭಿಸಾರನಿಗೆ ಅಭಂಗ ತನ್ನ ಕಷ್ಟದ ಸಮಯದಲ್ಲಿ ಯಾರೂ ಇಲ್ಲದಿರೂವಾಗ ನನಗೊಬ್ಬ ಗೆಳೆಯನಿದ್ದಾನೆ ಅವನೇ ಅಭಂಗ ಎನ್ನುವ ರೀತಿಯಲ್ಲಿ ಒಬ್ಬೊರಿಗೊಬ್ಬರು ಆಸರೆಯಾಗುತ್ತಾರೆ. ಇವರಿಬ್ಬರಲ್ಲಿ ಇದು ಒಂದು ವಿಶಿಷ್ಟತೆಯೇ ಆಗಿದೆ ಎಂಬುದನ್ನು ಕಾಯ್ಕಿಣಿಯವರ ಕತೆಯಲ್ಲಿ ಗುರುತಿಸಬಹುದು. ಬಹಳ ಮುಖ್ಯವಾಗುವ ವಿಶಿಷ್ಟ ಪಾತ್ರ ಅಭಂಗ. ಈತನ ಸ್ನೇಹ ವ್ಯವಹಾರಿಕತೆಯನ್ನೂ ಮೀರಿದ ಭಾವನಾತ್ಮಕ ವಿಶಿಷ್ಟತೆಯಿಂದ ಕೂಡಿರುವುದು. ಅದರ ಅಗಾಧತೆಯೇ ಅನನ್ಯ.

ಜಯಂತ್ ಕಾಯ್ಕಿಣಿಯವರ ಪ್ರಮುಖ ಕತೆಗಳಲ್ಲಿ ಒಂದಾದದ್ದು 'ಅಂತಃಪುರದೊಳಗೆ'. ಈ ಕತೆಯಲ್ಲಿ ಹೆಣ್ಣು ಕೇವಲ ಜಗಳಗಂಟಿ ಮಾತ್ರವಲ್ಲ ಆಕೆ ತನ್ನಿಂದ ಬಯಸಿದವರಿಗೆ ಸಹಾಯವನ್ನು ಮಾಡುವುದಲ್ಲದೆ ಅವರನ್ನು ಕೊನೆಯವರೆಗೂ ಕಾಪಾಡುವ ಜವಾಬ್ದಾರಿಯನ್ನು ಹೊಂದಿರುತ್ತಾಳೆ ಎಂಬುದನ್ನು ಈ ಕತೆಯಿಂದ ತಿಳಿಯಬಹುದು. ತನ್ನ ಗಂಡನ ಸ್ನೇಹಿತೆಯಾಗಿ ಪರಿಚಿತೆಯಾದ, ಪಾರುಲ್ ಮೀರಾಳಿಗೇನೂ ಏನೂ ಸಂಬಂಧವಿಲ್ಲದೇ ಹೋದರೂ, ಗಂಡ ಅಂತರಿಕ್ಷನಿಂದ ಪರಿಚಿತಳಾಗಿರುತ್ತಾಳೆ. ಹಾಗೆಯೇ ಒಂದೆರಡು ಭಾರಿ ಗಂಡನೊಂದಿಗೆ ಪಾರುಲ್‌ನನ್ನು ಮೀರಾ ಕಂಡಿದ್ದರೂ ಏನೂ ಹೇಳಲು ಹೋಗದೆ ಸುಮ್ಮನಿರುತ್ತಾಳೆ ಅಷ್ಟೇ ಅಲ್ಲದೆ ಪಾರುಲ್ ಹೊರಗೆ ಹೋಗಲು ಕರೆದಾಗಲೆಲ್ಲ ಬರುತ್ತೇನೆಂದು ಆಶ್ವಾಸನೆಯನ್ನು ನೀಡಿ ಅದನ್ನು ಮರೆತಿರುತ್ತಾಳೆ ಮತ್ತೆ ಪಾರುಲ್ ಫೋನ್ ಮಾಡಿ ನೆನಪಿಸಿದಾಗಲೇ ಅದರ ಬಗ್ಗೆ ಯೋಚಿಸುವ ಕಡೆ ಮೀರಾ ಗಮನ ಹರಿಸುತ್ತಾಳೆ. ಹೀಗಿರುವಾಗ ಮನೆಯಿಂದ ಓಡಿಹೋದ ಅಂತಃರಿಕ್ಷ ಹಾಗೆಯೇ ಪಾರುಲಳನ್ನು ಪೈಲ್ಸ್ ಆಪರೇಷನ್‌ಗೆಂದು ಆಸ್ಪತ್ರೆಗೆ ಸೇರಿಸಿದಾಗ ಆತನೆಲ್ಲ ಹೋದನೆಂಬುದು ಇವರಿಬ್ಬರಿಗೂ ಅರಿವಿಗೆ ಬರುವುದಿಲ್ಲ ಜೊತೆಗೆ ಮೀರಾ ಪಾರುಲಳನ್ನು ನೋಡಲು ಆಸ್ಪತ್ರೆಗೆ ಹೋದಾಗ ಪಾರುಲ್ ತಾನೇನೂ ತಿನ್ನುವಂತಿಲ್ಲ ನೀನೆ ಹಣ್ಣುಗಳನ್ನು ತಿನ್ನು ಎನ್ನುವ ರೀತಿಯಲ್ಲಿ ಆಗ್ರಹ ಪಡಿಸುತ್ತಾಳೆ. ಹಾಗೆಯೇ ಮನೆಗೆ ಬಂದ ನಂತರ ಅಲ್ಲಿ ಪಾರುಲ್ "ಅವಳು ನನ್ನ ಸೋದರಿ ಅವಳು ಭಾಭೀ".[77] ಎಂದೆಲ್ಲ ಹೇಳಿದರೆ ಇತ್ತ ಮೀರಾ ಈಕೆಯನ್ನು ನೋಡಿಕೊಳ್ಳಲು ಒಂದುವಾರದ ರಜೆಯನ್ನು ಹಾಕಿ ಆಕೆಯನ್ನು ನೋಡಿಕೊಂಡಳಲ್ಲದೆ, ಪಾರುಲಳನ್ನು ನರ್ಸಿಂಗ್ ಹೋಂ ನಿಂದ ನೇರವಾಗಿ ಮನೆಗೆ ಕರೆದುಕೊಂಡು ಬಿಟ್ಟಳು ಅಂದರೆ ಸಹೋದರಿಯರು ಸಹ ಹೊಂದಾಣಿಕೆ ಮಾಡಿ ಕೊಂಡು ಜೊತೆಯಲ್ಲಿ ಹೋಗಲು ನಿರಾಕರಿಸುವ ಇಂತಹ ದಿನಗಳಲ್ಲಿ ಮೀರಾ ತನ್ನ ಗಂಡನ ಗೆಳತಿಯಾದ ಮೀರಾ ತನ್ನ ಗಂಡನ ಗೆಳತಿಯಾದ ಪಾರುಲಳ ಸೇವೆಗೆ ನಿಲ್ಲುತ್ತಾಳೆ ಹಿರಿಯರು 'ನೂರು ಮೀಸೆ ಕೂಡಿದರೂ ಎರಡು ಜಡೆ ಸೇರಲಾರವು' ಎಂದು ಹೇಳಿದ್ದಾರೆ. ಆದರೆ ಈ ಮಾತಿಗೆ

ವಿರೋಧಿ ಎಂಬಂತೆ ಇಲ್ಲಿ ಪಾರುಲಳನ್ನು ಮೀರಾ ಬಹಳ ಪ್ರೀತಿಯಿಂದ ಕಾಣುತ್ತಾಳೆ ಅಂದರೆ ಇದು ಸ್ನೇಹಕ್ಕೆ ಮೂಲಕ ಸಾಕ್ಷಿಯಾಗುತ್ತದೇ ಹೊರತು ಬೇರೇನೂ ಅಲ್ಲ ಅದೇ ರೀತಿಯಾಗಿ ಪಾರುಲ್ "ಮೀರಾಳ ಬ್ಲೌಸುಗಳಿಗೆ ಇಸ್ತ್ರಿ ಹಾಕುವಳು ಬಟ್ಟೆ ಹೊಲಿಯುವಳು ಸಂಜೆ ಒಬ್ಬರಿನ್ನೊಬ್ಬರ ಉಡುಪು ತೊಟ್ಟು ಹೊರಗೆ ಹೋಗುವರು ಮುಖ್ಯ ಗೇಟಿನ ಬಳಿ ಅರೆ ನಿಲ್ಲು ಎಂದು ಒಬ್ಬಳು ಇನ್ನೊಬ್ಬಳನ್ನು ನಿಲ್ಲಿಸಿ ಪೌಡರು ಒರೆಸುವಳು. ಲಂಗ ಕಾಣದಂತೆ ಸೀರೆಯ ನೆರಿಗೆ ಎಳೆದು ಸರಿಪಡಿಸುವಳು ಒಟ್ಟಿಗೆ ಬ್ಯೂಟಿಪಾರ್ಲರಿಗೆ ಹೋಗಿ ಬರುವರು."[78] ಹೀಗೆ ಇವೆಲ್ಲ ಕೈಂಕರ್ಯಗಳನ್ನು ಕಂಡಾಗ ಅಕ್ಕ-ತಂಗಿ ಸವತಿಯರು ಎಂಬ ಪ್ರಶ್ನೆಗಿಂತ ಅವರಿಬ್ಬರೂ ಅನೋನ್ಯ ಗೆಳತಿಯರ ಸಾಲಿಗೆ ನಿಲ್ಲುವರೇ ಹೊರತು ಬೇರೆ ಯಾವುದೇ ಸಂಬಂಧ ಅವರನ್ನು ಹತ್ತಿರಕ್ಕು ಸೇರಿಸುತ್ತಿರಲಿಲ್ಲ ಅಷ್ಟೇ ಅಲ್ಲದೆ ಪಾರುಲ್ ಒಮ್ಮೊಮ್ಮೆ ಬಿಕ್ಕಿ ಬಿಕ್ಕಿ ಅತ್ತಾಗ ಮೀರಾ ಅವಳ ತಲೆ ನೇವರಿಸಿ "ನನ್ನಿಂದೇನಾದರೂ ಬೇಸರವಾಯಿತೆ ಮನೆ ಮಂದಿ ನೆನಪಾಯಿತೆ" ಎಂದು ವಿಚಾರಿಸುವಳು. ಇದು ಆತ್ಮೀಯತೆ ಇರುವಲ್ಲಿ ಮಾತ್ರ ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ನಮ್ಮ ಆತ್ಮೀಯರಿಗೆ ಹೇಗೆ ಸ್ವಲ್ಪ ನೋವಾದರೂ ನಾವು ಸಹಿಸುವುದಿಲ್ಲವೋ ಅದೇ ರೀತಿ ಅಲ್ಲಿ ಮೀರಾ "ಆಕೆಯ ಬೆನ್ನನ್ನು ನೇವರಿಸಿ ಸಂತೈಸುವಳು ಇಂತಹ ನಿಷ್ಕಲ್ಮಶವಾದ ಸ್ನೇಹಕ್ಕೆ ದೇವರೇ ಸಾಕ್ಷಿ ಏಕೆಂದರೆ ಇಬ್ಬರಿಗೂ ನನ್ನವರೆಂಬುವರು ಯಾರೂ ಇಲ್ಲದಿರುವಾಗ ಅವಳಿಗೆ ಇವಳು ಇವಳಿಗೆ ಅವಳು ನೆರವಾಗಿ ತನ್ನ ಕಷ್ಟ ಸುಖಗಳನ್ನು ಒಂದಾಗಿ ಜೀವನವನ್ನು ಕಳೆಯಲು ಹೊರಟಿದ್ದರ ಮಧ್ಯೆ ಅಂತರಿಕ್ಷನ ಪ್ರವೇಶವಾಗಿ, ಮಧ್ಯರಾತ್ರಿಯಲ್ಲಿ ದೆವ್ವದಂತೆ ನಿಂತಿರುತ್ತಾನೆ. ಆಗ ಇವನನ್ನು ಕಂಡು ಇಬ್ಬರೂ ಕಳ್ಳ ಕಳ್ಳ ಎಂದು ಕಿರುಚಿದಾಕ್ಷಣ ಆತ ಚೆ...ಚೆ...ಚೆ ಎಂದು ಹೆದರಿ ಓಡಿ ಹೋಗುತ್ತಾನೆ. ಆಗ "ಧಪಧಪ ಏದುರಿಸಿರಿನಲ್ಲಿ ಕೂಗಿಕೊಂಡು ಇಬ್ಬರೂ ಎಲ್ಲ ಕಡೆ ಲೈಟು ಹಚ್ಚಿಕೊಂಡು ಕೂತರು ಮೀರಾ ಪಾರುಲ್ ಹೆದರಿದೆಯೇನೆ ಹೆದರಬೇಡ ನಾನಿದ್ದೇನೆ ಎಂದಳು ನಡುಗುವ ಕೈಗಳಲ್ಲಿ ಬಿಸಿಬಿಸಿ ಚಹಾ ಮಾಡಿ ತಂದಳು".[79] ಅಂದರೆ ಭಯ ಎಂಬುದು ಇಬ್ಬರಲ್ಲೂ ಆವರಿಸಿದ್ದರೂ ಕೂಡ ಯಾರೋಬ್ಬರೂ ಒಬ್ಬರಿಗೊಬ್ಬರು ತೋರ್ಪಡಿಸದೆ ಒಬ್ಬರನ್ನೊಬ್ಬರು ಸಂತೈಸುವ ಗುಣವನ್ನು ಕಾಣುತ್ತೇವೆ. ಏಕೆಂದರೆ ಗೆಳತನಕ್ಕೆ ಗೆಳೆತನವೇ ಸಾಟಿ ಇಲ್ಲಿ ಸಂಬಂಧವೆಂಬುದರ ಪರಿಧಿಯನ್ನು ಮೀರಿ ಬೆಳದಿರುವುದು ಸ್ನೇಹ ಆ ಸ್ನೇಹದ ತುತ್ತಿನಲ್ಲಿ ಪ್ರತಿಯೊಂದು ಅಗುಳು ಪ್ರೀತಿ ವಿಶ್ವಾಸ ನಂಬಿಕೆ ಅಭಯ ಇಂತಹ ಅಮೂಲ್ಯ ಗುಣಗಳನ್ನು ಹೊಂದಿರುತ್ತದೆ. ಇಂತಹ ಸ್ನೇಹದ ಪರಾಕಾಷ್ಟತೆಯಲ್ಲಿ ಇದ್ದವರು ಮೀರಾ ಹಾಗೂ ಪಾರುಲ್ ಹಾಗಾಗಿ ಇವರಿಬ್ಬರ ಪಾತ್ರಗಳು ಸ್ನೇಹದ ವಿಶಿಷ್ಟತೆಯನ್ನು ಅನಾವರಣಗೊಳಿಸುವ ಪ್ರಮುಖ ಪಾತ್ರಗಳೇ ಆಗಿವೆ. ಮಾತ್ರವಲ್ಲದೆ ಕಾಯ್ಕಿಣಿಯವರು ಇಂತಹ ಪಾತ್ರಗಳ ಮೂಲಕ ಸ್ನೇಹದ ಪರಾಕಷ್ಟತೆಯನ್ನು ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆಂಬುನ್ನು ಇವರ ಹಲವಾರು ಕತೆಗಳು ಅನಾವರಣಗೊಳಿಸುತ್ತವೆ.

ಸ್ನೇಹವೆಂಬುದು ಸಂಜೀವಿನಿ ಇದ್ದಂತೆ. ಎಂತಹ ವ್ಯಕ್ತಿಗೂ ಕೂಡ ಸ್ನೇಹದಿಂದಲೇ ಶಾಂತಿ ನೆಮ್ಮದಿಯನ್ನು ಕಾಣಲೆತ್ನಿಸುತ್ತಾನೆ. ಏಕೆಂದರೆ ಮಾನವ ಎಂದರೆ ಅವನೊಬ್ಬ ಸ್ನೇಹ ಜೀವಿ ಹಾಗೂ ಸಂಘ ಜೀವಿ ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ 'ಮಧುಬಾಲ' ಕತೆಯಲ್ಲಿ ಬರುವ ಕಾಂಟಾಲಗಾ ಕಾಮಿನಿ, ಮಧುಬಾಲ ಹಾಗೂ ಮಾಯಾತ್ರಿಪಾಠಿಯ ಸ್ನೇಹವನ್ನು ಕಾಣಬಹುದು. ಕಾಮಿನಿ ಮಧುಬಾಲಾಳ ಆಸೆಯನ್ನು ಈಡೇರಿಸುವಂತೆ ಏಕಂತ್‌ಭಾವೆಯನ್ನು ಕೇಳಿಕೊಳ್ಳುತ್ತಾಳೆ ಅದೇ ರೀತಿಯಾಗಿ ಮಧುಬಾಲ ತನ್ನ ಗೆಳತಿ ಮಾಯಾತ್ರಿಪಾಠಿಯ ಕಳೆದು ಹೋದ ತಾಯಿಯನ್ನು ಹುಡುಕುವ ಕಾರ್ಯದಲ್ಲಿ ಮುಂದುವರೆದಿರುತ್ತಾಳೆ. ಇದು ಅವರಲ್ಲಿರುವ ಸ್ನೇಹದ ತೀವ್ರತೆಯನ್ನು ತೋರಿಸುತ್ತದೆ. ಹಾಗೆಯೇ 'ಪಾರ್ಟ್‌ನರ್' ಕತೆಯಲ್ಲಿ ಬರುವ ರೂಪಕ ಹಾಗೂ ಪಾರ್ಟ್‌ನರ್ ಒಂದೇ ಕೋಣೆಯಲ್ಲಿ ಇದ್ದರೂ ಪಾರ್ಟನರ್‌ನಲ್ಲಾದ ಬದಲಾವಣೆಗಳು ರೂಪಕದಿಂದ ಒಂದು ರೀತಿಯ ಬೇಧವನ್ನು ಉಂಟುಮಾಡಿದರೂ ಆತನು ಅನಾರೋಗ್ಯದಿಂದ ಒದ್ದಾಡುವಾಗ ಅಲ್ಲೆ ರೂಪಕನೇ ಬೇಕಾಗುತ್ತದೆ. ಕೊನೆಗೆ ಆಪರೇಷನ್ ಸಮಯದಲ್ಲೂ ಸ್ನೇಹಿತನ ಸಹಾಯವೇ ಬೇಕಾಗುತ್ತದೆಯೇ ಹೊರತು ಬೇರಾರೂ ಅಲ್ಲಿ ಸುಳಿಯುವುದಿಲ್ಲ. ಹೀಗೆ ಒಟ್ಟಾರೆಯಾಗಿ ಸ್ನೇಹದ ಸೇತುವನ್ನು ಕಾಯ್ಕಿಣಿಯವರ ಹಲವಾರು ಕತೆಗಳಲ್ಲಿ ಗುರುತಿಸಿದ್ದೇವೆ. ಅವುಗಳಲ್ಲಿ ಮುಖ್ಯವಾದ ಕೆಲವೊಂದು ಕತೆಗಳ ಸ್ನೇಹ ಪರತೆಯ ಎಳೆಯನ್ನು ತೆಗೆದು ನಾನಿಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಿದ್ದೇನೆ. ಹೇಮಚಂದ್ರ, ನೈರುತ್ಯ, ಅಭಿಸಾರ, ಅಭಂಗ ಹಾಗೂ ಮೀರಾ–ಪಾರೂಲ್ ಮುಂತಾದ ಪಾತ್ರಗಳು ಇಂತಹ ಸ್ನೇಹದ ಪರಾಕಷ್ಠತೆಯನ್ನು ತಿಳಿಸುವುದರ ಜೊತೆಗೆ ಪ್ರತಿಯೊಬ್ಬರಿಗೂ ಇಂತಹ ಒಬ್ಬ ಗೆಳೆಯರು ಬೇಕೇ ಬೇಕು ಎನಿಸುವಷ್ಟರ ಮಟ್ಟಿಗೆ ಕಾಯ್ಕಿಣಿಯವರು ತಮ್ಮ ಕತೆಗಳಲ್ಲಿ ಸ್ನೇಹದ ವಿಶಿಷ್ಟತೆಯನ್ನು ಅನಾವರಣಗೊಳಿಸಿದ್ದಾರೆ.

ಕೊನೆಟಿಪ್ಪಣಿಗಳು.

64. ಚಾರ್‌ಮಿನಾರ್, ಪುಟ ಸಂಖ್ಯೆ 116
65. ಚಾರ್‌ಮಿನಾರ್, ಪುಟ ಸಂಖ್ಯೆ 126
66. ಚಾರ್‌ಮಿನಾರ್, ಪುಟ ಸಂಖ್ಯೆ 126
67. ಚಾರ್‌ಮಿನಾರ್, ಪುಟ ಸಂಖ್ಯೆ 134
68. ಚಾರ್‌ಮಿನಾರ್, ಪುಟ ಸಂಖ್ಯೆ 127

69. ಅಭಂಗ ಅಭಿಸಾರ, ಪುಟ ಸಂಖ್ಯೆ 32

70. ಅಭಂಗ ಅಭಿಸಾರ, ಪುಟ ಸಂಖ್ಯೆ 33

71. ಅಭಂಗ ಅಭಿಸಾರ, ಪುಟ ಸಂಖ್ಯೆ 34

72. ಅಭಂಗ ಅಭಿಸಾರ, ಪುಟ ಸಂಖ್ಯೆ 36

73. ಅಭಂಗ ಅಭಿಸಾರ, ಪುಟ ಸಂಖ್ಯೆ 57

74. ಅಭಂಗ ಅಭಿಸಾರ, ಪುಟ ಸಂಖ್ಯೆ 38

75. ಅಭಂಗ ಅಭಿಸಾರ, ಪುಟ ಸಂಖ್ಯೆ 40

76. ಅಭಂಗ ಅಭಿಸಾರ, ಪುಟ ಸಂಖ್ಯೆ 45

77. ಅಂತಃಪುರದೊಳಗೆ, ಪುಟ ಸಂಖ್ಯೆ 310

78. ಅಂತಃಪುರದೊಳಗೆ, ಪುಟ ಸಂಖ್ಯೆ 311

79. ಅಂತಃಪುರದೊಳಗೆ, ಪುಟ ಸಂಖ್ಯೆ 312

ಮಕ್ಕಳ ವಿಶಿಷ್ಟತೆ

ಪ್ರತಿಯೊಬ್ಬರ ತಂದೆ ತಾಯಿಗೂ ತಮ್ಮ ಮಕ್ಕಳು ಇದೇ ರೀತಿ ಬದುಕ ಬೇಕು ಎಂಬ ಆಸೆ ಇದ್ದೇ ಇರುತ್ತದೆ. ಕೆಲವೊಂದು ಸಿದ್ಧ ಮಾದರಿಗಳನ್ನಿಟ್ಟುಕೊಂಡು ಅದನ್ನೇ ಅಳವಡಿಸಿಕೊಳ್ಳುವ ಪ್ರಯತ್ನವಿರುತ್ತದೆ. ಆದರೆ ಕೆಲವು ಮಕ್ಕಳಿಗೆ ಅವರದ್ದೇ ಆದ ವಿಶಿಷ್ಟ ಪ್ರತಿಭೆ ಇರುತ್ತದೆ. ತಂದೆ ತಾಯಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಅವರು ಆ ಮೂಲಕ ಉದ್ಯೋಗವನ್ನು ಗಿಟ್ಟಿಸಿಕೊಂಡು ಬದುಕ ಬೇಕು ಎಂದು ಹಂಬಲಿಸುವುದು ಸಹಜವಾಗಿದೆ. ಆದರೆ ಕೆಲವು ಮಕ್ಕಳು ವಿದ್ಯೆಯಲ್ಲಿ ಮುಂದಿದ್ದರೆ, ಅದರ ಮೂಲಕ ಅವರು ಕೆಲಸವನ್ನು ಗಿಟ್ಟಿಸಿಕೊಳ್ಳುತ್ತಾರೆ. ಆದರೆ ಕೆಲವರಿಗೆ ಶಾಲಾ ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ತೀರ ಕಡಿಮೆ. ಬೇರೆ ಇತರ ಕಲೆಗಳ ಬಗ್ಗೆ ಆಸಕ್ತಿ ಹೆಚ್ಚು. ಇನ್ನು ಕೆಲವರಿಗೆ ಯಾವುದೋ ವ್ಯಾಪಾರದ ಬಗ್ಗೆಯೂ ಆಸಕ್ತಿಯಿಲ್ಲದೆ, ಸುಮ್ಮನೆ ಚೇಷ್ಟೆ ಮಾಡುವ ಗುಣವನ್ನು ಹೊಂದಿರುತ್ತಾರೆ. ಆದರೆ ಅವರನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಿದರೆ, ಅವರಿಗೆ ಸಾಂಪ್ರದಾಯಿಕ ಶಿಕ್ಷಣದ ಬಗ್ಗೆ ಆಸಕ್ತಿಯಿಲ್ಲ. ಹಾಗಿದ್ದಾಗ ಅಂತಹ ಮಕ್ಕಳನ್ನು ಬೇರೆ ಯಾವ ರೀತಿಯ ತರಬೇತಿ ಕೊಡಿಸಬಹುದು ಎಂಬುದರ ಬಗ್ಗೆ ತಂದೆ ತಾಯಿಗಳು ಗಮನ ಹರಿಸಿದಾಗ ಅವರು ಸಹ ಒಳ್ಳೆಯ ಬದುಕನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಕಾಯ್ಕಿಣಿಯವರ ಕತೆಗಳಲ್ಲಿ ಕಾಣಬಹುದು. ಉದಾ : 'ಬಣ್ಣದ ಕಾಲು' ಕತೆಯಲ್ಲಿ ಬರುವ ಚಂದುವಿನ ಪಾತ್ರ 'ಚಂದು' ತಂದೆಯ ಹಿಂದೆ ಅನಿವಾರ್ಯವಾಗಿ ಹೋಗುವಾಗಲೂ ಆತ ಬಾಂಬೆಯ ಬದುಕಿನ ಹಲವಾರು ಮುಖಗಳನ್ನು ನೋಡುತ್ತಿರುತ್ತಾನೆ. ಅವರೂ ಕೂಡ ಬದುಕನ್ನು ತಮ್ಮದೇ ಆದ ರೀತಿಯಲ್ಲಿ ಕಟ್ಟಿಕೊಂಡಿದ್ದಾರೆ. ಹಾಗೆಯೇ ಅದರ ಮೂಲಕ ನೆಮ್ಮದಿಯನ್ನೂ ಕಂಡುಕೊಂಡಿದ್ದಾರೆ. ಆ ಸಾಧ್ಯತೆಗಳಿದೆ ಎಂಬುದನ್ನು ಇಲ್ಲಿ ತೋರಿಸುತ್ತಾ ಬರುತ್ತಾರೆ. ಕಾಯ್ಕಿಣಿಯವರು ಹರಿದಾಸರು ತಲ್ಲಣಿಸದಿರು ಕಂಡ್ಯ ತಾಳು ಮನವೇ ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ ಎಂದಾಗ ದೇವರು ಸಲಹುತ್ತಾನೋ ಇಲ್ಲವೋ ಆದರೆ ಬದುಕಲು ದಾರಿಗಳಿವೆ ಎಂಬುದನ್ನು ತಿಳಿಯಬಹುದು ಎಂದಿದ್ದಾರೆ. ಇಂತಹ ವೈವಿಧ್ಯಮಯ ಬದುಕುಗಳು ಹಲವಾರಿವೆ ಎಂಬುದನ್ನು ತಿಳಿಯಪಡಿಸಿದವರು ಕಾಯ್ಕಿಣಿಯವರು. ಇಂತಹ ಮಕ್ಕಳ ಬದುಕಿಗೆ ಸಂಬಂಧ ಪಟ್ಟಂತಹ ಹಲವಾರು ಕತೆಗಳನ್ನು ಕಾಯ್ಕಿಣಿಯವರು ತಮ್ಮ ಕತೆಗಳ ಮೂಲಕ ಅನಾವರಣಗೊಳಿಸಿದ್ದಾರೆ.

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಪ್ರಮುಖವಾಗಿ ಸಾಮಾನ್ಯರ ಬದುಕನ್ನು ಅನಾವರಣಗೊಳಿಸಿ, ಅವರಿಂದ ಇತರರು ಬದುಕನ್ನು ಹೇಗೆ ಸಕಾರಾತ್ಮಕವಾಗಿ ಸ್ವೀಕರಿಸಬೇಕೆಂಬುದನ್ನು ಹಾಗೆಯೇ ಅಂತಹ ಸ್ಥಿತಿಯಲ್ಲೂ ಬೇರೆಯವರಿಗೆ ನೆರವನ್ನೂ ನೀಡುವ ಸಾಧ್ಯತೆಗಳನ್ನು ಗುರುತಿಸುತ್ತೇವೆ. ಅದೇ ರೀತಿಯಲ್ಲಿ ಮಕ್ಕಳೂಕೂಡ ತಮ್ಮ ಚಿಕ್ಕದೇವಯಸ್ಸಿನಲ್ಲೂ ಇತರರಿಗೆ ಸಹಾಯವನ್ನು ಮಾಡುವುದನ್ನು ಕಾಯ್ಕಿಣಿಯವರ ಹಲವಾರು ಕತೆಗಳಲ್ಲಿ ಕಾಣಬಹುದು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ.

- ಕಾಯ್ಕಿಣಿಯವರ ಅಮೃತಬಳ್ಳಿ ಕಷಾಯದ ಕಥಾ ಸಂಕಲನದಲ್ಲಿ ಬರುವ ಪ್ರಮುಖ ಕತೆಗಳಲ್ಲಿ ಒಂದಾದ 'ಹಾಲಿನ ಮೀಸೆ' ಪ್ರಮುಖವಾದದ್ದು.. ' ಹಾಲಿನಮೀಸೆ' ಕತೆಯಲ್ಲಿ ಬರುವ 'ಪುಂಡನ ಪಾತ್ರ' ಪ್ರಮುಖವಾದದ್ದು. ಆತ ತನ್ನ ತಂದೆ ತಾಯಿಗೆ ಸಹಾಯಕವಾಗಲೆಂದು ಚಿಕ್ಕವಯಸ್ಸಿಗೆ ಕೆಲಸಕ್ಕೆ ಸೇರುತ್ತಾನೆ. ಹಾಗೆಯೇ ಅದಕ್ಕೂ ಮುಂಚಿತವಾಗಿ ಊರಿನಲ್ಲಿ ಇರುವಾಗಲೂ ತನ್ನ ತಾಯಿಗೂ ಕೂಡ ಹೂ ಕೊಯ್ಯುವುದರಲ್ಲಿ ಸಹಾಯ ಮಾಡುತ್ತಿದ್ದ. ಆತ ಮುಂಬೈಗೆ ಬಂದ ನಂತರ ಪಿಂಕೂಗೆ ಎಲ್ಲಾ ರೀತಿಯಿಂದಲೂ ಪುಂಡನ ನೆರವು ಅಗತ್ಯವಾಗಿತ್ತು. ಇದರಿಂದ ಅಮ್ಮಾವ್ರಿಗೆ ಬಹಳ ಸಹಾಯಕವಾಗುತ್ತಿತ್ತು. ಏಕೆಂದರೆ ಪುಂಡ ಈ ಚಿಕ್ಕ ವಯಸ್ಸಿನಲ್ಲಿ ಕತೆ ಕಟ್ಟಿ ಪಿಂಕುವನ್ನು ಮರಳುಮಾಡಿ ನೀರು ಕುಡಿಸುತ್ತಿದ್ದ ಊಟ, ಹಾಲು, ಹೋಂ ವರ್ಕ್ ಎಲ್ಲವನ್ನೂ ಮಾಡಿಸುತ್ತಿದ್ದ. ಮಾತ್ರವಲ್ಲದೆ ಪಿಂಕುವನ್ನು ಶಾಲೆಗೆ ಕರೆದುಕೊಂಡು ಹೋಗುವುದು ಹಾಗೂ ಕರೆದುಕೊಂಡು ಬರುವುದು ಎಲ್ಲವೂ ಕೂಡ ಪುಂಡನ ಉಸ್ತುವಾರಿಯಲ್ಲೇ ನಡೆಯುತ್ತಿತ್ತು. ಹೀಗಿರುವಾಗ ತಿಂಗಳಿಗೊಮ್ಮೆ ಭಟ್ಕಳದ ಶಿರೂರಿನಿಂದ ಆಯಿಯಿಂದ ಬಂದ ಪತ್ರಗಳನ್ನು ಗಾಳಿ ರೈಲಿನ ರೀತಿ ಮಾಡಿ ಪಿಂಗಿಯೊಂದಿಗೆ ಆಡುತ್ತಿದ್ದ. ಅಲ್ಲದೆ ರಾವ್ ಬಂದು ತಮ್ಮ ಮನೆಗೆ ಬರಬೇಕೆಂದು ಹಾಗೆ ಪುಂಡು ತಂಗಿ ತುಳಸಿಗೆ ಬುದ್ಧಿ ಹೇಳಬೇಕೆಂದು ಕರೆದಾಗ ಪುಂಡನಿಗೆ ತಮ್ಮ ಅಮ್ಮಾವ್ರು ತನ್ನ ತಂಗಿಗೆ ಬುದ್ಧಿ ಹೇಳಲು ಕರೆದುಕೊಂಡು ಹೋಗುತ್ತೇವೆ ಎಂದಾಗ ತನ್ನ ತಂಗಿಗಾಗಿ ಬೀಡವನ್ನು ಆತ ಕಟ್ಟಿಸಿಕೊಳ್ಳುತ್ತಾನೆ. ಅದು ಆ ಚಿಕ್ಕವಯಸ್ಸಿನಲ್ಲೂ ಮಮತೆ ವಾತ್ಸಲ್ಯವನ್ನು ತೋರಿಸುತ್ತದೆ. ಅಲ್ಲದೆ ತನ್ನ ತಂಗಿಗೆ ಬುದ್ಧಿ ಹೇಳಲು ಹೋದಾಗ ಅಲ್ಲಿ ಆ ಚಿಕ್ಕ ಹೆಣ್ಣು ಮಗಳಿಗೆ ಏನೂ ಹೇಳಲು ತೋಚದೆ ಬೀಡಾ ಕೊಟ್ಟು ವಾಪಸ್ಸು ಬರುತ್ತಾನೆ. ಇದರಿಂದ ಚಿಕ್ಕ ವಅಯಸ್ಸಿನ ಪುಂಡನ ಮನಸ್ಥಿತಿಯ ಅರಿವಾಗುತ್ತದೆ. ಇವನ ಈ ಭಾವನಾತ್ಮಕತೆ ವಿಶಿಷ್ಟವೆನಿಸುತ್ತದೆ.

- ಜಯಂತ್ ಕಾಯ್ಕಿಣಿಯವರ ಪ್ರಮುಖ ಕಥಾ ಸಂಕಲನಗಳಲ್ಲಿ ಒಂದಾದ "ತೆರೆದಷ್ಟೇ ಬಾಗಿಲು". ಇದರಲ್ಲಿ ಪ್ರಮುಖ ಕಥೆಯಾದ "ಭೋಟೂ" ಭೋಟೂ ಪುಟ್ಟ ಪಾತ್ರವಾದರೂ ಆತ ಹೆದರಿಕೊಂಡವನಂತೆ ಗಂಡ ಹೆಂಡತಿಯ ಪಾತ್ರದಿಂದ ಆತ ಅರಿತು ಸುಮ್ಮನಾಗುತ್ತಾನೆ. ಅಲ್ಲದೆ ಆ ಪುಟ್ಟ ಪಾತ್ರದಿಂದ ಮಕ್ಕಳು ಬೇರೊಬ್ಬರೊಂದಿಗೆ ಹೋದಾಗ ಅಲ್ಲಿ ಅವರು ಹೇಳಿದಂತೆ ಕೇಳಿಕೊಂಡು ತಮ್ಮದೇ ಆದ ಗುಂಗಿನಲ್ಲಿ ಇರುತ್ತಾರೆ. ಹಾಗೂ ಆಟವೇ ಅವರಿಗೆ ಪರಮ ಲೋಕ. ಆತ ಸುಮಿಯ ಚುಚ್ಚು ಮಾತಿಗಾಗಲಿ ಹಾಗೂ ಗಂಡ ಹೆಂಡತಿಯ ನಡುವೆ ನಡೆದ ಕಿತ್ತಾಟ ನಡೆಯುತ್ತಿದ್ದರೂ ಮಗುವಿನ ಮುಗ್ಧ ಮನಸ್ಸಿಗೆ ಅದರ ಸೋಂಕು ಹತ್ತಿರವೇ ಸುಳಿಯುವುದಿಲ್ಲ. ಇದು ಮಕ್ಕಳ ಮನಸ್ಸಿನ ವಿಶಿಷ್ಟತೆಯನ್ನು ಅನಾವರಣಗೊಳಿಸುತ್ತದೆ.
- ಜಯಂತ ಕಾಯ್ಕಿಣಿಯವರ ಬಣ್ಣದ ಕಾಲು ಕಥಾ ಸಂಕಲನದಲ್ಲಿ 'ಬಣ್ಣದ ಕಾಲು' ಪ್ರಮುಖ ಕಥೆಗಳಲ್ಲಿ ಒಂದಾಗಿದ್ದು, ಅದರಲ್ಲಿ ಬರುವ ಚಂದುವಿನ ಪಾತ್ರ ಎಂತಹವರ ಮನಸ್ಸನ್ನು ಅದು ಕಲಕುತ್ತದೆ. ತುಂಟನಾದ ಚಂದ್ರುವನ್ನು ರಿಮ್ಯಾಂಡ್ ಹೋಂಗೆ ಸೇರಿಸಬೇಕೆಂದು ಕರೆದುಕೊಂಡು ಹೋದಾಗ ಅಲ್ಲಿ ಚಂದು ಟೀ ಮಾರುವ ಹುಡುಗನನ್ನು ಕಂಡು ಒಂದು ರೀತಿಯ ಹುಮ್ಮಸ್ಸನ್ನು ಹೊಂದುತ್ತಾನೆ. ಆತ ಅಲ್ಲಿ ಉಳಿದುಕೊಂಡ ಆ ವ್ಯಕ್ತಿಯ ಮನೆಯಲ್ಲಿ ಬಟ್ಟೆಯಲ್ಲಿ ಗಂಟು ಕಟ್ಟಿ ಇಟ್ಟ ಆ ವಸ್ತುವನ್ನು ಹೇಗಾದರೂ ಮಾಡಿ ನೋಡಬೇಕೆಂದು ಚಡಪಡಿಕೆ ಹುಡುಕಾಟದ/ಸಂಶೋಧನಾ ಪ್ರವೃತ್ತಿಯ ತುಂಟ ಹುಡುಗನ ಮನಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಅಲ್ಲದೆ ಊರಿನಿಂದ ಬರುವಾಗ ಕುಂಟಪ್ಪ ಹೇಳಿದ 'ಬಣ್ಣದ ಕಾಲಿನ' ಹುಡುಕಾಟವನ್ನು ಆತ ಮರೆಯದೆ ತನ್ನ ತಂದೆಗೆ ಕೇಳುತ್ತಾನೆ. ಚಂದುವನ್ನು ರಿಮ್ಯಾಂಡ್ ಹೋಂಗೆ ಸೇರಿಸಲು ಮನಸ್ಸಾಗದೆ ಹೇಗಾದರೂ ಸರಿ ಮನೆಗೆ ಮರಳಿ ಹೋಗುವ ಎಂದು ಅಪ್ಪಯ್ಯ ಹೇಳಿದಾಗ ಚಂದು ಬಣ್ಣದ ಕಾಲನ್ನು ಕೊಡಿಸಿದರೆ ಮಾತ್ರ ನಿನ್ನೊಂದಿಗೆ ಊರಿಗೆ ಬರುವೆ ಎಂದಾಗ ಆತನ ಮುಗ್ಧ ಮನಸ್ಸು ಅರಿವಾಗುತ್ತದೆ.

- ಚಂದು ಕೇವಲ ತುಂಟತನದ ವ್ಯಕ್ತಿ ಮಾತ್ರವಲ್ಲದೆ ಬುದ್ಧಿವಂತ ಹುಡುಗನೂ ಆಗಿದ್ದ ತಂದೆಯ ಜೊತೆಗೆ ಸೇತುವೆಯ ಮೇಲೆ ಹೋಗುವಾಗ ಒಬ್ಬ ವ್ಯಕ್ತಿ ಫಿಟ್ಸ್ ಬಂದವನಂತೆ ಬಿದ್ದು ಒದ್ದಾಡುವಾಗ ಆತ ಕೈಯಲ್ಲಿದ್ದ ಹಾಳೆಯನ್ನು ಕೀಳಲು ಹೋಗಿ ಅದು ಮೂರು ಚೂರಾಗುತ್ತದೆ. ಅದನ್ನು ಸೇರಿಸಿ ನೋಡಿದಾಗ ಯಾರಿಗೂ ಹೊಳೆಯದಾಗುತ್ತದೆ. ಅದರೆ ಚಂದುಗೆ ಅದು ಹೊಳೆದು ತಂದೆಗೆ ಹೇಳಿದಾಗ ಚಂದುವನ್ನು ಆತ ಅಭಿಮಾನದಿಂದ ಕಾಣುತ್ತಾನೆ. ಅಲ್ಲದೆ ಚಂದು ಸದಾ ಉತ್ಸಾಹದ

ಚಿಲುಮೆ ಇದ್ದಂತೆ. ಆತನ ಕಣ್ಣುಗಳು ಮಕ್ಕಳನ್ನೇ ಹುಡುಕುತ್ತಿದವು. ರಸ್ತೆಯ ಬದಿಯಲ್ಲಿ ಬೂಟ್ ಪಾಲಿಶ್ ಮಾಡುವವರು ಕಾರಿನ ಗಾಜು ಹಳದಿ ವಸ್ತ್ರದಿಂದ ಉಜ್ಜುವವರು, ಇಲಿ ಪಾಷಾಣ ಮಾರುವವರು, ಪೋಸ್ಟರ್ ಹಚ್ಚುವವನ ಏಣಿ ಹಿಡಿದವರು. ಕೊತ್ತಂಬರಿಯ ಕಟ್ಟು ಮುಂದೆ ಹಿಡಿಯುವವರು. ಭೇಲ್‌ಪುರಿ ಆಮ್ಲೆಟ್ ಗಾಡಿಗಳಿಗೆ ಕೂಗಿ ಕರೆಯುವವರು ಎಲ್ಲರೂ ತನ್ನಂಥವರೇ; ವಾಹ್ ಎಂಥ ಧೀರರು! ಶಾಲೆಯ ಮಾಸ್ತರುಗಳು ಬಂದು ಇವರನ್ನು ನೋಡಬೇಕಿತ್ತು. ಚಂದು ತುಂಬಾ ಅಭಿಮಾನದಿಂದ ಅವರನ್ನು ನೋಡುತ್ತಿದ್ದ. ಹೀಗೆ ಚಂದು ಎಲ್ಲದರಲ್ಲಿಯೂ ತನ್ನಂತೆ ಹೋಲುವವರನ್ನು ಹುಡುಕಾಟದ ಮನೋಭಾವ ಹೊಂದಿದ ಹುಡುಗನಾಗಿದ್ದ. ಅಲ್ಲದೆ, ಇದು ಒಂದು ರೀತಿಯ ಅನ್ವೇಷಣಾ ಮನೋಭಾವದಂತೆ ಕಂಡು ಬರುತ್ತದೆ. ಆದರೆ ಹೆತ್ತವರಿಗೆ ಇದು ತಡೆದುಕೊಳ್ಳಲಾಗದ ಸಂಕಟ, ಅದಕ್ಕಾಗಿಯೇ ನರಸಿಂಹ "ನೋಡಿದೆಯಾ ಇಲ್ಲಿ ಪುಂಡ ಪೋಕರೆಲ್ಲ ಹೇಗೆ ತಂದೆ ತಾಯಿ ಇಲ್ಲದೆ ಬೀದಿ ಪಾಲಾಗಿದ್ದಾನೆ. ನೀನು ಚಲೋ ಹುಡುಗ ಹಾಂ? ನೀನು ಮಸ್ತಿಗಿಸ್ತಿ ಎಲ್ಲ ನಿಲ್ಲಿಸಿ ಬಿಡಬೇಕು. ನೀನು ಹಾಂ?"[80] ಎಂದಾಗ ಚಂದುನ "ಕಣ್ಣೆದುರು ಧೀರ ಪೋರರ ದಂಡು ನಡೆದಿತ್ತು. ಹೊಟ್ಟೆಗೆ ಶೇಂಗ ಬುಟ್ಟಿಕಟ್ಟಿಕೊಂಡು ಪುಟ್ಟ ಬಸುರಿಯಂತೆ ಅವರು ನಡೆಯುತ್ತಿದರು".[81] ಇದು ಚಂದುಗೆ ಬಹಳ ಅಮೋಘವಾಗಿ ಕಾಣುತ್ತಿತ್ತು. ಆತನಿಗೆ ಇವರೆಲ್ಲರೂ ಧೀರರಂತೆ ಕಂಡರು. ಹೀಗೆ ಜಯಂತ್ ಕಾಯ್ಕಿಣಿಯವರು ಇಂದಿನ ಮಕ್ಕಳನ್ನು ಕೇವಲ ಪ್ರಗತಿಯ ಪಥದಲ್ಲಿ ಅಂಕಗಳಿಗೋಸ್ಕರ ಓದುವಂತೆ ಒತ್ತಾಯಿಸುವ ತಂದೆ ತಾಯಿಯರು ಆ ಮಕ್ಕಳ ವಿಶೇಷ ಆಸಕ್ತಿಯನ್ನು ಗುರುತಿಸಿ ಅವರಿಗೆ ಇಷ್ಟವಾದ ದಾರಿಯಲ್ಲಿ ಬಿಡಬೇಕು ಎಂದು ಸೂಚಿತವಾಗಿ ತಿಳಿಸಿದ್ದಾರೆ. ಅಲ್ಲದೆ ಮಕ್ಕಳಲ್ಲಿರುವ ವಿಶೇಷ ಜ್ಞಾನವನ್ನು ಗುರುತಿಸಿ ಅದಕ್ಕೆ ಸಂಬಂಧಿಂಸಿದಂತೆ ಬೆಳವಣಿಗೆಗೆ ಸಹಾಯವನ್ನು ಮಾಡಬೇಕು. ಆಗ ಮಕ್ಕಳ ವೈಭವೀಕರಿಸುವ ಬಾಲಕೃಷ್ಣ ಚೇಷ್ಟೆಗಳನ್ನು ಲೀಲೆಗಳೆಂದು ಆಸ್ವಾದಿಸುವ, ವೈಭವೀಕರಿಸುವ ನಾವು ಮಕ್ಕಳ ಇದೇ ಬಗೆಯ ವರ್ತನೆಗಳನ್ನು ಅಪರಾಧವೆಂದು ಭಾವಿಸುವುದೇಕೆ? ಮಕ್ಕಳ ಈ ವಿಶಿಷ್ಠ ಗುಣ ಸ್ವಭಾವ ಇಲ್ಲಿ ಗುರುತಿಸಬೇಕಾದ ಅಗತ್ಯವನ್ನು ಇಲ್ಲಿ ಮನಗಾಣಬೇಕಾಗಿದೆ.

- ಜಯಂತ್ ಕಾಯ್ಕಿಣಿಯವರ ಪ್ರಮುಖ ಕತೆಗಳಲ್ಲಿ ಒಂದಾದ 'ತನ್ಮಯಿ ಸೂಟಿ' ಇಂದಿನ ಮಕ್ಕಳು ಸೂಟಿಯಲ್ಲಿ ನೆಮ್ಮದಿಯಾಗಿ ಕಾಲವನ್ನು ಕಳೆಯದೆ ಆ ರಜೆಯಲ್ಲೂ ತಂದೆ ತಾಯಿಯರ ಒತ್ತಾಯದ ಜೊತೆಗೆ ಮುಂದಿನ ತರಗತಿಗಾಗಿ ಅಭ್ಯಾಸ ನಿರತರಾಗುವಂತೆ ಮಾಡುವ ಪೂರ್ವಪರೀಕ್ಷೆಗಳು ಮಕ್ಕಳ ಮನಸ್ಸಿನ ಮೇಲೆ ಒತ್ತಡ ಹೇರುತ್ತವೆ. ಮುಂಬಯಿಯಿಂದ ರಜೆಯನ್ನು ನೆಮ್ಮದಿಯಾಗಿ ಕಳೆಯಲು

ಬಂದ ತನ್ಮಯಿ ತನ್ನ ಚಿಕ್ಕಪ್ಪನ ಸಿಡುಕು ಮೂತಿ ಜೊತೆಗೆ ತಂದೆಯಿಂದ ಆಗಾಗ ಬರುವ ಪತ್ರಗಳು ಆಕೆಯನ್ನು ತಲ್ಲಣಗೊಳಿಸುತ್ತಿತ್ತು. ತನ್ಮಯಿಗೆ ರಜೆಯಲ್ಲಿ ಸೈಕಲ್ ಕಲಿಸಿಕೊಡುವುದಾಗಿ ಮಂಜು ಹೇಳಿದ್ದ. ಆದರೆ ಕಾಕಾ, ಮಂಜು ಹೊರಗಡೆ ಹೋದರೆ ಕಾಲು ಮುರಿಯುತ್ತೇನೆಂದು ತನ್ಮಯಿಯ ಎದುರಿಗೆ ರಪರಪನೆ ಮಂಜುಗೆ ಬಾರಿಸಿದ್ದ. ಒಳಗಿದ್ದ ಕುಶಿಕಾಕಿ ಮಂಜುವನ್ನು ಕರೆದುಕೊಂಡು ಹೋಗಿ ಸಮಾಧಾನ ಪಡಿಸಿದಳಾದರೂ ತನ್ಮಯಿಗೆ ಹೇಗಾದರೂ ಸೈಕಲ್ ಕಲಿಸಿಕೊಡಬೇಕೆಂದು ಆಕೆಯೇ ತನ್ಮಯಿಯ ಸೆಲ್ವಾರ್ ಹಾಕಿ ಸೈಕಲ್ ಮೇಲೆ ಕೂರುವಳು. ಇದರಿಂದಾಗಿ ಕುಶಿಕಾಕಿಗೆ ನಾಲ್ಕು ಗೋಡೆಗಳ ಮಧ್ಯೆ ತನ್ನನ್ನೇ ಮರೆತಿದ್ದವರು ತನ್ಮಯಿಯಿಂದ ತನ್ನ ಕಾಲೇಜಿನ ದಿನಗಳ ನೆನಪು ಮಾಡಿಕೊಳ್ಳುವುದಕ್ಕೆ ಸಾಧ್ಯವಾಯಿತು. ಯಾವಾಗಲೂ ಹೊರಗೆ ದುಡಿಯುತ್ತಿದ್ದ ಕಾಕಾ ಕುಶಿಕಾಕಿಯೊಂದಿಗೆ ಪ್ರೀತಿಯಿಂದ, ಖುಷಿಯಾಗಿದ್ದ ದಿನಗಳನ್ನೇ ನೋಡಿರದ ತನ್ಮಯಿಗೆ ಕುಶಿಕಾಕಿ ಸಂಜೆ ಹೊರಗೆ ತಿರುಗಾಡಲು ಹೋಗುವಾಗ ತಾನು ಅನುಬವಿಸಿದ ಕಾಲೇಜಿನ ಸಂತೋಷಗಳನ್ನು ಆಕೆ ನೆನಪು ಮಾಡಿಕೊಳ್ಳಲು ಸಹಾಯ ಮಾಡಿದವಳು ತನ್ಮಯಿ. ಹೀಗೆ ಪಟ್ಟಣದ ಸದಾ ಓದಿನ ಕಲಿಕೆಯಲ್ಲಿಯೇ ಹುದುಗಿದ್ದವಳು ತನ್ಮಯಿ ಕುಶಿಕಾಕಿಗೆ ತನ್ನಿಂದ ಹಾಗೂ ಕುಶಿಕಾಕಿಯಿಂದ ತನಗೆ ತನ್ನ ತಂದೆಯ ಹಾಗೂ ಕಾಕನ ಒತ್ತಡಗಳನ್ನು ಅದರಲ್ಲೂ ಓದಿನ ಒತ್ತಡಗಳನ್ನು ಮರೆಯುತ್ತಾಳೆ. ಏಕೆಂದರೆ ಇಂದು ತಂದೆ-ತಾಯಿಗಳಿಗೆ ತಮ್ಮ ಪ್ರತಿಷ್ಠೆಯೇ ಮುಖ್ಯವಾದ ಕಾರಣ ಅವರು ಮಕ್ಕಳನ್ನು ಓದಲು ಹೆಚ್ಚು ಒತ್ತಾಯಿಸುತ್ತಾರೆ. ಇದಕ್ಕಾಗಿಯೇ ಮಕ್ಕಳನ್ನು ಆಟ ಮನೋರಂಜನೆಗಳಿಗೆ ಕಳುಹಿಸದೇ ಪುಸ್ತಕದ ಹುಳುವಿನಂತೆ ಸಿದ್ಧಪಡಿಸುತ್ತಾರೆ. ಅದೇರೀತಿಯಲ್ಲಿ ಗ್ರಾಮೀಣ ಮಹಿಳೆಯರು ಕೇವಲ ಅಡುಗೆ ಮನೆ, ಮಕ್ಕಳು, ಸಂಸಾರ ಇಂತಿಷ್ಟೇ ಅಂತಿರುವಾಗ ತನ್ಮಯಿಯಿಂದ ಕುಶಿ ಕಾಕಿಗೆ ತನ್ನ ಹಿಂದಿನ ವಿದ್ಯಾರ್ಥಿ ದೆಸೆಯ ದಿನಗಳನ್ನು ಮೆಲುಕು ಹಾಕಲು ಹಾಗೆಯೇ ಸೂಟಿ ದಿನಗಳನ್ನು ಕಳೆಯಲು ಕಾಕಿಯಿಂದ ನೆರವಾದದನ್ನು ಈ ಕತೆಯಲ್ಲಿ ಇನ್ನು ಗ್ರಾಮೀಣ ಹಾಗೂ ನಗರ ಜೀವನಗಳ ಒತ್ತಡಗಳನ್ನು ಈ ಕತೆಯಲ್ಲಿ ಕಾಣಬಹುದಾಗಿದೆ. ಇದರ ವಿಶೇಷತೆಯನ್ನು ಅನಾವರಣಗೊಳಿಸುವ ತನ್ಮಯಿ ಇಲ್ಲಿ ವಿಶೇಷ ಪಾತ್ರವಾಗುತ್ತಾಳೆ. ಮಕ್ಕಳೆಂದರೆ ಒಟ್ಟಾರೆಯಾಗೆ ಒಂದೇ ಎಂಬಂತೆ ಭಾವಿಸುವುದೇ ದಡ್ಡತನ. ಪ್ರತಿಯೊಂದು ಮಗುವಿನಲ್ಲಿ ತನ್ನದೇ ಆದ ವಿಶಿಷ್ಟ ಪ್ರತಿಭೆ ಇರುತ್ತದೆ. ಒಂದೇ ಮಾದರಿಯಲ್ಲಿ ಅಳೆಯದೆ ಈ ಭಿನ್ನತೆಯ ವೈಶಿಷ್ಟತೆಯನ್ನು ಗುರುತಿಸುವ ಹೊಣೆ ಹಿರಿಯರದಾಗಬೇಕಾಗಿದೆ. ಈ ವಿಸಿಷ್ಟ ನೆಲೆಗಳ ಪರಿಚಯ ಈ ಕತೆಗಳಲ್ಲಿ ಆಗುತ್ತದೆ.

ಕೊನೆಟಿಪ್ಪಣಿಗಳು.

80. ಬಣ್ಣದ ಕಾಲು, ಪುಟ ಸಂಖ್ಯೆ 16

81. ಬಣ್ಣದ ಕಾಲು, ಪುಟ ಸಂಖ್ಯೆ 17

ಸಮಾರೋಪ

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಒಟ್ಟಾರೆಯಾಗಿ ಕಂಡು ಬರುವುದು ಹಿಂದಿನ ನಗರ ಬದುಕಿನ ಚಿತ್ರಣಕ್ಕಿಂತ ಭಿನ್ನವಾಗಿ ಮಾನವೀಯ ನೆಲೆಗಳನ್ನು ಕಟ್ಟಿಕೊಡುವಂತಹ ಪಾತ್ರಗಳಾದ ಕಲಾವಿದರು, ವಯೋವೃದ್ಧರು, ಮಹಿಳೆಯರು, ಮಕ್ಕಳು ಟ್ಯಾಕ್ಸಿ ಚಾಲಕರು, ಬೀದಿ ಬದಿಯ ವ್ಯಾಪಾರಿಗಳು ಮುಂತಾದವರ ಕುರಿತಂತೆ ವಿಶಿಷ್ಟವಾದ ರೀತಿಯಲ್ಲಿ ಕಟ್ಟಿಕೊಡುತ್ತಾರೆ. ಕತೆಗಾರರ ವಿಶಿಷ್ಟ ಕೌಶಲವನ್ನು ಇಲ್ಲಿ ಗುರುತಿಸಿದ್ದೇನೆ. ನಗರದ ಬದುಕನ್ನು ಸಂಕೀರ್ಣ, ಅನೇಕ ಗೋಜಲುಗಳಿವೆ ಎಂದು, ಭಾವನಾತ್ಮಕತೆ ಸತ್ತು ಕೇವಲ ಯಾಂತ್ರಿಕತೆಯಿದೆ ಎಂದು ಹೇಳುವುದು ಸಾಮಾನ್ಯ. ಆದರೆ ಕಾಯ್ಕಿಣಿ ಇವೆಲ್ಲವುಗಳ ನಡುವೆಯೂ ಬದುಕಿನಲ್ಲಿರುವ ಸಾಧ್ಯತೆಗಳನ್ನು ಗುರುತಿಸಿ ಸಕಾರಾತ್ಮಕವಾಗಿ ನಾವು ಬದುಕನ್ನು ನೋಡುವಂತೆ ಮಾಡಿದ್ದಾರೆ. ಈ ಗೋಜಲುಗಳ ಮಧ್ಯೆಯೂ ಇರುವ ಮಾನವೀಯ ನೆಲೆಗಳನ್ನು ವಿಶಿಷ್ಟವಾಗಿ ಅನಾವರಣಗೊಳಿಸಿದ್ದಾರೆ. ಇವೆಲ್ಲವುಗಳನ್ನು ಗುರುತಿಸಿ, ಇದರ ಒಟ್ಟು ಫಲಿತವನ್ನು ಈ ಭಾಗದಲ್ಲಿ ತಿಳಿಸಲಿದ್ದೇನೆ. ಬರಹಗಾರರಾಗಿ ಬಹಳ ಮುಖ್ಯವಾಗಿ ಕತೆಗಾರರಾಗಿ ಬದುಕಿನ ಈ ಸೂಕ್ಷ್ಮ ನೆಲೆಗಳನ್ನು, ಇದರ ನಡುವಿನ ವ್ಯಕ್ತಿಗಳ ವಿಶಿಷ್ಠತೆಗಳನ್ನು ಗುರುತಿಸಿ ಅನಾವರಣಗೊಳಿಸುವ ವಿಶಿಷ್ಠ ಬರಹಗಾರರಾಗಿ ಜಯಂತ್ ಕಾಯ್ಕಿಣಿಯವರು ಹೇಗೆ ಪ್ರಾತಿನಿಧಿಕ ಕತೆಗಾರರಾಗಿ ಗಮನ ಸೆಳೆಯುತ್ತಾರೆ ಎಂಬುದನ್ನು ಸ್ಪಷ್ಟಪಡಿಸಲಿದ್ದೇನೆ.

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಕಂಡು ಬರುವ ಕಲಾವಿದರು, ಅವರ ವೃತ್ತಿಪರತೆ, ವೈಯಕ್ತಿಕ ಬದುಕಿನ್ನು ಕುರಿತ ಬದ್ಧತೆ ಇದರ ನಡುವಿನ ಸಿಕ್ಕುಗಳು ಇವುಗಳ ನಡುವೆಯೂ ಒಟ್ಟಾರೆಯಾಗಿ ತಮ್ಮ ಘಟನೆಯನ್ನು ಕಾಯ್ದುಕೊಳ್ಳಲು ವಿಶಿಷ್ಠತೆಯನ್ನು ಕತೆಗಳಲ್ಲಿ ಗುರುತಿಸಿರುತ್ತೇನೆ.

ಮಹಿಳೆಯನ್ನು ಕೆಲವು ಸಿದ್ಧ ಮಾದರಿಗಳಲ್ಲೇ ಆಕೆಯನ್ನು ನೋಡುವುದು ಸಾಮಾನ್ಯವಾದ ಸಂಗತಿ. ಈ ಸಿದ್ಧ ಮಾದರಿ ಅವಳಿಗೆ ಸಹಜವಾಗಿ ಬಂದಿರುವುದಕ್ಕಿಂತಲೂ ಅನಿವಾರ್ಯ ಸಂದರ್ಭಗಳೇ ಆಕೆಯನ್ನು ಹೀಗೆ ರೂಪಿಸಿವೆ ಎಂಬುದೇ ಬಹುತೇಕ ಸತ್ಯ. ಮಹಿಳೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಸ್ವಭಾವ ಮಾತೃತ್ವ ಯಾವುದೇ ಒಂದು ಸಂದರ್ಭ ಅಥವಾ ವ್ಯಕ್ತಿಯನ್ನು ಅವಳು ಪರಿಗಣಿಸಬೇಕಾದರೆ, ಅವಳು ಆ ನೆಲೆಯಿಂದಲೇ ಪರಿಗಣಿಸುತ್ತಾಳೆ. ಈಕೆಯಲ್ಲಿ ಅಂತ:ಕರಣ ಸದಾ ಜಾಗೃತಿಗೊಂಡಿರುತ್ತದೆ. ಹಾಗೆಂದಾಕ್ಷಣ ಆ ಬದುಕು ಅಷ್ಟೇ ಅವಳಿಗೆ ಸೀಮಿತವಲ್ಲ. ಹಾಗೆ ಅಂದುಕೊಳ್ಳುವುದು ತಪ್ಪು. ಅವಳಲ್ಲಿ ಧೈರ್ಯವಿದೆ.

ಸಹನಶೀಲತೆ ಇದೆ. ಬದುಕನ್ನು ಕಟ್ಟಿಕೊಳ್ಳುವ ಸ್ವಾವಲಂಬಿಯಾಗಿ, ನಿರ್ವಹಿಸುವ ಛಲ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುವ ಈ ಎಲ್ಲಾ ಗುಣಗಳು ಆಕೆಯಲ್ಲಿವೆ. ಇಂತಹ ಪಾತ್ರಗಳ ವಿಶಿಷ್ಟತೆಯನ್ನು ಕತೆಗಳಲ್ಲಿ ಗುರತಿಸಿರುತ್ತೇನೆ.

ಒಂದು ಗ್ರಾಮದ ಸರ್ವಾಂಗೀಣ ಅಭಿವೃದ್ಧಿ ಅದೇ ಗಾಂಧೀಜಿಯವರ ಸ್ವರಾಜ್ಯದ ಕಲ್ಪನೆಯಾಗಿತ್ತು. ಗ್ರಾಮ ಸಮಗ್ರವಾಗಿ ಅಭಿವೃದ್ಧಿಯಾಗಬೇಕಾದರೆ, ಗ್ರಾಮದಲ್ಲಿರುವ ಎಲ್ಲಾ ಕಸುಬುದಾರರು, ಕುಶಲಕರ್ಮಿಗಳಿಂದ ಹಿಡಿದು ಭೂ ಹಿಡುವಳಿದಾರರು, ಜಮೀನ್ದಾರರು ಎಲ್ಲರೂ ಕೂಡಿ ಪೂರಕವಾಗಿ ಪರಸ್ಪರ ಕೆಲಸ ಮಾಡಿದಾಗ ಮಾತ್ರ ಒಂದು ಗ್ರಾಮ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬುದು ಗಾಂಧೀಜಿಯವರ ತಿಳುವಳಿಕೆಯಾಗಿತ್ತು. ಅದು ನಮ್ಮ ಪ್ರಾಚೀನ ಗ್ರಾಮ ವ್ಯವಸ್ಥೆಯಲ್ಲಿ ಸಹಜವಾಗಿಯೇ ಅಳವಡಿಕೆಯಾಗಿತ್ತು. ಆದರೆ, ಇಂದು ಅಂತಹ ಚಿತ್ರಣಗಳು ಇಲ್ಲ. ಏಕೆಂದರೆ, ಹಳ್ಳಿಯ ಬದುಕಿನಲ್ಲಿ ಪಲ್ಲಟವಾಗಿರುವುದನ್ನು ಕಾಣಬಹುದಾಗಿದೆ. ಒಂದು ಕಡೆ ಹಳ್ಳಿಯೂ ಅಲ್ಲದೆ, ನಗರವೂ ಅಲ್ಲದೆ ಇರುವಂತಹ ವಾತಾವರಣ ನಿರ್ಮಾಣವಾಗಿದೆ. ಆದರೆ ಹಳ್ಳಿಗಾಡಿನಿಂದ ನಗರಕ್ಕೆ ಬಂದಾಗ, ನಗರ ಜೀವನ ಎಂದಾಕ್ಷಣ ಒಂದು ರೀತಿಯ ಬೆಚ್ಚಿ ಬೀಳುವ ಭಾವನೆಗಳು ನಮ್ಮ ಮನಸ್ಸಿನಲ್ಲಿ ಒಂದುಕಡೆ ನೆಲೆಗೊಂಡಿವೆ. ನಗರ ಜೀವನವೆಂದರೆ ಒಂದು ರೀತಿಯ ಭಯಂಕರವಾದ ಜೀವನ, ನಗರೀಕರಣ ಹಲವು ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತದೆ. ಈ ಸಂಕೀರ್ಣತೆಯ ನಡುವೆ ಬದುಕನ್ನು ಕಟ್ಟಿಕೊಳ್ಳುವುದೇ ದುಸ್ಸಾಹಸ ಎಂದುಕೊಂಡಿದ್ದೇವೆ. ಅದು ಭಾಗಶ: ನಿಜವೂ ಇರಬಹುದು. ಆದರೆ ಅದರ ಇನ್ನೊಂದು ಮುಖವನ್ನು ಗಮನಿಸುತ್ತ ನೋಡಿದಾಗ, ಜೀವನ ನಿರ್ವಹಣೆಗಾಗಿ ನಗರದಲ್ಲಿ ಬಂದಿರುವವರು ಯಾರು? ಹಳ್ಳಿಗರೇ ಅಲ್ಲವೇ? ಹಳ್ಳಿಗಳಲ್ಲಿ ಹೇಗೆ ಪರಸ್ಪರ ಒಬ್ಬರಿಗೊಬ್ಬರು ದುಡಿಮೆ ಪೂರಕನೋ ಹಾಗೇ ನಗರದಲ್ಲೂ ಸಹ ಒಬ್ಬನ ದುಡಿಮೆ ಇನ್ನೊಬ್ಬನ ದುಡಿಮೆಗೆ ಪೂರಕ.. ಒಬ್ಬನ ದುಡಿಮೆ ಇನ್ನೊಬ್ಬನ ಬದುಕಿಗೆ ಪೂರಕ ಎಲ್ಲವೂ ಬೇಕು. ಒಂದು ದೊಡ್ಡ ಬಂಡವಾಳ ಹೂಡುವ ಉದ್ದಿಮೆದಾರನೂ ಬೇಕು ಹಾಗೆಯೇ ಅದರಲ್ಲಿ ಕೆಲಸ ಮಾಡಲು ನುರಿತ ಕೆಲಸಗಾರರು ಬೇಕು. ವಿದ್ಯಾಭ್ಯಾಸ ಮಾಡಿರುವ ಬೌದ್ಧಿಕ ಶಕ್ತಿಯನ್ನು ಬಳಸಿಕೊಂಡು ಕೆಲಸ ಮಾಡುವ ಕುಶಲಕರ್ಮಿಗಳು ಬೇಕು. ಅಂದರೆ ಅಕ್ಷರ ಜ್ಞಾನದ ಮೂಲಕ ಬೌದ್ಧಿಕ ಸಾಮರ್ಥ್ಯ. ಅಂದರೆ, ಶಾಲಾ ಕಾಲೇಜುಗಳ ಮೂಲಕ ಪಡೆದಿರುವಂತಹ ಬುದ್ಧಿಯ ಸಾಮರ್ಥ್ಯ, ಅಲ್ಲದೆ ಶಾಲಾಕಾಲೇಜುಗಳ ಮೂಲಕ ಬೌದ್ಧಿಕ ಸಾಮರ್ಥ್ಯವನ್ನು ಪಡೆಯಲು ಸಾಧ್ಯವಾಗದೇ ಹೋದಾಗ, ತಮ್ಮ ದೈಹಿಕ ಸಾಮರ್ಥ್ಯವನ್ನು ಬಳಸಿಕೊಂಡು ಅಥವಾ ಯಾವುದೇ ಬಗೆಯಲ್ಲಿ ಪ್ರಭಾವಕ್ಕೆ ಒಳಗಾಗಿ ಯಾವುದೋ ಒಂದು ಕರಕುಶಲ ವಿದ್ಯೆಯನ್ನು ಕಲಿತುಕೊಂಡು ಆ ಮೂಲಕ ಬದುಕನ್ನು

ಕಟ್ಟಿಕೊಂಡಿರುವವರೂ ಇದ್ದಾರೆ. ಇವರೆಲ್ಲರೂ ಬೇಕು. ನಮಗೆ ಒಂದು ನಗರ ಜೀವನ ಎಂದಾಗ ಒಬ್ಬ ಚಹಾ ಮಾರುವವನು ಬೇಕು, ರೊಟ್ಟಿ ಮಾರಾಟ ಮಾಡುವವರು ಬೇಕು,. ಹಣ್ಣು ಮಾರಾಟ ಮಾಡುವವರು ಬೇಕು, ಕೀ ಚೈನ್ ಮಾರುವವರು, ಟಾಂಗಾ ಓಡಿಸುವವರು, ಬನ್ನು ಬಿಸ್ಕತ್ ಮಾರುವವನು ಕೂಡ ಬೇಕು. ಯಾರ ಅವಶ್ಯಕತೆಯೂ ಇಲ್ಲದೆ ಬದುಕಲು ನಗರದಲ್ಲಿ ಸಾಧ್ಯವಿಲ್ಲ. ಕೀ ಗೊಂಚಲು ಬೇಡವೇ?. ಬೇಸರವೆನಿಸಿದಾಗ ಒಂದು ಕಡಕ್ ಟೀ ಬೇಡವೇ ಹೀಗೆ ಎಲ್ಲವೂ ಬೇಕು. ಇವರೆಲ್ಲರೂ ಒಟ್ಟಾಗಿ ನಗರದ ಬದುಕನ್ನು ಕಟ್ಟುವಲ್ಲಿ, ನಗರದಲ್ಲಿ ವಾಸ ಮಾಡುವಂತಹ ಜನರ ಬದುಕು ಒಂದಷ್ಟು ಯಶಸ್ಸಿನ ಕಡೆ, ಒಂದಷ್ಟು ನೆಮ್ಮದಿಯ ಕಡೆ ಸಾಗಬೇಕೆಂದರೆ, ಇವರೆಲ್ಲರ ಬದುಕು ಸಹ ಅತ್ಯಂತ ಅವಶ್ಯಕವಾಗಿರುತ್ತದೆ. ಇವರೆಲ್ಲರ ಬಗ್ಗೆಯೂ ಪರಸ್ಪರ ಒಂದು ರೀತಿಯ ಪ್ರೀತಿ ಇರಬೇಕು. ನನಗಿಂತ ಅವನು ಕಡಿಮೆ. ನಾನು ದೊಡ್ಡ ಕೆಲಸದಲ್ಲಿ ಇದ್ದೇನೆ. ಅವನೇನೂ ಓದಿಲ್ಲ. ನನಗಿಂತ ಅವನದು ಸಣ್ಣ ಕೆಲಸ, ಬೀದಿ-ಬೀದಿಗಳಲ್ಲಿ ಕೆಲಸ ಮಾಡುತ್ತನೆ. ಚಹಾ ಮಾರ್ತಾನೆ ಎಂಬುದು ಮೂರ್ಖತನ. ಏಕೆಂದರೆ ಕೇವಲ ಹಣಕ್ಕಾಗಿ ಕೆಲಸವನ್ನು ಮಾಡದೆ, ಮಾನವೀಯತೆಗಾಗಿ ಬದುಕುತ್ತಿರುವುದನ್ನು ಕಾಣುತ್ತೇವೆ. ಉದಾ: ಕೆಲವು ಮಂದಿ ಎಷ್ಟೋ ಕೋಟಿಗಟ್ಟಲೆ ಹಣವನ್ನು ಕಪ್ಪು ಹಣವಾಗಿ ಮಾಡಿ ಫಾರಿನ್ ಬ್ಯಾಂಕ್ ಗಳಲ್ಲಿ ಇಟ್ಟು, ತಮ್ಮಿಂದ ಇತರರಿಗೆ ಯಾವುದೇ ಸಹಾಯವಾಗದ ರೀತಿಯಲ್ಲಿ ಬದುಕುತ್ತಿರುತ್ತಾರೆ. ಆದರೆ, ಈ ಚಪಾತಿ ಮಾಡುವ, ಬೀದಿ ಬದಿಗಳಲ್ಲಿ ವ್ಯಾಪಾರ ಮಧುವವರಲ್ಲಿ ಯಾವ ಗಂಟೂ ಇಲ್ಲದೆ, ತಮ್ಮಲ್ಲಿರುವುದನ್ನು ಇತರರಿಗೆ ಕೊಟ್ಟು ತಾವು ನೆಮ್ಮದಿಯನ್ನು ಕಾಣುತ್ತ ಅದರಲ್ಲೇ ಬದುಕನ್ನು ಸಾಧಿಸುತ್ತಿರುತ್ತಾರೆ. ಅಷ್ಟೇ ಅಲ್ಲದೆ, ಅವರು ಮಾಡುವ ಆ ಪುಟ್ಟ ಕೆಲಸಗಳಿಂದಲೂ ಕೋಟಿಗಟ್ಟಲೆ ಸಂಪಾದನೆ ಮಾಡುವ ವ್ಯಕ್ತಿಗೆ ನೆಮ್ಮದಿ ಸಿಗುತ್ತಿರುತ್ತದೆ. ಉದಾ: ಟೀ ಮಾಡುವ ವ್ಯಕ್ತಿಯನ್ನು ಕಂಡಾಗ ಛೀ ಇವನಾ ಅನ್ನಬಾರದು ಏಕೆಂದರೆ ನಾವು ಬಹಳಷ್ಟು ಗಳಿಸಿರಬಹುದು. ಆದರೆ ಅವನು ಮಾರುವ ಎರಡು ರೂಪಾಯಿ ಟೀ ಬಹಳ ಅತ್ಯವಶ್ಯಕ. ನಮ್ಮಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಗೌರವಿಸಿಕೊಳ್ಳುವ ಮನಸ್ಸಿರಬೇಕು. ಅಂದರೆ ಅವರು ವಿವಿಧ ಕುಶಲತೆಯಿಂದ ಬದುಕನ್ನು ಕಟ್ಟಿಕೊಳ್ಳುವುದನ್ನು ಗೌರವಿಸಬೇಕು. ಏಕೆಂದರೆ ಎಷ್ಟೋ ಮಂದಿ ಕೆಲಸದ ಹುಡುಕಾಟದಲ್ಲೆ ಜೀವನವನ್ನು ಸವೆಸದೆ ಈ ರೀತಿಯಲ್ಲಿ ಕೆಲಸಗಳನ್ನು ಮಾಡಿಯೂ ಬದುಕನ್ನು ಕಟ್ಟಿಕೊಳ್ಳಬಹುದು ಎಂಬ ಚಿತ್ರಣವನ್ನು ಕಾಯ್ಕಿಣಿಯವರು ಇಲ್ಲಿ ಕಟ್ಟಿಕೊಡುತ್ತಾರೆ. ಇಂತಹ ಪಾತ್ರಗಳಲ್ಲಿ ವಿಶಿಷ್ಟವಾದ ಜ್ಞಾನ, ವಿಶಿಷ್ಟವಾದ ಆಲೋಚನೆ, ಅವರ ಜನಪರವಾದ ನಿಲುವು ಅವರ ಸಂಬಂಧಗಳಲ್ಲಿರುವ ಸೂಕ್ಷ್ಮತೆ, ಹಣದ ಪರವಾಗಿರದೆ, ಮಾನವ ಪರವಾದ ಅವರ ಕಾಳಜಿ ಸ್ನೇಹದ ಪರವಾದ ಔದಾರ್ಯ, ಇವೆಲ್ಲವನ್ನು ಕಟ್ಟಿಕೊಡುವ ಪ್ರಯತ್ನವನ್ನು ಕಾಯ್ಕಿಣಿಯವರು ಮಾಡಿದ್ದು, ಇದನ್ನು ಅಧ್ಯಯನದಲ್ಲಿ ಗುರುತಿಸಿ ಸ್ಪಷ್ಟಪಡಿಸಿರುತ್ತೇನೆ.

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ವಿದ್ಯಾವಂತ ಯುವಕರ ತಮ್ಮ ಗೆಳೆಯರನ್ನೂ ತಮ್ಮಂತೆ ಪ್ರಗತಿಯ ಪಥಗಳಲ್ಲಿ ಕರೆದೊಯ್ಯುವ ಮನಸ್ಸನ್ನು ಹೊಂದಿರುತ್ತಾರೆ. ಅಲ್ಲದೆ ಗೆಳೆಯನ ಮಾತಿನ ಮೇಲೆ ತನ್ನ ಜೀವ ಮತ್ತು ಜೀವನವನ್ನೂ ನಿರ್ಧರಿಸುವಂತಹ ಗೆಳೆತನದ ವಿಶಿಷ್ಠತೆಯನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ. ಶ್ರೀಮಂತ ಗೆಳೆಯನಿಗೆ ತನ್ನ ಬಡ ಸ್ನೇಹಿತ ಹಣ ನಿರೀಕ್ಷಿಸಬಹುದು ಎಂಬ ಭಯವಿರುತ್ತದೆ. ಆದರೆ ಅದನ್ನು ಬುಡಮೇಲು ಮಾಡಿ ಕೇವಲ ತನ್ನನ್ನು ಕಳ್ಳನಲ್ಲ ಎಂದು ಹೇಳು ಎಂದು ಕೇಳಿಕೊಳ್ಳುವ ಸ್ನೇಹಿತನ ಬಗ್ಗೆ ಅಭಿಮಾನ ಮೂಡುತ್ತದೆ. ಇಂತಹ ನೆಲೆಗಳ ಪರಿಚಯ ಮಾಡಿಕೊಟ್ಟಿರುತ್ತೇನೆ.

ಕಾಯ್ಕಿಣಿಯವರ ಕತೆಗಳಲ್ಲಿ ಮಕ್ಕಳ ಪಾತ್ರಗಳೂ ಕೂಡ ವಿಶಿಷ್ಠವಾಗಿದ್ದು, ತಂದೆ ತಾಯಿ ಮಕ್ಕಳಿಗೆ ಸಾಂಪ್ರದಾಯಿಕ ಶಿಕ್ಷಣದ ಆ ಕ್ಷಣದ ಮೂಲಕ ಬದುಕನ್ನು ನಿರ್ಮಿಸಬೇಕೆಂದು ಬಯಸುವಾಗ ಆ ಮಕ್ಕಳು ಯಾರ ಸಹಕಾರವಿಲ್ಲದೆ. ತಮ್ಮ ಬದುಕನ್ನು ನಿರ್ಮಿಸಿಕೊಂಡು ಅದರ ಮೂಲಕವೂ ಇತರರಿಗೆ ಪ್ರೇರಕವಾಗುವ ವಿಶಿಷತೆಗಳನ್ನು ಗುರುತಿಸುವ ಪ್ರಯತ್ನವನ್ನು ನಾನಿಲ್ಲಿ ಮಾಡಿದ್ದೇನೆ.

ಕಾಯ್ಕಿಣಿಯವರು ಕತೆಗಾರರು ಮತ್ತು ಕಲಾ ಜಗತ್ತಿನೊಂದಿಗೆ ಸಂಪರ್ಕ ವಿರಿಸಿಕೊಂಡವರೂ ಹೌದು. ಅಲ್ಲದೇ ಯಾವುದೇ ಕತೆಗಾರನೂ ಮೂಲತಃ ಒಬ್ಬ ಕಲಾವಿದನೆ ಹೌದು ಎಂಬುದು ಸತ್ಯ. ಭಾಷಿಕ ಕಲೆ ಈತನದು. ಹೀಗೆ ಕಾಯ್ಕಿಣಿಯವರು ಭಾಷಿಕ ಕಲಾಕಾರರಾಗಿ ನಗರದ ಬದುಕಿನ ಸಂಕೀರ್ಣತೆಯನ್ನು ವಿವಿಧ ಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಅದರ ವಿಶೇಷತೆಗಳನ್ನು ಓದುಗರಿಗೆ ಪರಿಚಯಿಸಿದ್ದಾರೆ. ಸೂಕ್ಷ್ಮ ಸಂವೇದಿಯಾದ ಬರಹಗಾರ ಇಂತಹ ಸೂಕ್ಷ್ಮ ಚಿತ್ರಗಳನ್ನು ಅನಾವರಣಗೊಳಿಸಬಲ್ಲ. ಈ ವಿಶೇಷತೆ ಕಾರಣವಾಗಿಯೇ ಅನೇಕ ಅಲಕ್ಷಿತರ ವ್ಯಕ್ತಿ ವಿಶಿಷ್ಟತೆಗಳ ನೆಲೆಗಳನ್ನು ಅವರ ಕತೆಗಳಲ್ಲಿ ಅನಾವರಣ ಗೊಳಿಸಿರುವುದನ್ನು ಗುರುತಿಸುವಂತಹುದಾಗಿದೆ.

ಪರಾಮರ್ಶನ ಗ್ರಂಥಗಳು

1)	ಜಯಂತ್ ಕಾಯ್ಕಿಣಿ ಕತೆಗಳು ಅ) ದಗಡೂ ಪರಬನ ಅಶ್ವಮೇಧ ಆ) ತೆರೆದಷ್ಟೇ ಬಾಗಿಲು ಇ) ಅಮೃತಬಳ್ಳಿ ಕಷಾಯ	ಅಂಕಿತ ಪುಸ್ತಕ (ಪ್ರಕಾಶಕರು) ವರ್ಷ –2015
2)	ತೂಫಾನ್ ಮೇಲ್	ಮಾರ್ಚ್ 4, 2012
3)	ಬಣ್ಣದ ಕಾಲು	2014
4)	ಚಾರ್ ಮಿನಾರ್	2014
5)	ಜಯಂತ್ ಕಾಯ್ಕಿಣಿಯವರ ಕಥನಾವರಣ (ಡಾ॥ ಮಮತಾ ರಾವ್)	2015 (ಅಂಕಿನ ಪುಸ್ತಕ)
6)	ಕಲೆಯ ದರ್ಶನ ಶಿವರಾಮ ಕಾರಂತರು	
7)	ಪಾತರದವರು ಶೈಲಜಾ ಹಿರೇಮಟ್	
8)	ಹೆಣ್ಣು ಮತ್ತು ಭಾಷೆ ಹೆಚ್.ಎಸ್ ಶ್ರೀ ಮತಿ	
9)	ಸ್ತ್ರೀವಾದಿ ಮನೋ ವಿಜ್ಞಾನ ಡಾ॥ ಇಂದಿರ ಜಯಪ್ರಕಾಶ್	
10)	ಕನ್ನಡ ಕಥನ ಸಾಹಿತ್ಯ ಸಣ್ಣಕತೆ ಅಮೂರ	